# ಅಧ್ಯಾಯ 2

# ಪೌಲನ ಸೇವೆ

## ಥೆಸಲೋನಿಕದಲ್ಲಿ ಮಾಡಿದ ತನ್ನ ಸೇವೆಯ ಬಗ್ಗೆ ಪೌಲನ ಸಮರ್ಥನೆ (2:1-12)

### ಆತನ ಸೇವೆಯ ಯಶಸ್ಸು (2:1-8)

**1ಸಹೋದರರೇ, ನಾವು ಸುಮ್ಮಸುಮ್ಮಗೆ ನಿಮ್ಮಲ್ಲಿಗೆ ಬರಲಿಲ್ಲವೆಂಬುದನ್ನೂ ನಿಮಗೆ
ತಿಳಿದಿರುವ 2ಪ್ರಕಾರ ನಮಗೆ ಫಿಲಿಪ್ಪಿ ಪಟ್ಟಣದಲ್ಲಿ ಹಿಂಸೆಯೂ ಅವಮಾನವೂ ಮೊದಲು ಸಂಭವಿಸಿದರೂ ನಾವು ನಮ್ಮ ದೇವರ ಮೂಲಕ ಧೈರ್ಯಗೊಂಡು ಬಹು ವಿರೋಧವನ್ನು ಅನುಭವಿಸುವವರಾಗಿ ನಿಮಗೆ ದೇವರ ಸುವಾರ್ತೆಯನ್ನು ತಿಳಿಸಿದೆವೆಂಬದನ್ನೂ ನೀವೇ ಬಲ್ಲಿರಿ.
3ಯಾಕೆಂದರೆ ನಮ್ಮ ಬೋಧನೆಯು ಅಬದ್ಧವಲ್ಲ, ಅಶುದ್ಧವಲ್ಲ, ಮೋಸವಲ್ಲ; ದೇವರು
ನಮ್ಮನ್ನು 4ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ.
5ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣ ಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ.
6ಇದಲ್ಲದೆ ನಾವು ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ.
7ತಾಯಿಯು ತನ್ನ ಮಕ್ಕಳನ್ನು ಪೋಷೊಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಾಲ್ಯದಿಂದ ನಡಕೊಂಡಿದ್ದೆವು.
8ನೀವು ನಮಗೆ ಅತಿ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವದಕ್ಕೆ ಸಂತೋಷಿಸುವವರಾದೆವು.**

**ವಚನ 1. ಬರುವಿಕೆ** ಎಂಬುದಕ್ಕಿರುವ ಗ್ರೀಕ್ ಪದ, εἴσοδος (*eisodos*) ಎಂಬುದು ಥೆಸಲೋನಿಕಕ್ಕೆ ಪೌಲನು "ಭೇಟಿ ಕೊಟ್ಟದ್ದನ್ನು" ಸೂಚಿಸುವದಾಗಿರುತ್ತದೆ (NIV). 1:9ರಲ್ಲಿ ಅದೇ ಪದವು "ಬರಮಾಡಿಕೊಳ್ಳುವಿಕೆ" ಎಂದು ಅನುವಾದಿಸಲ್ಪಟ್ಟಿರುತ್ತದೆ (NASB; NIV). ತಾನು ಈ ಸಹೋದರರ ಬಳಿಗೆ ಹೋಗುವದು ಅವರಿಗೆ ಪ್ರಯೋಜಕವಾಗಿತ್ತೆಂಬುದಾಗಿ

ಪೌಲನು ಹೇಳುತ್ತಾನೆ. ಆತನು ಇಲ್ಲಿ ಅವರು ಸಂದೇಶವನ್ನು ಬರಮಾಡಿಕೊಂಡದ್ದಕ್ಕಿಂತಲೂ ಅಧಿಕವಾಗಿ ತಾನು ಸಾರಿದ ಸುವಾರ್ತೆಯಲ್ಲಿನ ಶಕ್ತಿಯನ್ನು ಸೂಚಿಸಿ ಹೇಳುತ್ತಿದ್ದಾನೆ.[1] ಆತನ ಭೇಟಿಯನ್ನು ಉದ್ದೇಶಭರಿತವಾಗಿ ಮಾಡಿದ್ದು ಸುವಾರ್ತೆಯೇ ಆಗಿತ್ತು. ಪೌಲನು ಅವರೊಳಗೆ ಭೇಟಿಯನ್ನು ಕೊಟ್ಟಿದ್ದು **ಸುಮ್ಮಗೆ** ಆಗಿರಲಿಲ್ಲ ಎಂಬುದನ್ನು ಬೇರೆ ಯಾರಿಗಿಂತಲೂ ಥೆಸಲೋನಿಕದವರು ಚೆನ್ನಾಗಿ ಬಲ್ಲವರಾಗಿದ್ದರು. ಈ "ಸುಮ್ಮಗೆ" ಎಂಬ ಪದವು κενός (*kenos*) ಎಂಬದರಿಂದ ಅನುವಾದಿಸಲ್ಪಟ್ಟಿದ್ದು, "ಉದ್ದೇಶವಿಲ್ಲದೆ" ಅಥವಾ "ನಿಷ್ಪ್ರಯೋಜನಕರವಾಗಿ" ಎಂದರ್ಥವನ್ನು ಕೊಡುತ್ತದೆ. ಮತ್ತೊಂದು ಸಾರಿ, ಆತನು ಅವರನ್ನು **ಸಹೋದರರೇ** ಎಂದು ಕರೆದನು.

1:5ರಲ್ಲಿನ "ನಾವು ನಿಮ್ಮಲ್ಲಿದ್ದು ನಿಮಗೋಸ್ಕರ ಎಂಥವರಾಗಿ ವರ್ತಿಸಿದೆವೆಂಬುದನ್ನು ನೀವೂ ಬಲ್ಲಿರಿ" ಮತ್ತು **ನೀವೇ ಬಲ್ಲಿರಿ** ಎಂಬ ಪದಗುಚ್ಛಗಳ ಅರ್ಥವು ಪೌಲನು ಹಣಕ್ಕೋಸ್ಕರ ಸುವಾರ್ತೆಯನ್ನು ಸಾರುತ್ತಿದ್ದಾನೆಂಬದಾಗಿ (ಆ ದಿನಗಳಲ್ಲಿ ಅನೇಕರು ಮಾಡುತ್ತಿದ್ದ ಪ್ರಕಾರ) ಥೆಸಲೋನಿಕದಲ್ಲಿನ ಸುಳ್ಳು ಬೋಧಕರು ಕಲಿಸುತ್ತಿದ್ದರು ಎಂಬದಾಗಿರುತ್ತದೆ ಎಂದು ಕೆಲವರು ಭಾವಿಸಿಕೊಂಡಿರುತ್ತಾರೆ. ಪೌಲನು ಅದಕ್ಕೆ ಪ್ರತ್ಯುತ್ತರ ನೀಡುವವನಾಗಿ, "ಅವರು ಹೇಳುವದಕ್ಕೆ ಹೋಲಿಸಿದರೆ ನಾನು ಹೇಗೆ ಜೀವಿಸಿದೆ ಮತ್ತು ಬೋಧಿಸಿದೆನು ಎಂಬುದನ್ನು ನೀವು ಬಲ್ಲಿರಿ" ಎಂದು ಹೇಳಿದನು. ವಿಶೇಷವಾಗಿ ಮುಂದಿನ ವಚನಗಳು ಉದ್ದೇಶ ಮತ್ತು ಪೌಲನು ಅವರನ್ನು ಮೋಸಗೊಳಿಸುವದಕ್ಕೆ ಸಾರಿದನೋ ಅಥವಾ ಇಲ್ಲವೋ ಎಂಬ ಚರ್ಚೆಯನ್ನೊಳಗೊಂಡಿರುವದರಿಂದ, ಈ ವ್ಯಾಖ್ಯಾನವು ಸರಿಯಾಗಿರಬಹುದಾದ ಒಂದು ಉತ್ತಮ ಸಾಧ್ಯತೆಯಿರುತ್ತದೆ.

**ವಚನ 2.** ಥೆಸಲೋನಿಕಕ್ಕೆ ಹೋಗುವದಕ್ಕೆ ಸ್ವಲ್ಪ ಸಮಯದ ಮುಂಚೆಯಷ್ಟೆ, ಪೌಲನಿಗೆ **ಫಿಲಿಪ್ಪಿ ಪಟ್ಟಣದಲ್ಲಿ ಹಿಂಸೆಯೂ ಅವಮಾನವೂ** ಉಂಟಾಗಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 16:16-40). ಅದರಲ್ಲಿ ಚಡಿಗಳಿಂದ ಹೊಡೆತ ತಿಂದಿದ್ದು ಮತ್ತು ಸೆರೆಮನೆಗೆ ಹಾಕಲ್ಪಟ್ಟಿದ್ದು ಮತ್ತು ಕಾಲುಗಳಿಗೆ ಕೋಳವನ್ನು ಹಾಕಿದ್ದು ಸೇರಿರುತ್ತವೆ (ಅಪೊಸ್ತಲರ ಕೃತ್ಯಗಳು 16:23, 24). ಪೌಲನು ಇದೆಲ್ಲದರ ಕುರಿತಾಗಿ ಅವರಿಗೆ ಹೇಳಿದ್ದನಾದ್ದರಿಂದ-ಬಹುಶಃ ಆತನು ಅವರೊಂದಿಗೆ ಇದ್ದ ಸಮಯದಲ್ಲಿ-ಮುಂದೆ ಆತನು **ನಿಮಗೆ ತಿಳಿದಿರುವ ಪ್ರಕಾರ** ಎಂದು ಹೇಳಿದನು.

ಸ್ವಲ್ಪ ಕಾಲದ ಹಿಂದಷ್ಟೆ ಫಿಲಿಪ್ಪಿಯಲ್ಲಿ ಹಿಂಸೆಯನ್ನು ಅನುಭವಿಸಿದ್ದಾಗ್ಯೂ, ಪೌಲ ಮತ್ತು ಆತನ ಜೊತೆಗೆಲಸದವರು **ಧೈರ್ಯಗೊಂಡು** ("ಅವರು ಧೈರ್ಯದಿಂದಿದ್ದರು"; KJV) **ದೇವರ ಸುವಾರ್ತೆಯನ್ನು** ಸಾರಿದರು (1:5ರ ಮೇಲಿನ ಚರ್ಚೆಯನ್ನು ನೋಡಿರಿ). "ಧೈರ್ಯಗೊಂಡು" ಎಂಬುದನ್ನು παρρησιάζομαι (*parrēsiazomai*) ಎಂಬ ಗ್ರೀಕ್ ಪದದಿಂದ ತೆಗೆದುಕೊಳ್ಳಲಾಗಿದ್ದು, ಅದು "ಒಬ್ಬನು ಮುಕ್ತವಾಗಿ ತನ್ನನ್ನು ವ್ಯಕ್ತಪಡಿಸಿಕೊಳ್ಳುವದು" ಎಂಬರ್ಥವನ್ನು ಕೊಡುತ್ತದೆ.[2] ಥೆಸಲೋನಿಕದಲ್ಲಿ ಪೌಲ ಮತ್ತು ಬೇರೆಯವರು ಸಹ **ಬಹು ವಿರೋಧವನ್ನು** ಎದುರಿಸಿದ್ದರು. "ವಿರೋಧ" ಎಂಬುದು ἀγών (*agōn*) ಎಂಬ ಗ್ರೀಕ್ ಪದದಿಂದ ಬಂದದ್ದು. "*Agōn*ವು . . . ಗ್ರೀಕ್ ಕ್ರೀಡೆಗಳಲ್ಲಿ ಪೈಪೋಟಿಯನ್ನು ಬಣ್ಣಿಸುವದಾಗಿತ್ತು."[3] ಅದು "ಫಿಲಿಪ್ಪಿ 1:30ರಲ್ಲಿರುವಂತೆ ಬಾಹ್ಯದ ಹೋರಾಟವನ್ನು ಅಥವಾ

(ಕೊಲೊಸ್ಸೆ 2:1[ರಲ್ಲಿ ಇರುವ ಪ್ರಕಾರ]) ಆಂತರಿಕ ಹೋರಾಟವನ್ನು ಸೂಚಿಸಲು"[4] ಬಳಸಲ್ಪಡುತ್ತದೆ. ಸನ್ನಿವೇಶದಲ್ಲಿ ಗಮನಿಸುವ ಪ್ರಕಾರ, ಪೌಲನು ಹೆಚ್ಚಾಗಿ ಹೊರಗಿನ ಹೋರಾಟವನ್ನು ಸೂಚಿಸುತ್ತಿದ್ದಾನೆ.

ಪೌಲನು ಈ ಕೆಳಗಿನ ಪ್ರಕಾರ ವಾದವನ್ನು ಮಾಡಿದನು: ಆತನು ಹಾಗೂ ಆತನ ಸಂಗಡಿಗರು ಅಪ್ರಾಮಾಣಿಕರಾಗಿದ್ದರೆ, ಈ ವಿರೋಧವನ್ನು ಎದುರಿಸುವಾಗ ಅವರು ತಟಸ್ಥರಾಗುತ್ತಿದ್ದರು. ಅವರು ತಮ್ಮ ಬೋಧನೆಯನ್ನು ನಿಲ್ಲಿಸಿ ತಟಸ್ಥರಾಗಲಿಲ್ಲವಾದ್ದರಿಂದ, ಅವರು ಪ್ರಾಮಾಣಿಕತೆಯುಳ್ಳ ಉದ್ದೇಶ ಹೊಂದಿದ್ದರು ಎಂಬ ತಾರ್ಕಿಕವಾದ ಮುಕ್ತಾಯಕ್ಕೆ ಬರಬಹುದು. ಅವರು [ತಮ್ಮ] **ದೇವರ ಮೂಲಕ** ಧೈರ್ಯಗೊಂಡದ್ದರಿಂದಲೇ ಮುನ್ನಡೆಯುವದಕ್ಕೆ ಶಕ್ತರಾಗಿದ್ದರು. ಆತನು ಅವರಿಗೆ ಅದನ್ನೆಲ್ಲಾ ಸಾಧ್ಯಗೊಳಿಸಿದನು, ಅದೇ ರೀತಿಯಲ್ಲಿಯೇ ಆತನು ಇಂದು ನಮಗೆ ಮಾಡುವವನಾಗಿದ್ದಾನೆ (ಮತ್ತಾಯ 28:20; 2 ಥೆಸಲೋನಿಕ 3:16).

**ವಚನ 3.** ಥೆಸಲೋನಿಕದಲ್ಲಿನ ಸುಳ್ಳು ಬೋಧಕರು ಆತನ ಮೇಲೆ ಮಾಡಿರಬಹುದಾಗಿದ್ದ ಸುಳ್ಳು ಆರೋಪಗಳಲ್ಲಿನ ನಿರ್ದಿಷ್ಟವಾದ ವಿಷಯಗಳಿಗೆ ಪೌಲನು ಉತ್ತರವನ್ನು ನೀಡುವದಕ್ಕಾರಂಭಿಸುತ್ತಾನೆ (ವ. 1ರ ಮೇಲಿನ ಚರ್ಚೆಯನ್ನು ನೋಡಿರಿ). ಈ ಬೋಧಕರು "ಅಬದ್ಧ," "ಅಶುದ್ಧ," ಮತ್ತು "ಮೋಸ" ಮಾಡಿದ ದೋಷಿಗಳಾಗಿರುವ ಸಾಧ್ಯತೆಯಿದ್ದು ಅವರು ಪೌಲನ ಮೇಲೆ ಅದೇ ಆರೋಪಗಳನ್ನು ಮಾಡಿದರು.

**ಬೋಧನೆ** (ಬುದ್ಧಿವಾದ) ಎಂಬುದು παράκλησις (*paraklēsis*) ಎಂಬ ಗ್ರೀಕ್ ಪದದಿಂದ ಬರುತ್ತದೆ ಮತ್ತು NIVಯಲ್ಲಿ ಅದು "ಮನವಿ ಮಾಡು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಅದು παρακαλέω (*parakaleō*) ಎಂಬುದರ ನಾಮಪದ ರೂಪವಾಗಿದ್ದು, ಅದು 3:2ರಲ್ಲಿ "ಪ್ರಬೋಧಿಸು" ಎಂದು ಅನುವಾದಿಸಲ್ಪಟ್ಟಿದೆ. ಅದು ಪೌಲನು ಥೆಸಲೋನಿಕದಲ್ಲಿ ಸಾರಿದ ಸಂದೇಶವನ್ನು ಸೂಚಿಸುತ್ತದೆ. ಪೌಲನು "ನಾವು ಮಾಡಿದ ಪ್ರಬೊಧನೆಯು" (NIV) **ಅಬದ್ಧವಲ್ಲ** ಅಥವಾ **ಅಶುದ್ಧವಲ್ಲ** ಅಥವಾ **ಮೋಸವಲ್ಲ** ಎಂದು ಹೇಳಿದನು. "ಅಬದ್ಧ" ಎಂದರೆ ಸರಿಯಲ್ಲದ ಸಿದ್ಧಾಂತ ಎಂಬ ಅರ್ಥವನ್ನು ಸೂಚಿಸುವಂತೆ ತೋರುತ್ತದೆ (2 ಥೆಸಲೋನಿಕ 2:11). ಅಷ್ಟುಮಾತ್ರವಲ್ಲದೆ, ಆತನು ಬಹುಶಃ ಕೊರಿಂಥದಲ್ಲಿರುವ Aphroditeನ ದೇವಾಲಯದಂಥ ವಿಗ್ರಹಾರಾಧಕ ಜನಾಂಗದ ದೇವಾಲಯಗಳನ್ನು ಸುತ್ತುವರೆದಿರುತ್ತಿದ್ದ ರೀತಿಯ ಅನೈತಿಕವಾದ ಲೈಂಗಿಕ ಚಟುವಟಿಕೆಗಳಂತಹ ನೈತಿಕ ಅಶುದ್ಧತೆಯನ್ನು ಸೂಚಿಸಿ ಹೇಳಿರಬಹುದಾಗಿದೆ. ಕ್ರೈಸ್ತರು ಅಂತಹ ಉದ್ದೇಶಗಳಿಂದ ಪ್ರೇರಿತರಾಗಿರುತ್ತಿದ್ದರೆಂಬದಾಗಿ ಯೆಹೂದ್ಯರು ಆಗಾಗ್ಗೆ ಆರೋಪಿಸುತ್ತಿದ್ದರು. ತನ್ನ ಸಂದೇಶವು "ಮೋಸ" ಅಥವಾ "ವಂಚನೆ" (RSV) ದಿಂದ ಬರಲಿಲ್ಲ ಎಂಬದನ್ನು ಪೌಲನು ಸ್ಪಷ್ಟಗೊಳಿಸಲು ಬಯಸಿದನು. "ಮೋಸ" ಎಂಬ ಪದವು δόλος (*dolos*) ಎಂಬದರಿಂದ ಬರುತ್ತದೆ, ಅದು "ಕೌಶಲತೆ ಅಥವಾ ಒಳಸಂಚಿನಿಂದ ಕೂಡಿದ ವಿಧಾನಗಳಿಂದ ಲಾಭವನ್ನು ಪಡೆದುಕೊಳ್ಳುವಿಕೆ"[5] ಎಂಬ ಅರ್ಥವನ್ನು ಕೊಡುತ್ತದೆ. ಅಂಥ ಸಂಗತಿಗಳು ತಮ್ಮ ಶ್ರೋತೃಗಳಿಂದ ಸಂಪಾದಿಸಿಕೊಂಡು ಜೀವನ ಮಾಡುತ್ತಿದ್ದಂಥ ಅನೇಕ ಪರ್ಯಟನಕಾರಿ ಬೋಧಕರ ಗುಣಸ್ವಭಾವಗಳಾಗಿದ್ದವು, ಅವರು ಬಹಳಷ್ಟು ಮಟ್ಟಿಗೆ

ನಿರಂತರವಾಗಿ ಹಣವನ್ನು ಬೇಡುವಂಥಹ ಇಂದಿನ ಟಿವಿ ಸುವಾರ್ತಿಕರಂತಿದ್ದರು.

ಪೌಲನು ಹೀಗೆ ಹೇಳುವವನಾಗಿದ್ದನು, "ನಮ್ಮ ಉದ್ದೇಶಗಳು ಇವುಗಳಾಗಿರುವ*ದಿಲ್ಲ*," ಮತ್ತು "ಇದು ಸತ್ಯವೆಂಬುದು ಸ್ವತಃ ನಿಮಗೇ ಗೊತ್ತಿದೆ" ಎಂಬ ಸೂಚ್ಯಾರ್ಥವನ್ನು ನೀಡುತ್ತಾನೆ.

**ವಚನ 4.** ಪೌಲ ಮತ್ತು ಆತನ ಸಹಚರರು ಅವರ ಮೇಲೆ ಆರೋಪಿಸಲಾಗಿದ್ದ ಯಾವದನ್ನೂ ಮಾಡಿರಲಿಲ್ಲ (ವ. 3); ಬದಲಾಗಿ, ಅವರು (ಸಕಾರಾತ್ಮಕವಾದದ್ದನ್ನು) **ದೇವರಿಂದ ಯೋಗ್ಯರೆಂದೆಣಿಸಲ್ಪಟ್ಟವರಾಗಿ ಮಾತಾಡಿದರು.** "ಯೋಗ್ಯರೆಂದೆಣಿಸಿ" ಎಂಬುದು δοκιμάζω (*dokimazō*) ಎಂಬ ಗ್ರೀಕ್ ಪದದಿಂದ ಬರುತ್ತದೆ, ಅದೊಂದು ಹಳೇ ಕ್ರಿಯಾಪದವಾಗಿದ್ದು "ಪರೀಕ್ಷೆಗೊಳಪಡಿಸು" ಎಂದರ್ಥವನ್ನು ಕೊಡುತ್ತದೆ. ಬಳಸಲ್ಪಟ್ಟ ಕಾಲರೂಪವು ಒಂದು "ಪೂರ್ತಿಗೊಂಡ ಸ್ಥಿತಿಯನ್ನು"[6] ಸೂಚಿಸುತ್ತದೆ, ಅಂದರೆ "ಪರೀಕ್ಷಿಸಲ್ಪಟ್ಟು ಸಾಭಿತುಗೊಂಡವರು" ಎಂದರ್ಥವಾಗಿರುತ್ತದೆ, ಹೀಗೆ ಅವರು ದೇವರ ಸಂದೇಶವನ್ನು ಸಾರುವದಕ್ಕೆ ಆತನಿಂದ ಯೋಗ್ಯರೆಂದೆಣಿಸಲ್ಪಟ್ಟವರಾಗಿ ನಿಂತಿದ್ದರು ಎಂಬದೆ (ನೋಡಿರಿ 1 ಸಮುವೇಲ 16:7). ಪೌಲನ ತಾತ್ಪರ್ಯವು ಏನಾಗಿತ್ತೆಂದರೆ ಆತನ ಕೆಲಸ ಮತ್ತು ಸಂದೇಶವು ಪರೀಕ್ಷೆಗೊಳಪಟ್ಟು ಅನುಮೋದಿಸಲ್ಪಟ್ಟಿದ್ದೆ ಎಂಬದೆ (ನೋಡಿರಿ 5:21, ಅಲ್ಲಿ ಆ ಪದವು NIVಯಲ್ಲಿ "ಪರೀಕ್ಷೆ" ಎಂದು ಅನುವಾದಿಸಲ್ಪಟ್ಟಿದೆ). ಆ ಪರೀಕ್ಷೆಯು ಯಾವ ತಪ್ಪುಗಳನ್ನು ಮಾಡದವನಾಗಿರುವ ದೇವರಿಂದ ನಡಿಸಲ್ಪಟ್ಟಿತ್ತು. ಪೌಲನ ಉದ್ದೇಶಗಳು ಆಶುದ್ಧವಾಗಿರುವ ಸಾಧ್ಯತೆಯು ಬಹಳ ವಿರಳವಾಗಿತ್ತು.

ದೇವರು ಪೌಲನಿಗೆ ಮತ್ತು ಆತನಂತಿರುವ ಬೇರೆಯವರಿಗೆ ಸುವಾರ್ತೆಯ ಸಂದೇಶವನ್ನು **ವಶಕ್ಕೆ ಒಪ್ಪಿಸಿದ್ದನು** (ನೋಡಿರಿ ರೋಮಾ 1:1). ವಾಸ್ತವದಲ್ಲಿ, ಪೌಲನ ಮೇಲೆ ಎಂದಿಗೂ ಕುತಂತ್ರ ಮಾಡುವವನು ಎಂಬ ಆರೋಪವನ್ನು ಹೊರಿಸುವದಕ್ಕೆ ಸಾಧ್ಯವೇ ಇರಲಿಲ್ಲ, ಯಾಕೆಂದರೆ ಆತನು **ಮನುಷ್ಯರನ್ನು ಮೆಚ್ಚಿಸಬೇಕೆಂಬ** ಪ್ರಯತ್ನವನ್ನೇ ಮಾಡಲಿಲ್ಲ; ಬದಲಾಗಿ, ಆತನು **ಹೃದಯವನ್ನು ಪರಿಶೋಧಿರುವ ದೇವರ** ಕೃಪಾಕಟಾಕ್ಷವನ್ನೇ ಕೋರಿದನು (ನೋಡಿರಿ ಯೆರೆಮೀಯ 11:20). ಮನುಷ್ಯರು ತನ್ನ ಮೇಲೆ ಮಾಡಿದ ದೋಷಿಯೆಂಬ ತೀರ್ಪುಗಳ ಕುರಿತಾಗಿ ಪೌಲನು ಅಷ್ಟಾಗಿ ಗಮನವನ್ನು ಕೊಡಲಿಲ್ಲ, ಆದರೆ ಆತನು ತನ್ನ ದೇವರ ಮುಂಭಾಗದಲ್ಲಿ ನಿಂತುಕೊಳ್ಳುವದಕ್ಕೆ ಸಿದ್ಧನಿದ್ದನು (ನೋಡಿರಿ 1 ಕೊರಿಂಥ 4:5).

**ವಚನ 5.** ತಾನಾಗಲಿ ತನ್ನ ಸಂಗಡಿಗರಾಗಲಿ ಥೆಸಲೋನಿಕದವರಿಗೆ **ಮುಖಸ್ತುತಿಯನ್ನು** ಮಾಡಿದರು ಎಂಬದನ್ನು ಪೌಲನು ನಿರಾಕರಿಸುತ್ತಾನೆ. "ಮುಖಸ್ತುತಿ" ಎಂದರೆ ನೆಲೆಗಟ್ಟಿನ ಉದ್ದೇಶಗಳಿಗಾಗಿ ಪ್ರಾಮಾಣಿಕತೆಯಿಂದ ನಂಬದಂಥಹ ಹೊಗಳಿಕೆಯ ಮಾತುಗಳನ್ನಾಡುವದು ಎಂದರ್ಥವಾಗಿದೆ. ಕೆಲವು ಬೋಧಕರು ತಮಗೆ ಸಹೋದರರ ಬೆಂಬಲ ಸಿಕ್ಕಬೇಕೆಂಬುದಕ್ಕಾಗಿ, ಅಥವಾ ತಾವು ದೊಡ್ಡ ಪ್ರಸಂಗಿಗಳು ಎಂದು ಹೊಗಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಆ ರೀತಿಯಲ್ಲಿ ಮಾಡಿರಬಹುದಾಗಿತ್ತು. ನಾವು ಮನಸಾರೆ ಭಾವಿಸಿಕೊಳ್ಳದ ಮಾತುಗಳನ್ನಾಡದಂತೆ ನಮ್ಮಲ್ಲಿ ಪ್ರತಿಯೊಬ್ಬರು ಜಾಗರೂಕರಾಗಿರತಕ್ಕದ್ದು. ಒಬ್ಬ ಸಹೋದರನು ನಿಮಗೆ ಒಂದು ವಿವಾದದ ಕುರಿತು

ಅಭಿಪ್ರಾಯವನ್ನು ಕೇಳಿದರೆ, ವಾಸ್ತವದಲ್ಲಿ ನಿಮ್ಮ ಅಭಿಪ್ರಾಯವು ಅವನ ಅಭಿಪ್ರಾಯಕ್ಕಿಂತ ಭಿನ್ನವಾಗಿದ್ದಾಗ್ಯೂ, ಕೇವಲ ಆತನಿಗೆ ನೀವು ಆಪ್ತವಾದವರು ಎಂಬ ಒಂದೇ ಕಾರಣಕ್ಕಾಗಿ ಆತನೊಂದಿಗೆ ಒಮ್ಮತವನ್ನು ಸೂಚಿಸುವಿರೋ? ಅಂತಹದ್ದು ಮುಖಸ್ತುತಿಯಾಗುವದು. ಅದನ್ನು ಬಳಸುವ ಮೂಲಕ, ನಾವು ಅಪ್ರಾಮಾಣಿಕರಾಗುತ್ತೇವೆ ಮತ್ತು ನಮ್ಮ ಸಹೋದರರಿಗೆ ಹಾನಿಯನ್ನುಂಟು ಮಾಡುತ್ತೇವೆ.

**ದ್ರವ್ಯಾಶೆಯನ್ನು** (ಲೋಭ) **ಮರೆಮಾಡುವದಕ್ಕಾಗಿ** ಎಂಬ ಪದಗುಚ್ಛದಲ್ಲಿ, "ಮರೆಮಾಡುವದಕ್ಕಾಗಿ" ಎಂಬುದು ಗ್ರೀಕ್ ನ πρόφασις (*prophasis*) ಎಂಬ ಪದದಿಂದ ಬರುತ್ತದೆ. "ಬೇರೊಂದು ಕಡೆಯಲ್ಲಿ (ಅಪೊಸ್ತಲರ ಕೃತ್ಯಗಳು 27:30; ಲೂಕ 20:47; ಫಿಲಿಪ್ಪಿ 1:18) ಈ ಪದವನ್ನು ಬಳಸಿಸುವದು ಸೂಚಿಸುವದೇನೆಂದರೆ ಒಂದು ನಿಜವಾದ ಉದ್ದೇಶವನ್ನು ಮರೆಮಾಡಿಕೊಳ್ಳುವದಕ್ಕೆ ಒಂದು ಸುಳ್ಳಾದ ಕಾರಣವನ್ನು ಮುಂದಿಡುವದು ಅಥವಾ ಒಂದು ಸೋಗಿನ ನಡವಳಿಕೆಯನ್ನು ಮುಂದಿಡುವದು ಎಂಬದೆ."[7] ತಾನು ಹಾಗೂ ತನ್ನ ಜೊತೆಗೆಲಸದವರು ಲೋಭದ ನಿಮಿತ್ತವಾಗಿ ಬಂದವರಲ್ಲ, ಅಥವಾ ಅವರು ಅದನ್ನು ಒಂದು "ಭಕ್ತಿಯುಳ್ಳ ಕಾಳಜಿಯ" ವೇಷವನ್ನು ಹಾಕಿಕೊಳ್ಳುವವರಾಗಿ ಮರೆಮಾಡುವದಕ್ಕೆ ಪ್ರಯತ್ನಿಸಲಿಲ್ಲ ಎಂಬುದನ್ನು ಪೌಲನು ಸ್ಪಷ್ಟಗೊಳಿಸುತ್ತಾನೆ.

"ದ್ರವ್ಯಾಶೆಯನ್ನು ಮರೆಮಾಡುವದಕ್ಕೆ" ಎಂಬುದು ಮುಖಸ್ತುತಿಯ ಮುಂದುವರಿಕೆ ಆಗಿದ್ದು ಅದರಲ್ಲಿ ಒಬ್ಬ ವ್ಯಕ್ತಿಯು ತನ್ನ ನಿಜವಾದ ಉದ್ದೇಶವನ್ನು ಮರೆಮಾಡುತ್ತಾನೆ ಅಥವಾ ಮುಖವಾಡ ಹಾಕುತ್ತಾನೆ. ತಾನು ಥೆಸಲೋನಿಕದವರನ್ನು ಪ್ರಾಮಾಣಿಕವಾಗಿ ಶ್ಲಾಘಿಸಿದ್ದು ಲೋಭದ ನಿಮಿತ್ತದಿಂದಲೇ ಎಂಬ ಆರೋಪಕ್ಕೆ ಪೌಲನು ಸೂಕ್ಷ್ಮ ಸಂವೇದನೆ ಹೊಂದಿದ್ದನು. "ದ್ರವ್ಯಾಶೆ" (ಲೋಭ) ಎಂಬುದು ಭೌತಿಕ ಲಾಭಗಳಿಗಾಗಿ ಇರುವ ಒಂದು ವಿಪರೀತವಾದ ಇಚ್ಛೆಯಾಗಿರುತ್ತದೆ. ಅದರಿಂದ ಜನರು ಅದನ್ನು ಗಳಿಸಿಕೊಳ್ಳುವದಕ್ಕೆ ಏನು ಬೇಕಾದರೂ ಮಾಡುವದಕ್ಕೆ ಕಾರಣವಾಗುತ್ತದೆ. ಅವರು ಥೆಸಲೋನಿಕಕ್ಕೆ ಬಂದಿರುವದಕ್ಕೆ ಈ ಇಚ್ಛೆಯು ಕಾರಣವಾಗಿರಲಿಲ್ಲ ಎಂದು ಪೌಲನು ಹೇಳುತ್ತಾನೆ. ಅವರ ಪರವಾಗಿ **ದೇವರೇ ಸಾಕ್ಷಿ** ಆಗಿದ್ದನು (ಇಬ್ರಿಯ 6:18; 1 ಯೋಹಾನ 5:9). ಇದೆಲ್ಲವೂ ಪೌಲನಿಗೆ ಅಶುದ್ಧವಾದ ಉದ್ದೇಶಗಳಿರುತ್ತವೆಂದು ಕೆಲವರು ಆರೋಪಿಸಿದ್ದರು ಎಂಬ ಸನ್ನಿವೇಶದಲ್ಲಿ ಹೇಳಲ್ಪಟ್ಟಿರುತ್ತದೆಂಬುದು ಸ್ಪಷ್ಟವಾಗಿ ತೋರುತ್ತದೆ (ವ. 1).

**ವಚನ 6.** ಲೋಭವನ್ನು ತನ್ನ ಉದ್ದೇಶವಾಗಿಟ್ಟುಕೊಳ್ಳುವದರಿಂದ ಬಹು ದೂರವಾಗಿದ್ದ, ಪೌಲನು ತಾನು **ಮನುಷ್ಯರಿಂದ**, ಅಂದರೆ ಥೆಸಲೋನಿಕದವರಿಂದ **ಬರುವ ಮಾನ** ("ಸ್ತುತಿ"; NIV) ಅಪೇಕ್ಷಿಸಲಿಲ್ಲ ಎಂದು ಹೇಳುತ್ತಾನೆ. ಆತನು ತಾನು ಅಪೊಸ್ತಲನಾಗಿರುವದರಿಂದ **ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ** (ಅಧಿಕಾರ), ಆತನು ಅದನ್ನು **ಇತರರಿಂದಾಗಲಿ** ಸಹ ಅಪೇಕ್ಷಿಸಲಿಲ್ಲ. "ಅಧಿಕಾರ" ಎಂಬುದು ಗ್ರೀಕ್ ನ βάρος (*baros*) ಎಂಬ ಪದದಿಂದ ತೆಗೆದುಕೊಳ್ಳಲ್ಪಟ್ಟಿದೆ. ಭಾಷೆಯು ಜಾತಿವಿಶಿಷ್ಟವಾಗಿದ್ದು ಬಿರುಸಾದ ಆಜ್ಞೆಗಳನ್ನು ಕೊಡುವಿಕೆ ಎಂಬ ಅರ್ಥವಾಗಿರುತ್ತದೆ. ಅದು ಹಣ ಕಟ್ಟುವ ಅಗತ್ಯವನ್ನು ಕೋರುವ "ಭಾರ ಹಾಕುವದು" ಎಂದರ್ಥವಾಗಿರುತ್ತದೆಂದು ಇನ್ನು ಕೆಲವರು ಅಭಿಪ್ರಾಯ ಪಡುತ್ತಾರೆ (2:9). NIV ಮತ್ತು NASBಯಲ್ಲಿರುವ ಅಡಿಟಿಪ್ಪಣಿಯು βάρος (*baros*) ಎಂಬ

ಪದಕ್ಕೆ "ಭಾರ" ಅಥವಾ "ಹೊರೆಯಾಗುವದು" ಎಂಬದರ ಪರ್ಯಾಯ ಅನುವಾದವನ್ನು ಒದಗಿಸುತ್ತದೆ. ಅದು ಆಜ್ಞೆಗಳನ್ನು ಕೊಡುವದಕ್ಕೆ ಅಪೊಸ್ತಲರಿಗಿರುವ ಅಧಿಕಾರವನ್ನು ಸೂಚಿಸುತ್ತದೆಂದು I. Howard Marshall ಅಭಿಪ್ರಾಯ ಪಡುತ್ತಾನೆ.[8] **ಅಪೊಸ್ತಲರಾಗಿರುವದರಿಂದ** ಎಂಬುದು ಬಹುವಚನದಲ್ಲಿರುತ್ತದೆ, "ಕಳುಹಿಸಲ್ಪಟ್ಟವನು" ಎಂಬುದರ ಒಂದು ವಿಸ್ತಾರವಾದ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ. ತಿಮೊಥೆ ಮತ್ತು ಸೀಲರು ದೇವರಿಂದ ಆದೇಶಿಸಲ್ಪಟ್ಟವರು ಎಂಬ ಅರ್ಥದಲ್ಲಿ "ಅಪೊಸ್ತಲರು" ಆಗಿದ್ದರು (ಅಪೊಸ್ತಲರ ಕೃತ್ಯಗಳು 14:14ರೊಂದಿಗೆ ಹೋಲಿಸಿರಿ).[9]

**ವಚನ 7.** ಥೆಸಲೋನಿಕದವರು ತನಗಾಗಲಿ ಮತ್ತು ತನ್ನ ಜೊತೆಗೆಲಸದವರ ಮೇಲಾಗಲಿ ಭಾರವಾಗಿರಲಿಲ್ಲ ಎಂದು ಹೇಳಿದನು; ಬದಲಾಗಿ, ಪೌಲನು [ಅವರ ಕಡೆಗೆ] **ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ . . . ವಾತ್ಸಲ್ಯದಿಂದ ನಡೆದುಕೊಂಡನು.** "ವಾತ್ಸಲ್ಯ" ಎಂಬುದಕ್ಕೆ ಇಲ್ಲಿ ಗ್ರೀಕ್ ಪದವು νήπιος (*nēpios*) ಎಂದಾಗಿರುತ್ತದೆ ಮತ್ತು ಅದು "ಸೌಜನ್ಯಯುತ ಮನಸ್ಸು," ಸ್ನೇಹಪರತೆಯುಳ್ಳ ಒಬ್ಬ ವ್ಯಕ್ತಿ ಎಂಬ ಅರ್ಥವನ್ನು ಕೊಡುತ್ತದೆ.[10] "ತಾಯಿಯು ಮಕ್ಕಳನ್ನು ಪೋಷಿಸುತ್ತಾಳೋ" ಎಂಬ ಪದಗಳು τροφός (*trophos*) ಎಂಬ ಪದದಿಂದ ಬಂದಿರುತ್ತವೆ, ಅದು "ಆರೈಕೆಮಾಡು" ಎಂದರ್ಥವನ್ನಷ್ಟೆ ಹೊಂದಿರುತ್ತದೆ. ಇಲ್ಲಿ ಹೇಳಲ್ಪಟ್ಟಿರುವ ಮಕ್ಕಳು "ಆಕೆಯ ಸ್ವಂತ (ತನ್ನ)" ಆಗಿರುವದರಿಂದ, "ಪೋಷಿಸುವ ತಾಯಿ" ಎಂಬುದು ಉತ್ತಮ ಭಾವಾನುವಾದವಾಗಿ ರುತ್ತದೆ. "ಪೋಷಣೆ" ಎಂಬುದು ಗ್ರೀಕ್ ನ θάλπω (*thalpō*) ಎಂಬ ಪದದಿಂದ ಬಂದದ್ದು, ಅದು ಒಂದು ಬಲವಾದ ಭಾವನಾತ್ಮಕ ಬಂಧ ಎಂಬುದನ್ನು ಸೂಚಿಸುತ್ತದೆ. ಬೇರೊಂದು ಕಡೆಯಲ್ಲಿ, ಪೌಲನು ತನ್ನನ್ನು ಒಬ್ಬ ತಂದೆಗೆ ಹೋಲಿಸಿಕೊಳ್ಳುತ್ತಾನೆ (ವ. 11; 1 ಕೊರಿಂಥ 4:15), ಆದರೆ ಇಲ್ಲಿ ಪೌಲನು ಹೇಗೆ ತಾನು ಹಾಗೂ ತನ್ನ ಸಂಗಡಿಗರು ಹೆಚ್ಚಾಗಿ ಕೇಳುವವರಾಗಿರದೆ ಇರುವ ಮೂಲಕ ಅವರ ಮಧ್ಯದಲ್ಲಿ "ವಾತ್ಸಲ್ಯದಿಂದ" ನಡೆದುಕೊಂಡರು ಎಂಬುದನ್ನು ದೃಷ್ಟಾಂತಪಡಿಸುವದಕ್ಕಾಗಿ ತನ್ನನ್ನು ಒಬ್ಬ ತಾಯಿಗೆ ಹೋಲಿಸಿಕೊಳ್ಳುತ್ತಾನೆ. ಒಬ್ಬನಿಗೆ ಕಂಡುಕೊಳ್ಳುವದಕ್ಕೆ ಸಾಧ್ಯವಾಗಬಹುದಾದ ಅತ್ಯಂಥ ಕೋಮಲವಾದ ರೂಪಕವನ್ನು ಆತನು ಬಳಸಿದನು.[11]

**ವಚನ 8.** ಪೌಲನು **ದೇವರ ಸುವಾರ್ತೆಯನ್ನು** (ದೇವರಿಂದ ಬರುವಂಥ ಸಂಧಾನದ ಕುರಿತ ಒಂದು ಶುಭವಾರ್ತೆ) ಸಾರಿದನು, ಆದರೆ ಆತನು ತನ್ನ ಜೊತೆಯ ಯೆಹೂದ್ಯರಿಗೋಸ್ಕರವಾಗಿ ಪ್ರಾಣವನ್ನು ಕೊಟ್ಟಿರುತ್ತಿದ್ದ ರೀತಿಯಲ್ಲಿಯೇ (ರೋಮಾ 9:1-3), ಪೌಲ ಮತ್ತು ಆತನ ಸಂಗಡಿಗರು ಈ ಸಹೋದರರಿಗೋಸ್ಕರ ತಮ್ಮ **ಪ್ರಾಣವನ್ನೇ** ಕೊಡುವಷ್ಟರ ಮಟ್ಟಿಗೆ ಆಳವಾಗಿ ಅವರನ್ನು ಪ್ರೀತಿಸುವವರಾಗಿದ್ದರು. "ಪ್ರಾಣವನ್ನೇ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ ψυχή (*psuchē*) ಎಂಬುದಾಗಿರುತ್ತದೆ. "ಅರ್ಥವು 'ನಾವು ನಮ್ಮ ಪ್ರಾಣಗಳನ್ನು (ಅರ್ಪಿಸುವದಕ್ಕೆ) ಮನಸ್ಸುಳ್ಳವರಾಗಿದ್ದೇವೆ' ಎಂದಷ್ಟೆ ಆಗಿರುವದಿಲ್ಲ, ಆದರೆ 'ನಾವು ನಮ್ಮನ್ನು ನಿಮಗೆ ಅರ್ಪಿಸಿಕೊಳ್ಳಲು, ನಿಮ್ಮ ಇಷ್ಟದಂತೆ ನಡೆದುಕೊಳ್ಳುವದಕ್ಕೆ, ಯಾವದೇ ಸಂಕೋಚವಿಲ್ಲದವರಾಗಿ ಮನಸ್ಸುಳ್ಳವ ರಾಗಿದ್ದೇವೆ' ಎಂದಾಗಿರುತ್ತದೆ."[12] "ಅವರು ಏನನ್ನು ಹಿಂದಕ್ಕೆ ಹಿಡಿದಿಟ್ಟುಕೊಳ್ಳಲಿಲ್ಲ."[13] ಈ

ಅರ್ಪಣೆಯಲ್ಲಿ ಅಗತ್ಯವಿದ್ದರೆ ಅವರ ಪ್ರಾಣಗಳನ್ನು ಕೊಡುವದು ಸಹ ಸೇರಿರುತ್ತದೆ, ಆದರೆ ಅರ್ಥವು ವಿಶಾಲವಾಗಿರುತ್ತದೆ. ಇಲ್ಲಿ ಪೌಲನ ತೊಡಗಿಸಿಕೊಳ್ಳುವಿಕೆಯು ಕೇವಲ ಶೈಕ್ಷಣಿಕವಾದದ್ದಷ್ಟೆ ಆಗಿರಲಿಲ್ಲ, ಆದರೆ ಭಾವನಾತ್ಮಕವಾದದ್ದು ಸಹ ಆಗಿತ್ತು.

## ಆತನ ಸೇವೆಯ ಪ್ರಾಮಾಣಿಕತೆ (2:9-12)

**[9]ಸಹೋದರರೇ, ನಾವು ನಿಮ್ಮಲ್ಲಿ ಯಾರ ಮೇಲೆಯೂ ಭಾರಹಾಕಬಾರದೆಂದು ಹಗಲಿರುಳು ದುಡಿದು ಜೀವನ ಮಾಡಿಕೊಳ್ಳುತ್ತಾ ದೇವರ ಸುವಾರ್ತೆಯನ್ನು ನಿಮಗೆ ಸಾರಿದೆವು; ಆ ನಮ್ಮ ಕಷ್ಟವೂ ಪ್ರಯಾಸವೂ ನಿಮ್ಮ ನೆನಪಿನಲ್ಲಿರುವದಷ್ಟೆ. [10]ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬದಕ್ಕೆ ನೀವು ಸಾಕ್ಷಿಗಳು, ದೇವರೂ ಸಾಕ್ಷಿ. [11]ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬರಿಗೆ ಬುದ್ಧಿಹೇಳುತ್ತಾ [12]ಧೈರ್ಯಪಡಿಸುತ್ತಾ ತನ್ನ ರಾಜ್ಯಪ್ರಭಾವಗಳಲ್ಲಿ ಪಾಲುಗಾರರಾಗುವದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೆವೆಂಬದು ನಿಮಗೇ ತಿಳಿದದೆ.**

**ವಚನ 9.** ಈ ವಚನವು ನಮಗೆ 3ನೇ ವಚನವನ್ನು ನೆನಪಿಗೆ ತರುತ್ತದೆ, ಅಲ್ಲಿ ಪೌಲನ ಮೇಲೆ ಆತನು ಥೆಸಲೋನಿಕದವರನ್ನು “ಮೋಸ”ದಿಂದ ಒಳಪಡಿಸಿಕೊಳ್ಳಲು ಪ್ರಯತ್ನಿಸುವವನು ಎಂಬ ಆರೋಪವನ್ನು ಮಾಡಲಾಗಿತ್ತು. ಇಲ್ಲಿ, ತನ್ನನ್ನು ಮೌಲ್ಯಮಾಪನ ಮಾಡುವಂತೆ ಹಾಜರಿಲ್ಲದವರಿಗೆ ಅವಕಾಶವನ್ನು ಕೊಡುವದರ ಬದಲಾಗಿ, ಪೌಲನು ಅವರ **ಕಷ್ಟವೂ ಪ್ರಯಾಸವೂ ಸಹೋದರರೇ ನಿಮ್ಮ ನೆನಪಿನಲ್ಲಿರುವದಷ್ಟೆ** ಎಂಬದಾಗಿ ಹೇಳಿದನು. ಅವರು ಥೆಸಲೋನಿಕದವರ ಮೇಲೆ ಹಣಕಾಸಿನ **ಭಾರವನ್ನು ಹಾಕಬಾರದು** ಎಂಬ ಉದ್ದೇಶದಿಂದ ತಮ್ಮ ಜೀವನೋಪಾಯಕ್ಕಾಗಿ ಸ್ವತಃ ದುಡಿಯುತ್ತಿದ್ದರು (ಅಪೊಸ್ತಲರ ಕೃತ್ಯಗಳು 18:3; 2 ಥೆಸಲೋನಿಕ 3:7-10). ವಾಸ್ತವದಲ್ಲಿ, ಪೌಲನು ಸುವಾರ್ತಿಕ ಕೆಲಸವನ್ನು ಮಾಡುವದಕ್ಕೆ ಮತ್ತು ತನ್ನ ಆಹಾರವನ್ನು ಸಂಪಾದಿಸುವದಕ್ಕೆ **ಹಗಲಿರುಳು** ಪರಿಶ್ರಮದಲ್ಲಿ ನಿರತನಾಗಿದ್ದನು. “ಪ್ರಯಾಸ” ಎಂಬುದಕ್ಕೆ ಬಳಸಲ್ಪಟ್ಟಿರುವ ಗ್ರೀಕ್ ಪದವು Κόπος (*kopos*), ಅದು ಕಠಿಣವಾದ, ಬಳಲುವಂತೆ ಮಾಡುವ ಕೆಲಸವನ್ನು ವ್ಯಕ್ತಪಡಿಸುತ್ತದೆ, ಮತ್ತು “ಕಷ್ಟವೂ” ಎಂಬದಕ್ಕೆ ಬಳಸಲಾಗಿರುವ ಗ್ರೀಕ್ ಪದವು μόχθος (*mochthos*), ಅದು ನೋವಿನ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಎರಡೂ “ಹಗಲಿರುಳು ಎಂಬುದರ ಮೂಲಕ ಒತ್ತಿ ಹೇಳಲ್ಪಟ್ಟಿರುತ್ತವೆ ಎಂಬದರಲ್ಲಿ ಸಂಶಯವಿಲ್ಲ.”[14] ಅವರಿಂದ ಪ್ರಯೋಜನವನ್ನು ಪಡೆದುಕೊಳ್ಳುವದು ಪೌಲನ ಉದ್ದೇಶವು ಎಂಬುದನ್ನು ಯೋಚಿಸಿ ನೋಡುವದಾದರೆ, ಪೌಲನು ಅಷ್ಟೇನೂ ಉತ್ತಮ ಯಶಸ್ಸು ಕಂಡಿರಲಿಲ್ಲ.

**ವಚನ 10.** ಈ ಸಹೋದರರು ಹಿಂದಿನದನ್ನು ಯೋಚಿಸಿ ನೋಡುವದಾದರೆ ಅವರು ತನ್ನ ಪರವಾಗಿ ಚಾರಿತ್ರ್ಯ **ಸಾಕ್ಷಿಗಳಾ**ಗಿರಬೇಕಾಗುತ್ತದೆ ಮತ್ತು ಆತನು **ಶುದ್ಧವಾಗಿಯೂ** (ದೇವರ ಸೇವೆಗೆ ಸಮರ್ಪಣೆಯುಳ್ಳವನಾಗಿ), **ನೀತಿವಂತನಾಗಿಯೂ** (ದೇವರ ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಜೀವಿಸಿದನು), **ನಿರ್ದೋಷಿಯಾಗಿಯೂ** (ದೇವರ

ಧರ್ಮಶಾಸ್ತ್ರವನ್ನು ಅಸಡ್ಡೆ ಮಾಡಿದವನೆಂದು ನ್ಯಾಯವಾಗಿ ಆರೋಪಿಸಲ್ಪಡಂಥವನು) ಆಗಿದ್ದನೆಂಬದಾಗಿ ಅವರು ಹೇಳಬೇಕಾಗುತ್ತದೆ ಎಂದು ಪೌಲನು ಹೇಳಿದನು. "ನಿರ್ದೋಷಿಗಳಾಗಿಯೂ" (ἀμέμπτως, *amemptōs*) ಎಂಬುದು "ಶುದ್ಧರಾಗಿಯೂ" ಮತ್ತು "ನೀತಿವಂತರಾಗಿಯೂ" ಎಂಬ ಪದಗಳು ತಿಳಿಸುವದನ್ನೇ ಹೇಳುವದಾಗಿದೆ, ಆದರೆ ಒಂದು ನಕಾರಾತ್ಮಕ ದಾರಿಯಲ್ಲಿ ಹೇಳುವದಾಗಿರುತ್ತದೆ. ಒಬ್ಬ ನಿರ್ದೋಷಿಯಾದ ಮನುಷ್ಯನು ಯಾರೆಂದರೆ "ಒಂದು ಕೊಡಲ್ಪಟ್ಟ ನಿಬಂಧನೆಯ ಬೆಳಕಿನಲ್ಲಿ ಯಾರೂ ತಪ್ಪು ಹೊರಿಸುವದಕ್ಕಾಗದಂಥವನು ಎಂಬದೆ."[15]

ಇದು ಥೆಸಲೋನಿಕದವರ ಮಧ್ಯದಲ್ಲಿ ಅವನ ವರ್ತನೆಯ ಕುರಿತಾದ ಒಂದು ಸಾರಾಂಶವಾಗಿರುತ್ತದೆ. ಅವರು ಇದೆಲ್ಲದರ ಕುರಿತು ಸಾಕ್ಷಿಗಳಾಗಿದ್ದರು, ಮತ್ತು ಎಲ್ಲವನ್ನೂ ನೋಡುವಂಥ **ದೇವರೂ ಸಾಕ್ಷಿ**ಯಾಗಿದ್ದನು. ಅಲ್ಲಿರುವ ಕ್ರೈಸ್ತರು ಪುನಃ **ನಂಬುವವರಾದ** (ವಿಶ್ವಾಸಿಗಳು) ಎಂದು ಕರೆಯ್ಪಟ್ಟಿದ್ದಾರೆ.

**ವಚನ 11.** 7ನೇ ವಚನದಲ್ಲಿ, ತಾನು ಅವರಿಗೆ "ಒಬ್ಬ ತಾಯಿಯಂತೆ" ಎಂದು ಪೌಲನು ಹೇಳಿದನು, ಆದರೆ ಇಲ್ಲಿ ಆತನು **ತನ್ನ ಮಕ್ಕಳಿಗೆ ಬುದ್ಧಿಹೇಳುವ ತಂದೆಯ** ಚಿತ್ರಣವನ್ನು ಬಳಸುತ್ತಾನೆ. ಆತನು ಈ ಮುಂಚೆ ತಾನು ತೋರಿಸಿದ ವಾತ್ಸಾಲ್ಯವನ್ನು ಒತ್ತಿ ಹೇಳುವವನಾಗಿದ್ದನು, ಅದು ಬಹಳಷ್ಟು ಸಾರಿ ತಾಯಿಯ ಒಂದು ಗುಣಸ್ವಭಾವವಾಗಿರುತ್ತದೆ. ಇಲ್ಲಿ, ಆತನು ತಂದೆಯು ಮಾಡಬೇಕಾದ ಕೆಲಸಗಳನ್ನು ಒತ್ತಿ ಹೇಳುತ್ತಿದ್ದಾನೆ. ಒಂದು ಬಹು ಪರಿಚಿತವಾದ ಸಾದೃಶ್ಯವನ್ನು (ಒಂದು ಮಗುವಿನ ಪೋಷಕ) ಬಳಸುವ ಮೂಲಕ ಅವರಿಗೆ ತಾನು ಎಷ್ಟೊಂದು ಆಪ್ತವಾದ ಭಾವನೆಯನ್ನು ಹೊಂದಿದ್ದನು, ಮತ್ತು ತಾನು ಈ ಸಂಬಂಧವನ್ನು ಒಂದು ಗುಂಪಾಗಿ ಅವರೆಲ್ಲರ ಜೊತೆಯಲ್ಲಿ ಅಲ್ಲದೆ, **ಪ್ರತಿಯೊಬ್ಬನಿಗೆ** ಹೊಂದಿದ್ದನೆಂಬುದನ್ನು ಒತ್ತಿ ಹೇಳುತ್ತಿದ್ದಾನೆ. ಒಬ್ಬ ತಂದೆಯು ಮಾಡುವ ಪ್ರಕಾರವೇ, ಆತನು ಯಾವಾಗಲೂ **ಧೈರ್ಯಪಡಿಸುತ್ತಾ** ಇದ್ದನು, ಅಥವಾ ತನ್ನ ಮಕ್ಕಳ ವಿಷಯದಲ್ಲಿ ತನ್ನ ಹೃದಯವನ್ನು ತೊಡಗಿಸಿಕೊಂಡಿದ್ದನು. ಆತನು ನಿರಂತರವಾಗಿ **ಬುದ್ಧಿಹೇಳುತ್ತಿದ್ದನು** (ಒಬ್ಬನ ಪಕ್ಕದಲ್ಲಿದ್ದು, ಸಹಾಯ ಮಾಡುವದಕ್ಕೆ ಕರೆಯುವದು) ಮತ್ತು ದೇವರಿಗೆ ಯೋಗ್ಯವಾದ ಜೀವಿತಗಳನ್ನು ನಡಿಸುವಂತೆ ಅವರಿಗೆ **ಖಂಡಿತವಾಗಿ ಹೇಳುತ್ತಿದ್ದನು** (ವ. 12).

"ಖಂಡಿತವಾಗಿ ಹೇಳು" (ಅಂಗಲಾಚಿಸು) ಎಂಬುದು ಗ್ರೀಕ್‌ನ μαρτύρομαι (*marturomai*) ಎಂಬ ಪದದಿಂದ ಬಂದಿದ್ದು, "ಅದು ಒಂದು ಕ್ರಿಯಾಪದವಾಗಿದ್ದು ಅದರ ಸರಿಯಾದ ಅರ್ಥವು 'ಒಂದು ಸಾಕ್ಷಿಯನ್ನು ಮುಂದಕ್ಕೆ ಕರೆ' ಮತ್ತು ಹೀಗೆ 'ವಿಧ್ಯುಕ್ತವಾಗಿ ಘೋಷಿಸುವದು' (ಬಹುಶಃ ದೇವರನ್ನು ಸಾಕ್ಷಿಯಾಗಿ ಕರೆಯುವ ಯೋಚನೆಯೊಂದಿಗೆ). . . . ಇದು ಸೋಮಾರಿಗಳಿಗೆ ಅಥವಾ ಅಂಥವರಿಗೆ ಉದ್ದೇಶಿಸಿ ಹೇಳಿದಂಥ ಗಂಭೀರ ಮಾತುಗಳನ್ನು ಸೂಚಿಸಬಹುದಾಗಿದೆ."[16]

**ವಚನ 12.** ಪೌಲನು ಯಾರ ಬಗ್ಗೆ ಮಾತಾಡಿದನೋ ಆ ದೇವರು ನಿಮ್ಮನ್ನು **ತನ್ನ ರಾಜ್ಯದಲ್ಲಿ** (ಸಭೆ; ಮತ್ತಾಯ 16:18; ಕೊಲೊಸ್ಸೆ 1:13) **ಕರೆಯುವವನು** (ಆತನು ಎಲ್ಲಾ ಜನರನ್ನು ತನ್ನ ಸುವಾರ್ತೆಯ ಮೂಲಕ ಕರೆಯುತ್ತಾನೆ, 2 ಥೆಸಲೋನಿಕ 2:14). ನಾವು

ಆತನ ದೇಹವೆಂಬ ಸಭೆ "ಯಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಂಡಿರುತ್ತೇವೆ (ರೋಮಾ 6:3, 4; ಕೊಲೊಸ್ಸೆ 1:18). ಒಂದು ಅರ್ಥದಲ್ಲಿ, ಕ್ರೈಸ್ತರು ಭೂಮಿಯ ಮೇಲೆ ಕರ್ತನ ಪ್ರಭಾವವನ್ನು ಪ್ರತಿಬಿಂಬಿಸುವವರಾಗಿದ್ದಾರೆ (2 ಕೊರಿಂಥ 3:18), ಆದರೆ ನ್ಯಾಯತೀರ್ಪಿನ ನಂತರದಲ್ಲಿ ನಾವು ಇನ್ನಷ್ಟು ದೊಡ್ಡದಾದ ಪ್ರಭಾವದಲ್ಲಿ ಪಾಲುಗಾರರಾಗುವೆವು (ಕೊಲೊಸ್ಸೆ 3:4; 1 ಪೇತ್ರ 5:10).

## ಆತನ ಸೇವೆ ಮತ್ತು ಸಂದೇಶಕ್ಕೆ ಥೆಸಲೋನಿಕದವರ ಪ್ರತಿಕ್ರಿಯೆ (2:13-16)

**[13]ಹೀಗಿರಲಾಗಿ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿದಾಗ ಅದನ್ನು ಮನುಷ್ಯರ ವಾಕ್ಯವೆಂದೆಣಿಸದೆ ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಕ್ಕಾಗಿ ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿ ಮಾಡುತ್ತೇವೆ. ಅದು ನಿಜವಾಗಿ ದೇವರ ವಾಕ್ಯವೇ; ಅದು ನಂಬುವವರಾದ ನಿಮ್ಮೊಳಗೆ ಬಲವಾಗಿ ಕೆಲಸ ನಡಿಸುತ್ತದೆ. [14]ಹೌದು, ಸಹೋದರರೇ, ನೀವು ಯುದಾಯದಲ್ಲಿ ಕ್ರಿಸ್ತ ಯೇಸುವಿನಲ್ಲಿರುವ ದೇವರ ಸಭೆಗಳನ್ನು ಅನುಸರಿಸುವವರಾದಿರಿ. ಅವರು ಯೆಹೂದ್ಯರಿಂದ ಅನುಭವಿಸಿದಂಥ ಕಷ್ಟಗಳನ್ನು ನೀವೂ ನಿಮ್ಮ ಸ್ವದೇಶದವರಿಂದ ಅನುಭವಿಸಿದಿರಿ. [15]ಆ ಯೆಹೂದ್ಯರು ಕರ್ತನಾದ ಯೇಸುವನ್ನೂ ಪ್ರವಾದಿಗಳನ್ನೂ ಕೊಂದರು, ನಮ್ಮನ್ನೂ ಅಟ್ಟಿಬಿಟ್ಟರು; ಅವರು ದೇವರನ್ನು ಮೆಚ್ಚಿಸುವವರಲ್ಲ, ಎಲ್ಲಾ ಮನುಷ್ಯರಿಗೂ ವಿರೋಧಿಗಳಾಗಿದ್ದಾರೆ; [16]ಅನ್ಯಜನರಿಗೆ ರಕ್ಷಣೆಯಾಗುವಂತೆ ಸುವಾರ್ತೆಯನ್ನು ಹೇಳುವ ನಮಗೆ ಅಡ್ಡಿಮಾಡುತ್ತಾರೆ; ಹೀಗೆ ತಮ್ಮ ಪಾಪಕೃತ್ಯಗಳನ್ನು ಎಲ್ಲಾ ಕಾಲಗಳಲ್ಲಿಯೂ ಪರಿಪೂರ್ಣಮಾಡುವದಕ್ಕೆ ಹೋಗುತ್ತಾರೆ. ಆದರೆ ದೇವರ ಕೋಪವು ಅವರ ಮೇಲೆ ಸಂಪೂರ್ಣವಾಗುತ್ತಾ ಬಂತು.**

**ವಚನ 13.** ಪುನಃ, ಪೌಲನು ತಾನು **ಎಡೆಬಿಡದೆ** ದೇವರಿಗೆ **ಕೃತಜ್ಞತಾಸ್ತುತಿ** ಮಾಡುತ್ತಾನೆಂಬುದನ್ನು ಒತ್ತಿ ಹೇಳುತ್ತಾನೆ, ಮತ್ತು ಥೆಸಲೋನಿಕದವರು **ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದ್ದಾಗಿ** ಅವರಿಗೆ ತನ್ನ ಆಳವಾದ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾನೆ.

"[ಗ್ರೀಕ್] ಕ್ರಿಯಾಪದವಾಗಿರುವ [παραλαμβάνω] *paralambanō,* 'ಅಂಗೀಕರಿಸು,' ಮತ್ತು ಅದರ ಜೊತೆ ಬಳಕೆಯ ಪದವಾದ [παραδίδωμι] *paradidōmi*, 'ಹಸ್ತಾಂತರಿಸು,' ಎಂಬವುಗಳು ಸ್ಪಷ್ಟವಾಗಿರುವ ಪ್ರಕಾರ ಕ್ರೈಸ್ತ ನಂಬಿಕೆಯನ್ನು ಸ್ವೀಕರಿಸಿಕೊಳ್ಳುವದು ಮತ್ತು ಪ್ರಸರಣೆ ಮಾಡುವದನ್ನು ಸೂಚಿಸುವದಕ್ಕೆ ಬಳಸುವ ಹೆಚ್ಚುಕಡಿಮೆ ತಾಂತ್ರಿಕ ಪದಗಳಾಗಿದ್ದವು."[17] ವಚನದ ನಂತರದ ಭಾಗದಲ್ಲಿ, **ದೇವರ ವಾಕ್ಯವು** ಅವರೊಳಗೆ **ಬಲವಾಗಿ ಕೆಲಸ ನಡಿಸುತ್ತದೆ** ಎಂದು ಹೇಳುತ್ತಾನೆ. "ನಡಿಸುತ್ತದೆ" ಎಂಬುದು ἐνεργέω (*energeō*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ. "RSVಯು ಕ್ರಿಯಾಪದವನ್ನು ಒಂದು ಆತ್ಮಾರ್ಥಕರೂಪವಾಗಿ ತೆಗೆದುಕೊಳ್ಳುತ್ತದೆ ('ಕೆಲಸ ಮಾಡುತ್ತಿದೆ,' ಗ್ರೀಕ್. *energeitai*) ಆದರೆ ಅದೊಂದು ಕರ್ಮಣಿ ಕ್ರಿಯಾರೂಪ ಸಹ

ಆಗಿರಬಲ್ಲದು: 'ಕ್ರಿಯಾತ್ಮಕಗೊಳಿಸಲ್ಪಟ್ಟಿದೆ (*sc*. ದೇವರಿಂದ)'; ಅರ್ಥದಲ್ಲಿ ಬಹಳವಾಗಿ ವ್ಯತ್ಯಾಸವೇನೂ ಆಗುವದಿಲ್ಲ."[18]

ಪೌಲ ಮತ್ತು ಆತನ ಸಂಗಡಿಗರು ಅಲ್ಲಿ ವಾಕ್ಯವನ್ನು ಸಾರಿದಾಗ, ಥೆಸಲೋನಿಕದವರು ಪೌಲ ಅಥವಾ ಇತರರನ್ನು ಇಷ್ಟಪಟ್ಟರು ಎಂಬ ಕಾರಣಕ್ಕಾಗಿ ಮಾತ್ರವೇ ಸಾರಲ್ಪಟ್ಟ ಸಂದೇಶವನ್ನು ಅಂಗೀಕರಿಸಿಕೊಳ್ಳಲಿಲ್ಲ. ಅಂಗೀಕರಿಸಿಕೊಂಡದ್ದು **ಮನುಷ್ಯರ ವಾಕ್ಯವಾಗಿರಲಿಲ್ಲ**; ಬದಲಾಗಿ, ಅದು ದೇವರ ವಾಕ್ಯವೆಂಬದಾಗಿ ಅವರು ಗುರುತಿಸಿದರಾದ್ದರಿಂದ ಆ ಸಂದೇಶವನ್ನು ಅಂಗೀಕರಿಸಿಕೊಂಡರು. ಅದು ದೇವರಿಂದಲೇ ಬಂದ **ವಾಕ್ಯವೇ** ಆಗಿದ್ದರಿಂದ ಅವರು ಉತ್ತಮತೆಯನ್ನು ಸಾಧಿಸಿದರು. ಆತನ ವಾಕ್ಯವು **ನಂಬುವವರಾದ**, ಅಂದರೆ ಕ್ರೈಸ್ತರಾಗಿರುವ ಎಲ್ಲರಲ್ಲಿಯೂ ಮಾಡುವ ಪ್ರಕಾರವೇ, ಅವರಲ್ಲಿ "ಕೆಲಸ ನಡಿಸುತ್ತಿತ್ತು" (ಎಫೆಸ 3:20; ಕೊಲೊಸ್ಸೆ 3:16; ಇಬ್ರಿಯ 4:12ಕ್ಕೆ ಹೋಲಿಸಿರಿ).

**ವಚನ 14.** ಕುಟುಂಬದ ಚಿತ್ರವು ಮತ್ತೊಮ್ಮೆ ಎದ್ದು ಕಾಣುತ್ತದೆ. ಅವರು ಪೌಲ ಮತ್ತು ಆತನ ಸಂಗಡಿಗರ **ಸಹೋದರರು** ಆಗಿದ್ದರು. ಈ ಸಹೋದರರು **ದೇವರ ಸಭೆಗಳನ್ನು ಅನುಸರಿಸುವವರು** ಅಥವಾ "ಹಿಂಬಾಲಕರು" (KJV) ಆಗಿದ್ದರೆಂದು ಹೇಳಲಾಗಿರುತ್ತದೆ ("ದೇವರಿಗೆ ಸೇರಿದವರು"; ಅಪೊಸ್ತಲರ ಕೃತ್ಯಗಳು 20:28). ಈ ಬಿರುದು ಒಂದು ಸರಿಯಾದ ಅಥವಾ ಅಧಿಕೃತವಾದ ಹೆಸರಾಗಿರುವದಿಲ್ಲ. NIVಯಲ್ಲಿ "ದೇವರ ಸಭೆಗಳು" ಎಂದಿರುತ್ತದೆ. ಸಭೆಗಳು **ಯೂದಾಯದಲ್ಲಿ** ಇದ್ದವು, ಅದು ಯೆರೂಸಲೇಮಿನಲ್ಲಿರುವಂಥ ಫಿಲಿಷ್ಟಿಯದ ಒಂದು ದಕ್ಷಿಣ ಪ್ರಾಂತ್ಯವಾಗಿತ್ತು. ಅಲ್ಲದೆ ಅವರು **ಕ್ರಿಸ್ತ ಯೇಸುವಿನಲ್ಲಿ** ಸಹ ಇದ್ದರು, ಆತನಲ್ಲಿಯೇ ರಕ್ಷಣೆ ಇರುತ್ತದೆ (2 ತಿಮೊಥೆ 2:10) ಮತ್ತು ಆತನಲ್ಲಿಯೇ ಒಬ್ಬನು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಇಡಲ್ಪಡುವನು (ರೋಮಾ 6:3, 4).

ಅವರು ಯೂದಾಯದಲ್ಲಿರುವ ಸಭೆಗಳನ್ನು ಅನುಸರಿಸುವವರಾಗಿದ್ದರು, ಅಲ್ಲಿನ ಫಿಲಿಷ್ಟಿಯ ಯೆಹೂದಿ ಕ್ರೈಸ್ತರು ಜೊತೆಯ ಯೆಹೂದ್ಯರ ಕೈಯಲ್ಲಿ ಹಿಂಸೆಯನ್ನು ಅನುಭವಿಸಿದ್ದರು (ಅಪೊಸ್ತಲರ ಕೃತ್ಯಗಳು 5:27-42; ವಿಶೇಷವಾಗಿ ವ. 40). ಈಗ ಈ ಅನ್ಯಜನಾಂಗದ ಕ್ರೈಸ್ತರು ತಮ್ಮ **ಸ್ವದೇಶದವರಿಂದ** ಹಿಂಸೆಯನ್ನು ಅನುಭವಿಸುತ್ತಿದ್ದರು. "ನಿಮ್ಮ ಸ್ವದೇಶದವರಿಂದ" ಎಂಬ ಈ ಮಾತು ಗ್ರೀಕ್ ನ συμφυλέτης (*sumphuletēs*) ಪದದಿಂದ ತೆಗೆದುಕೊಳ್ಳಲ್ಪಟ್ಟಿದೆ, "ಅದು ಸ್ವಲ್ಪ ಮಟ್ಟಿಗೆ ಭೌಗೋಳಿಕತೆಯನ್ನು ಸೂಚಿಸುತ್ತದೆ ಮತ್ತು ಥೆಸಲೋನಿಕದ ಯೆಹೂದ್ಯರನ್ನು ಒಳಗೊಂಡಿರಬಹುದಾಗಿದೆ, ಆದರೆ ವಿರೋಧದಲ್ಲಿ ಬಹಳ ಮಟ್ಟಿಗೆ ಅನ್ಯಜನಾಂಗದವರಿರುವದನ್ನು ಅದು ತೋರಿಸುತ್ತದೆ."[19] ಹಾಗಿದ್ದರೂ, ಥೆಸಲೋನಿಕದಲ್ಲಿ ಕ್ರೈಸ್ತರ ಮೇಲೆ ಆರಂಭಿಕ ದಂಗೆಯನ್ನು ಪ್ರಚೋದಿಸಿದ್ದು ಥೆಸಲೋನಿಕದ ಯೆಹೂದ್ಯರೇ ಆಗಿದ್ದರು (ಅಪೊಸ್ತಲರ ಕೃತ್ಯಗಳು 17:1-9).

**ವಚನ 15.** 14ನೇ ವಚನದ ಅಂತ್ಯದಲ್ಲಿ ಯೆಹೂದ್ಯರನ್ನು ಹೆಸರಿಸಿದ ಬಳಿಕ, ಪೌಲನು ಒಂದು ಅತ್ಯಂಥ ಮುಚ್ಚುಮರೆಯಿಲ್ಲದ, ಮುಖದಾಕ್ಷೀಣ್ಯವಿಲ್ಲದ ರೀತಿಯಲ್ಲಿ ಅವರ ನಡವಳಿಕೆಯನ್ನು ಖಂಡಿಸುತ್ತಾನೆ, ಅದರಲ್ಲಿ ಫಿಲಿಷ್ಟಿಯದ ಯೆಹೂದ್ಯರು ಮಾತ್ರವಲ್ಲದೆ, ಒಟ್ಟಾರೆಯಾಗಿ ಯೆಹೂದ್ಯರೆಲ್ಲರು ಸೇರಿದ್ದರು. ಈ ವಿಭಾಗವು ಪೌಲನ ಎಲ್ಲಾ ಬರಹಗಳಲ್ಲಿ ಸಿಕ್ಕಬಹುದಾದ ಯಾವದೇ ಜನರ ಬಗ್ಗೆ ಖಂಡನೆ ಮಾಡುವಿಕೆಯಲ್ಲಿಯೇ ಇದು ಅತ್ಯಂಥ

ನೇರ ಮಾತಿನ ಖಂಡನೆಯಾಗಿರುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಪೌಲನು ತನ್ನ ಜೊತೆಯ ಯೆಹೂದ್ಯರನ್ನು ಬಹುವಾಗಿ ಪ್ರೀತಿಸಿದನು (ರೋಮಾ 9:1-5), ಆದರೆ ಅದೇ ಪ್ರೀತಿಯ ಕಾರಣದಿಂದಲೇ ಆತನು ಅವರ ನಡವಳಿಕೆಯ ವಿರುದ್ಧವಾಗಿ ಮಾತಾಡುವದು ಅಗತ್ಯವಾಗಿತ್ತು. ಯಾವನಾದರೂ ಈ ಯೆಹೂದ್ಯರ ಪ್ರಕಾರವಾಗಿ ನಡೆದುಕೊಳ್ಳುವದಾದರೆ, ಅವನು ಕ್ರಿಸ್ತನನ್ನ ತಿರಸ್ಕರಿಸುವವಷ್ಟೆ ಅಲ್ಲ, ಆದರೆ ದೇವರನ್ನೂ ಆತನು ಬೆಂಬಲಿಸುವ ಎಲ್ಲವನ್ನೂ ತಿರಸ್ಕರಿಸುವವನಾಗುತ್ತಾನೆ ಎಂಬದನ್ನು ಆತನು ಸ್ಪಷ್ಟಗೊಳಿಸಬೇಕಾಗಿತ್ತು.

ಯೆಹೂದ್ಯರು **ಕರ್ತನಾದ ಯೇಸುವನ್ನು** ಕೊಂದರು ಎಂಬದಾಗಿ ಪೌಲನು ಹೇಳಿದನು. ಅವರು ಆತನನ್ನು ರೋಮನ್ ಅಧಿಕಾರಿಗಳ ಮುಂದೆ ಕರೆ ತಂದು ಪಿಲಾತನ ಚಿತ್ತಕ್ಕೆ ವಿರುದ್ಧವಾಗಿ ಆತನನ್ನು ಕೊಂದಿದ್ದರು ಯಾಕೆಂದರೆ ಅದೇ ಅವರ ಇಷ್ಟವಾಗಿತ್ತು (ಮತ್ತಾಯ 27:15-26; ಅಪೊಸ್ತಲರ ಕೃತ್ಯಗಳು 2:22-24). ಅವರು **ಪ್ರವಾದಿಗಳನ್ನು** ಸಹ ಕೊಂದಿದ್ದರು. ಮತ್ತಾಯ 23:29-32 ವಚನಗಳು ಅವರು "ಪ್ರವಾದಿಗಳನ್ನು ಕೊಂದ" ಬಗ್ಗೆ ಮಾತಾಡುತ್ತವೆ, ಅದೇ ರೀತಿಯಲ್ಲಿ ಅಪೊಸ್ತಲರ ಕೃತ್ಯಗಳು 7:51, 52 ವಚನಗಳು ಸಹ ತಿಳಿಸುತ್ತವೆ. ಲೂಕ 11:47-51 ವಚನಗಳು ಅದೇ ವಿಷಯವನ್ನು ಪುನಃ ಪುನರ್ದೃಢೀಕರಿಸುತ್ತದೆ, ಜೊತೆಗೆ ಅವರು ಒಬ್ಬ ನೀತಿಯುಳ್ಳ ಪ್ರವಾದಿಯನ್ನು ಕೊಂದರು, "ಯಜ್ಞವೇದಿಗೂ ದೇವಾಲಯಕ್ಕೂ ನಡುವೆ ಹತನಾದ ಜಕರೀಯ" (ವ. 51). ಈ ಪ್ರವಾದಿಯು ಮತ್ತು ಅದೇ ಹೆಸರಿನಲ್ಲಿ ಹಳೆಯ ಒಡಂಬಡಿಕೆಯ ಪುಸ್ತಕವನ್ನು ಬರೆದ ಜಕರ್ಯನು ಒಂದೇ ಆಗಿರುವದಿಲ್ಲ. ಬದಲಾಗಿ, ಈತನು 2 ಪೂರ್ವಕಾಲವೃತ್ತಾಂತ 24:20, 21ರಲ್ಲಿ "ಕಲ್ಲೇಸೆದು ಕೊಂದರು" ಎಂದು ಪ್ರಸ್ತಾಪಿಸಲ್ಪಟ್ಟಿರುವ ವ್ಯಕ್ತಿಯಾಗಿದ್ದಾನೆ. ಯೆರೆಮೀಯನು ಸೆರೆಮನೆ ಹಾಕಲ್ಪಟ್ಟು ಅನೇಕ ಸಾರಿ ಪ್ರಾಣವನ್ನು ಗಂಡಾಂತರಕ್ಕೀಡು ಮಾಡಿಕೊಂಡ ಮತ್ತೊಬ್ಬ ಪ್ರವಾದಿಯಾಗಿದ್ದನು.

ಯೆಹೂದ್ಯರು [ನಮ್ಮನ್ನೂ] **ಅಟ್ಟಿಬಿಟ್ಟರು** ಎಂದು ಸಹ ಪೌಲನು ಹೇಳುತ್ತಾನೆ. KJVಯಲ್ಲಿ "ನಮ್ಮನ್ನು ಹಿಂಸಿಸಿದರು" ಎಂದಿರುತ್ತದೆ. ಇಲ್ಲಿ, ಆತನು ಥೆಸಲೋನಿಕದಲ್ಲಿ ತನ್ನನ್ನು ಮತ್ತು ತನ್ನ ಸಂಗಡಿಗರನ್ನು ಹೊರಗೆ ಅಟ್ಟಿಸಿದ ಅನುಭವನ್ನು ಸೂಚಿಸಿ ಹೇಳುತ್ತಿದ್ದಾನೆ (ಅಪೊಸ್ತಲರ ಕೃತ್ಯಗಳು 17:1-10). ಅವರು ದೇವರ ಮಗನನ್ನು ಅಂಗೀಕರಿಸಿಕೊಳ್ಳದಿರುವ ಮೂಲಕ **ದೇವರನ್ನು ಮೆಚ್ಚಿಸುವವರಲ್ಲ**, ಹೀಗೆ, ತತ್ಪರಿಣಾಮವಾಗಿ, ಅವರು ತಂದೆಯನ್ನು ಸಹ ತಿರಸ್ಕರಿಸಿದ್ದರು ಎಂಬದಾಗಿ ಆತನು ಹೇಳುತ್ತಾನೆ (ಯೋಹಾನ 5:22-24; ಇಬ್ರಿಯ 11:6). ಅಂತಿಮವಾಗಿ, ಅವರು **ಎಲ್ಲಾ ಮನುಷ್ಯರಿಗೂ ವಿರೋಧಿಗಳಾಗಿದ್ದಾರೆ** ಎಂದು ಆತನು ಹೇಳುತ್ತಾನೆ. ಪೌಲನು ಯೆಹೂದ್ಯರನ್ನು "ಎಲ್ಲಾ ಮನುಷ್ಯರಿಗೆ ವಿರೋಧಿಗಳಾಗಿದ್ದಾರೆ" ಎಂದು ಕರೆದಾಗ, ಆತನು ತನ್ನನ್ನು ಯೆಹೂದ್ಯರ ಮೇಲೆ ಮಾನವ ಜನಾಂಗದ ದ್ವೇಷಿಗಳೆಂದು ಆರೋಪಿಸುವವರೊಳಗೆ ಸೇರ್ಪಡೆಗೊಳಿಸಿಕೊಳ್ಳಲಿಲ್ಲ. ಬದಲಾಗಿ, ಪೌಲನು ಮಾತಾಡಿದ ವಿರೋಧವು ಯಾವದಾಗಿತ್ತೆಂದರೆ ಅನ್ಯಜನರಿಗೆ ಸುವಾರ್ತೆಯು ಸಾರಲ್ಪಡುವದನ್ನು ವಿರೋಧಿಸುತ್ತಿದ್ದ ಕೆಲವೊಂದು ಯೆಹೂದ್ಯ ವಿಶ್ವಾಸಿಗಳ ಕುರಿತಾಗಿತ್ತು.[20]

**ವಚನ 16.** ಪೌಲನು ನಿರ್ದಿಷ್ಟವಾಗಿ ಅನ್ಯಜನರಿಗೆ ಸುವಾರ್ತೆಯು ಸಾರಲ್ಪಡುವದಕ್ಕೆ ವ್ಯಕ್ತವಾಗಿದ್ದ ಯೆಹೂದಿ ವಿರೋಧದ ಕುರಿತಾಗಿ ಮಾತಾಡುತ್ತಿದ್ದನು (ವ. 15) ಎಂಬುದು ಈ

ವಚನದಲ್ಲಿ ಸಹ ಕಂಡು ಬರುತ್ತದೆ. ಈ ಜನರು **ಅನ್ಯಜನರಿಗೆ ರಕ್ಷಣೆಯಾಗುವಂತೆ ಸುವಾರ್ತೆಯನ್ನು ಸಾರುವ** ಇತರರಿಗೆ ಅಡ್ಡಿಮಾಡುತ್ತಾರೆ ಎಂಬದಾಗಿ ಆತನು ಹೇಳಿದನು. ಅಪೊಸ್ತಲರ ಕೃತ್ಯಗಳು 22:21, 22ರಲ್ಲಿ, ಪೌಲನು ದೇವರು ತನ್ನನ್ನು "ಅನ್ಯಜನರ" ಬಳಿಗೆ ಕಳುಹಿಸಿದನು ಎಂಬದಾಗಿ ಹೇಳುವ ತನಕ ಪೌಲನ ಮಾತುಗಳನ್ನು ಕೇಳಿಸಿಕೊಂಡಿದ್ದರು ಮತ್ತು ಆತನು ಆ ಮಾತನ್ನು ಹೇಳಿದ ಕೂಡಲೆ ಅವರು ಹೀಗೆ ಕೂಗಿದರು, "ಇಂಥವನನ್ನು ಭೂಮಿಯಿಂದ ತೆಗೆದುಹಾಕಿ ಬಿಡು. . . ."

"ಅನ್ಯಜನರಿಗೆ" ಎಂಬದರ ಅನುವಾದಿತ ಗ್ರೀಕ್ ಪದವು ἔθνος (*ethnos*) ಎಂದಾಗಿರುತ್ತದೆ, ಇದು ಅಕ್ಷರಶಃ "ಜನಾಂಗಗಳು" ಎಂದರ್ಥ ಹೊಂದಿದೆ, ಮತ್ತು ಯೆಹೂದಿ ಜನಾಂಗವನ್ನು ಹೊರತು ಪಡಿಸಿ ಎಲ್ಲಾ ಜನಾಂಗಗಳನ್ನು ಸೂಚಿಸುತ್ತದೆ, ಅಥವಾ "ಅವರು ಅರ್ಥಮಾಡಿಕೊಂಡಿದ್ದ ಪ್ರಕಾರ, ಅಬ್ರಹಾಮನಿಗೆ ಮಾಡಲಾದ ವಾಗ್ದಾನದ ಹೊರಗಿರುವ ಜನಾಂಗಗಳು"[21] ಎಂದು ಸೂಚಿಸುತ್ತದೆ.

ಅನ್ಯಜನರು ತಮ್ಮನ್ನು ಒಂದು ಉತ್ಕೃಷ್ಟವಾದ ಜನಾಂಗವೆಂದು ಭಾವಿಸಿಕೊಂಡಾರು ಎಂಬ ಕಾಣದಿಂದೇನೋ ಯೆಹೂದ್ಯರು ಅವರನ್ನು ರಾಜ್ಯದಿಂದ ಹೊರಗೆ ಇಡಬೇಕೆಂಬದು ಬಯಸಿದ್ದರೆಂಬದಕ್ಕೆ ಇನ್ನು ಅನೇಕ ವಾಕ್ಯಭಾಗಗಳು ಸಾಕ್ಷಿ ಹೇಳುತ್ತವೆ. ಅವರು "ಮತಾಭಿಮಾನ" ಉಳ್ಳವರಾಗಿದ್ದರು (ಅಪೊಸ್ತಲರ ಕೃತ್ಯಗಳು 13:42-45), ದೇವರ ಗಮನವೆಲ್ಲವೂ ತಮ್ಮ ಮೇಲೆಯೇ ಇರಬೇಕೆಂದು ಇಚ್ಛಿಸುವವರಾಗಿದ್ದರು. ಆದ್ದರಿಂದಲೇ ಪೌಲನು ಹೀಗೆ ಹೇಳಿದನು, "ಅವರು ಮಿತಿ ಮೀರಿ ತಮ್ಮ ಪಾಪಗಳನ್ನು ಶೇಖರಿ ಸಿಟ್ಟುಕೊಳ್ಳುತ್ತಾರೆ" (NIV) ಅಥವಾ **ಹೀಗೆ ತಮ್ಮ ಪಾಪಕೃತ್ಯಗಳನ್ನು ಎಲ್ಲಾ ಕಾಲಗಳಲ್ಲಿಯೂ ಪರಿಪೂರ್ಣಮಾಡುವದಕ್ಕೆ ಹೋಗುತ್ತಾರೆ.** ಅವರು ಒಂದು ಅವಿಧೇಯತೆಯ ಮೇಲೆ ಮತ್ತೊಂದು ಅವಿಧೇಯತೆಯನ್ನು ಕೂಡಿಸಿಕೊಳ್ಳುತ್ತಾ ಹೋಗುತ್ತಿದ್ದರು. ದೇವರ ತಾಳ್ಮೆಗೆ ಒಂದು ಮಿತಿಯಿರುತ್ತದೆ ಮತ್ತು ಅವರು ದಂಡನೆಯನ್ನು ಅನುಭವಿಸುವರೆಂದು ಪೌಲನು ಹೇಳಿದನು.

ಪೌಲನು **ದೇವರ ಕೋಪವು ಅವರ ಮೇಲೆ ಸಂಪೂರ್ಣವಾಗುತ್ತಾ ಬಂತು** ಎಂದು ಹೇಳಿದನು. "ಕೋಪ" ಎಂಬುದು ಗ್ರೀಕ್ ನ ὀργή (*orgē*) ಎಂಬ ಪದದಿಂದ ಬಂದಿರುತ್ತದೆ, ಅದು ವಾಸ್ತವದಲ್ಲಿ ತನ್ನ ಧರ್ಮಶಾಸ್ತ್ರಕ್ಕೆ ವಿರುದ್ಧ ಎದ್ದೇಳುವ ಯಾವದೇ ಬಂಡಾಯದ ವಿಷಯದಲ್ಲಿ ದೇವರಿಗಿರುವ ಬಲವಾದ ಭಾವನೆಗಳನ್ನು ಸೂಚಿಸುತ್ತದೆ. ಇಲ್ಲಿ ಈ ಪದವು ಅವಿಧೇಯರ ತಲೆಯ ಮೇಲೆ ಆತನ ಭಾವನೆಗಳು ಬೀಳುವಂತೆ ಮಾಡುವ ಶಿಕ್ಷೆಯನ್ನು ವ್ಯಕ್ತಪಡಿಸುವದಾಗಿದೆ. ಅವರನ್ನು ದೇವರು ದಂಡಿಸುವದು ಎಷ್ಟೊಂದು ಖಚಿತವಾಗಿರುತ್ತದೆಂದರೆ ದೇವರು *ಈಗಾಗಲೇ* ದಂಡಿಸಿರುತ್ತಾನೇನೋ ಎಂಬಂತೆ ಭೂತಕಾಲ ರೂಪದಲ್ಲಿ ಪೌಲನು ಮಾತಾಡಿದನು. ಅದನ್ನ ಹೋಲುವಂಥ ಇನ್ನೊಂದು ಉದಾಹರಣೆಯು ಯೆಶಾಯ 53:5, ಅಲ್ಲಿ ಹೀಗೆ ಹೇಳಲಾಗುತ್ತದೆ, "ಅವನಿಗೆ ಗಾಯ*ವಾಯಿತು*" (ಒತ್ತಿ ಹೇಳಿದ್ದು ನನ್ನದು). ಅವರು "ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟವಾಗುವ ದಿವಸ" ಕ್ಕಾಗಿ ತಮ್ಮ ವಿರುದ್ಧ "ಕೋಪವನ್ನು ಕೂಡಿಸಿಟ್ಟುಕೊಳ್ಳುತ್ತಿದ್ದರು" (ರೋಮಾ 2:5, 6). ಈ ದಂಡನೆಯು ಮೊದಲು ಕ್ರಿ.ಶ. 70ರಲ್ಲಿ

(Titusನ ನಾಯಕತ್ವದಲ್ಲಿ) ಯೆಹೂದಿ ಜನಾಂಗದ ನಾಶನದಲ್ಲಿ ಸಂಭವಿಸಿತು, ಮತ್ತು ಅದು ಇನ್ನಷ್ಟು ಪೂರ್ಣವಾದ ಅರ್ಥದಲ್ಲಿ ಅಂತಿಮ ನ್ಯಾಯತೀರ್ಪಿನದಲ್ಲಿ ಸಂಭವಿಸುವದು. "ಸಂಪೂರ್ಣವಾಗುತ್ತಾ" ಎಂಬುದು ಗ್ರೀಕ್ ನ τέλος (*telos*) ಎಂಬ ಪದದಿಂದ ಬಂದಿದ್ದು, ಬಹುಶಃ "ಕೊನೆಗೂ" ಅವರ ಮೇಲೆ ದೇವರ ಕೋಪವು ಬಂದಿರುತ್ತದೆಂಬ ಅರ್ಥವನ್ನು ಕೊಡುತ್ತದೆ.[22]

## ಅವರ ಮೆಲೆ ಪೌಲನಿಗಿದ್ದ ಶಾಶ್ವತವಾದ ಆಸಕ್ತಿ (2:17-20)

**[17]ಸಹೋದರರೇ, ನಾವಂತೂ ದೇಹದಲ್ಲಿ ಮಾತ್ರ ನಿಮ್ಮನ್ನು ಸ್ವಲ್ಪಕಾಲ ಅಗಲಿದರೂ ಹೃದಯದಲ್ಲಿ ಅಗಲದೆ ನಿಮ್ಮ ಮುಖವನ್ನು ನೋಡುವದಕ್ಕೆ ಅತ್ಯಾಶೆಯಿಂದ ಬಹಳ ಪ್ರಯತ್ನಮಾಡಿದೆವು. [18]ಯಾಕೆಂದರೆ ನಿಮ್ಮ ಬಳಿಗೆ ಬರುವದಕ್ಕೆ ನಮಗೆ ಮನಸ್ಸಿತ್ತು; ಹೇಗೂ ಪೌಲನೆಂಬ ನಾನು ಒಂದೆರಡು ಸಾರಿ ಬರುವದಕ್ಕಿದ್ದೆನು; ಆದರೆ ಸೈತಾನನು ನಮಗೆ ಅಭ್ಯಂತರ ಮಾಡಿದನು. [19]ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರು? [20]ನೀವೇ ಅಲ್ಲವೇ. ನಿಜವಾಗಿ ನೀವೇ ನಮ್ಮ ಗೌರವವೂ ಸಂತೋಷವೂ ಆಗಿದ್ದೀರಿ.**

**ವಚನ 17.** ಪೌಲನು ಅವರನ್ನು **ಸಹೋದರರೇ** ಎಂದು ಕರೆಯುವ ಮೂಲಕ ಮತ್ತೊಂದು ಸಾರಿ ಕುಟುಂಬದ ಭಾವವು ವ್ಯಕ್ತಗೊಳಿಸಲ್ಪಟ್ಟಿದೆ. ತಾನು **ಸ್ವಲ್ಪಕಾಲ ಅಗಲಿದರೂ** ("ಪ್ರತ್ಯೇಕಿಸಲ್ಪಟ್ಟರೂ"; NIV) ಎಂಬದಾಗಿ ಹೇಳುತ್ತಾನೆ, ಆತನು ಈ ರೀತಿ ಬೇರ್ಪಡುವಂತೆ ಒತ್ತಾಯಕ್ಕೊಳಗಾದನು ಎಂಬದನ್ನು ಸೂಚಿಸುತ್ತಾನೆ (ಅಪೊಸ್ತಲರ ಕೃತ್ಯಗಳು 17:1-10). "ಅಗಲಿದರೂ" ಎಂಬುದರ ಅನುವಾದಿತ ಗ್ರೀಕ್ ಪದವು ἀπορφανίζω (*aporphanizō*) ಎಂದಾಗಿದ್ದು, ಅಕ್ಷರಶಃ "ನಿಮ್ಮಿಂದ ಅನಾಥ ಗೊಳಿಸಲ್ಪಟ್ಟ"[23] ಎಂದರ್ಥವಾಗಿರುತ್ತದೆ. Καιρός ὥρα, (*kairos hōra*) ಎಂಬುದರ ಅಕ್ಷರಶಃ ಅರ್ಥವು "ಒಂದು ಗಳಿಗೆ ಕಾಲ" ಎಂದಾಗಿರುತ್ತದೆ, ಆದರೆ ಬಹುಶಃ ಅದು "ಸ್ವಲ್ಪ ಕಾಲ" ಎಂದು ಅನುವಾದಿಸಲ್ಪಟ್ಟಿದ್ದು ಸರಿಯಾಗಿಯೇ ಇರುತ್ತದೆ. ಬಹುಶಃ ಇದು ಕೆಲವು ತಿಂಗಳುಗಳಿಗೆ ಸಂಬಂಧಿಸಿದ್ದಾಗಿತ್ತು.

ಪೌಲನು ಒಬ್ಬ ತಂದೆ ಅಥವಾ ತಾಯಿಯಿಂದ ಮಕ್ಕಳನ್ನು ದೂರ ಮಾಡಿದ ರೀತಿಯಲ್ಲಿ ದುಃಖಿಸಿದನು, ಆದರೆ ಆತನು ಅವರಿಗೆ **ಹೃದಯದಲ್ಲಿ** ದೂರವಾಗಿರಲಿಲ್ಲ. ಆ ಅರ್ಥದಲ್ಲಿ, ಆತನು ಸಹೋದರರೊಂದಿಗೆ ಇದ್ದನು. ಆತನು "ಸ್ವಲ್ಪಕಾಲ" ಅಗಲಿದ್ದರೂ ಅವರನ್ನು ನೋಡಬೇಕೆಂದು **ಅತ್ಯಾಶೆಯಿಂದ** ಇದ್ದನು. ಆತನು ಅವರ ಬಳಿಗೆ ತಿರುಗಿ ಹೋಗುವದಕ್ಕೆ ಅಭ್ಯಂತರ ಅನುಭವಿಸಿದ್ದನು, ಬಹುಶಃ ಅದಕ್ಕೆ ಕಾರಣ ಯೆಹೂದ್ಯರು ನಿರಂತರವಾಗಿ ಆತನನ್ನು ಕೊಲ್ಲುವದಕ್ಕೆ ಹೊಂಚು ಹಾಕುತ್ತಿದ್ದರು (ಅಪೊಸ್ತಲರ ಕೃತ್ಯಗಳು 17:13-15). 17ನೇ ವಚನವು ಮತ್ತು 3:10ನೇ ವಚನವು ಸಹ, ಪೌಲ ಹಾಗೂ ಸಂಗಡಿಗರ ಮತ್ತು ಥೆಸಲೋನಿಕದ ಕ್ರೈಸ್ತರ ನಡುವೆ ಒಂದು ಬಲವಾದ ಕ್ರೈಸ್ತೀಯ ಬಂಧವಿತ್ತು ಎಂಬುದು ತೋರಿ ಬರುತ್ತದೆ.

**ವಚನ 18. ಪೌಲನೆಂಬ** ಆತನು ಮತ್ತು ಆತನ ಸಂಗಡಿಗರು **ಒಂದೆರಡು ಸಾರಿ** ಥೆಸಲೋನಿಕದವರನ್ನು ಭೇಟಿ ಮಾಡಬೇಕೆಂದಿದ್ದರು, ಆದರೆ ಅಲ್ಲಿಗೆ ಹಿಂದಿರುಗದಂತೆ **ಸೈತಾನನು** ಅವರಿಗೆ **ಅಭ್ಯಂತರ ಮಾಡಿದನು**, ಬಹುಶಃ ಅವರ ಪ್ರಾಣಗಳಿಗೆ ಅವಿಧೇಯರಾದ ಯೆಹೂದ್ಯರ ಮೂಲಕ ಅಪಾಯವನ್ನೊಡುವ ಮೂಲಕ ಅಭ್ಯಂತರ ಮಾಡಿದ್ದನು. ನಾವು ಇದನ್ನು ಅಪೊಸ್ತಲರ ಕೃತ್ಯಗಳು 5:3 ಮತ್ತು 2 ಕೊರಿಂಥ 2:11 ರಲ್ಲಿ ಬೇರೆಯವರ ಮೇಲೆ ಸೈತಾನನು ಬೀರಿದ ಪ್ರಭಾವದೊಂದಿಗೆ ಹೋಲಿಕೆ ಮಾಡಬಹುದು.

ಗ್ರೀಕ್ ವಾಕ್ಯವು ಅಕ್ಷರಶಃ ಸೈತಾನನು ಅವರನ್ನು "ಒಂದೆರಡು ಸಾರಿ" ತಡೆ ಹಿಡಿದಿದ್ದನು ಎಂದು ಹೇಳುತ್ತದೆ. "ಅಭ್ಯಂತರ ಮಾಡಿದನು" ಎಂಬದರ ಅನುವಾದಿತ ಗ್ರೀಕ್ ಪದವಾದ ἐνέκοψεν (*enekopsen*) ಎಂಬುದು ರಸ್ತೆಯಲ್ಲಿನ ಒಂದು ಛೇದವನ್ನು, ರಸ್ತೆ ದಾಟುವದನ್ನು ಅಸಾಧ್ಯಗೊಳಿಸುವದು ಎಂಬುದನ್ನು ಸೂಚಿಸುವ ಒಂದು ಕ್ರಿಯಾಪದವಾಗಿರುತ್ತದೆ. ಹೀಗೆ ಸೈತಾನನು ಥೆಸಲೋನಿಕದವರೊಂದಿಗೆ ತಮಗೆ ಸಂಪರ್ಕವನ್ನು ಕಡಿದು ಬಿಟ್ಟನು ಎಂಬ ಆರೋಪವನ್ನು ಪೌಲನು ಮಾಡಿದನು. "ಈ ಅಭ್ಯಂತರವು ವ್ಯಾಧಿ, ಕೊರಿಂಥದಲ್ಲಿ ಯೆಹೂದ್ಯರಿಂದ ವಿರೋಧ ಆಗಿರಬಹುದು," ಅಥವಾ ಅದನ್ನು ಹೋಲುವ ಬೇರೆ ಇನ್ನಾವದೇ ಆಗಿರಬಹುದು.[24]

**ವಚನಗಳು 19, 20. ಯಾಕೆಂದರೆ** ಎಂಬುದು ಪೌಲನು ಏಕೆ ಥೆಸಲೋನಿಕದವರನ್ನು ನೋಡಬೇಕೆಂದು ಬಯಸಿದ್ದನು ಎಂಬುದನ್ನು ತೋರಿಸುತ್ತದೆ-ಏಕೆಂದರೆ ಅವರು ಆತನ **ಭರವಸವೂ ಸಂತೋಷವೂ** ಆಗಿದ್ದರು. ವಾಸ್ತವದಲ್ಲಿ, **ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ** (ಆತನು ಮಹಿಮೆಯುಳ್ಳ ಎರಡನೆಯ ಬರೋಣ; 4:15; 5:1–3), ಅವರು ಆತನು **ಹೊಗಳಿಕೊಳ್ಳುವ ಜಯಮಾಲೆ** ಆಗಿರಲಿದ್ದರು ಎಂಬುದನ್ನು ಆತನು ದೃಢೀಕರಿಸುತ್ತಾನೆ. "ಹೊಗಳಿಕೊಳ್ಳುವ" ಎಂಬುದು καύχησις (*kauchēsis*) ಎಂಬ ಗ್ರೀಕ್ ಪದದಿಂದ ಬಂದದ್ದು. David J. Williams ಹೀಗೆ ಬರೆದನು,

> ಈ ಪದವು ಕೆಲವು ಸಾರಿ "ಹೆಚ್ಚಳಪಟ್ಟುಕೊಳ್ಳುವದು" ಎಂಬ ಅರ್ಥವನ್ನು ಕೊಡಬಹುದು (cf., ಉದಾ., ರೋಮಾ 3:27; 2 ಕೊರಿಂಥ 11:10, 17) ಆದರೆ ಈ ಸನ್ನಿವೇಶದಲ್ಲಿ ಅದನ್ನು "ಮಹಿಮೆ" ಎಂದು ಅನುವಾದಿಸಿದರೆ ಉತ್ತಮವಾಗಿರುತ್ತದೆ. ಪೌಲನು ಇಲ್ಲಿ ಒಂದು ಕ್ರೀಡೆಯ ರೂಪಕಾಲಂಕಾರವನ್ನು ಉಳಿಸಿಕೊಂಡು ಬರುತ್ತಿದ್ದಾನೆ ಮತ್ತು ತನ್ನನ್ನು ಒಬ್ಬ ಕ್ರೀಡಾಪಟುವಿನಂತೆ, ಅಧ್ಯಕ್ಷರ ವೇದಿಕೆಯ ಮುಂದೆ ತನ್ನ ಜಯದ ಮಹಿಮೆಯಲ್ಲಿ ಹೆಚ್ಚಳಪಟ್ಟುಕೊಳ್ಳುವವನಂತೆ ಭಾವಿಸಿಕೊಳ್ಳುತ್ತಿದ್ದಾ.[25]

ಪೌಲನು ಮುಂದುವರೆದು ಹೇಳಿದ್ದೇನೆಂದರೆ, **ನೀವೇ ನಮ್ಮ ಗೌರವ** (ಮಹಿಮೆ). "ಮಹಿಮೆ" ಎಂಬುದು δόξα (*doxa*) ಎಂಬ ಪದದಿಂದ ಬಂದದ್ದು, "'ಒಬ್ಬನು ಯಾವದರಲ್ಲಿ ಹೆಚ್ಚಳಪಟ್ಟುಕೊಳ್ಳುತ್ತಾನೋ' ಅದು ಎಂಬ ಅರ್ಥದಲ್ಲಿ cf. 1 ಕೊರಿಂಥ 11:7, ಅಲ್ಲಿ 'ಸ್ತ್ರೀ ಯಾದರೋ ಪುರುಷನ ಪ್ರಭಾವವಾಗಿದ್ದಾಳೆ (δόξα).'"[26]

ಪೌಲನು ನಂಬಿಗಸ್ತರಾಗಿ ಜೀವಿಸಿದ್ದ ಥೆಸಲೋನಿಕದವರ ನಿಮಿತ್ತವಾಗಿ (ಎರಡನೆಯ ಬರೋಣದ ವೇಳೆ) "ಮಹಿಮೆ"ಗೊಳ್ಳುವವನಾಗಿದ್ದನು. ಆತನು ಅವರನ್ನು ತನ್ನ ಸ್ವಂತ

ಒಳ್ಳೇ ಫಲಗಳೆಂದು ತೋರಿಸುವನು. ಒಂದು ಅರ್ಥದಲ್ಲಿ, ಅವರು ಆತನ "ಭರವಸ" ಆಗಿದ್ದರು. ಖಂಡಿತವಾಗಿಯೂ, ಒಂದು ಹೆಚ್ಚು ಮೂಲಭೂತ ಅರ್ಥದಲ್ಲಿ, ಕ್ರಿಸ್ತನು ನಮ್ಮ "ಭರವಸ" ಆಗಿದ್ದಾನೆ (1 ತಿಮೊಥೆ 1:1); ಆದರೆ ನಮ್ಮ ಮೂಲಕವಾಗಿ ಕ್ರಿಸ್ತನ ಬಳಿಗೆ ಬಂದವರು ನಾವು ನಮ್ಮ ತಲಾಂತನ್ನು ಬಳಸಿಕೊಂಡಿದ್ದೇವೆಂಬುದಕ್ಕೆ ಒಂದು ರೀತಿಯ ಪುರಾವೆ ಆಗಿರುವರೆಂಬ ಅರ್ಥದಲ್ಲಿ ಅವರು ಭರವಸವಾಗಿದ್ದಾರೆ (ಮತ್ತಾಯ 25:14-28). ಅವರನ್ನು ಅವರ ದೇವರ ಸಂಗಡ ಸಂಧಾನ ಹೊಂದುವಂತೆ ಮಾಡಿ ಸಮೃದ್ಧಿಯಾದ ಜೀವವನ್ನು ಕಂಡುಕೊಳ್ಳುವಂತೆ ಅವರಿಗೆ ಸಹಾಯ ಮಾಡುವದರಲ್ಲಿ ತಾನೊಂದು ಪಾತ್ರವನ್ನು ನಿರ್ವಹಿಸಿದ್ದೇನೆಂಬುದನ್ನು ಆತನು ಬಹಳವಾಗಿ "ಸಂತೋಷ" ಹೊಂದಿದ್ದನು (3 ಯೋಹಾನ 3, 4). ನಾವು ಕ್ರಿಸ್ತನ ಪುನರಾಗಮನದಲ್ಲಿ ಆತನ ಮುಂದೆ ನಿಲ್ಲುವಾಗ ಈ ತಿಳುವಳಿಕೆಯು ಕೊಡುವಷ್ಟು ಸಂತೋಷವನ್ನು ಭೌತಿಕ ಸಂಗತಿಗಳು ಕೊಡಲಾರವು. ಈ ಸಂತೋಷವನ್ನು ಕಳೆದುಕೊಳ್ಳದ ಹಾಗೆ ಕ್ರೈಸ್ತರು ಜಾಗರೂಕತೆಯಿಂದಿರಬೇಕು. ಅಂತಿಮವಾಗಿ, ಪೌಲನು ಅವರನ್ನು ತನ್ನ "ಜಯಮಾಲೆ" (ಕಿರೀಟ) ಎಂದು ಕರೆಯುತ್ತಾನೆ, ಅವರು ಸ್ಥೈರಣೆಯಿಂದಿದ್ದರು ಎಂಬದು ನಿರ್ಧರಿಸಲ್ಪಡುವ ಅಂತಿಮ ಅರ್ಥದಲ್ಲಿ ಅವರು ಆತನ ಸೇವೆಗೆ "ಕಿರೀಟ" ಆಗಲಿದ್ದರು (ಅಲ್ಲದೆ 1 ಕೊರಿಂಥ 3:13-15; ಫಿಲಿಪ್ಪಿ 4:1; 2 ತಿಮೊಥೆ 4:6-8 ಸಹ ನೋಡಿರಿ).

## ಅನ್ವಯಿಸುವಿಕೆ

2ನೇ ಅಧ್ಯಾಯದಲ್ಲಿ, ಪೌಲನು ತನ್ನನ್ನು ಒಬ್ಬ ನಂಬಿಗಸ್ತನಾದ ಬೋಧಕನು ಎಂಬದಾಗಿ ಸಮರ್ಥಿಸಿಕೊಳ್ಳುವದಕ್ಕೆ ತಿರುಗಿಕೊಂಡನು. ಪೌಲನು ಥೆಸಲೋನಿಕವನ್ನು ಅಷ್ಟೊಂದು ಶೀಘ್ರದಲ್ಲಿ ತೊರೆದು ಹೋಗಿದ್ದ ಬಗ್ಗೆ ಕೆಲವರು ಅಪಾರ್ಥವನ್ನು ಕಲ್ಪಿಸಿದ್ದರ ನಿಮಿತ್ತವಾಗಿ ಆತನ ಬಗ್ಗೆ ಥೆಸಲೋನಿಕದಲ್ಲಿ ಒಂದು ವಿಧವಾದ ಟೀಕೆ ಎದ್ದಿರಬಹುದಾಗಿದೆ. ಬಹುಶಃ ಥೆಸಲೋನಿಕದವರ ವಿರುದ್ಧ ಹಿಂಸೆಯ ಮೂಲ ಕಾರಣರಾಗಿದ್ದ, ಯೆಹೂದ್ಯರು ಪೌಲನ ವಿಷಯದಲ್ಲಿ ಅವನೊಬ್ಬ ಅಪ್ರಾಮಾಣಿಕನಾದ ಹೇಡಿ ಮತ್ತು ಹೊಸ ಸಭೆಗೆ ಸಹಾಯ ಮಾಡುವದಕ್ಕೆ ಹಿಂದಿರುಗಿ ಬರುವವನಲ್ಲ ಎಂದು ಹೇಳುತ್ತಿದ್ದಿರಬಹುದಾಗಿದೆ.

ಹೇಗೂ, ಆತನು ಅಂಥ ಟೀಕೆಯನ್ನು ಎದುರಿಸಿದನು ಎಂಬುದಕ್ಕೆ ಎರಡು ಪತ್ರಿಕೆಗಳಲ್ಲೂ ಯಾವದೇ ಸೂಚನೆ ಇರುವದಿಲ್ಲ. ಈ ಕೆಳಗಿನ ವಾಕ್ಯಭಾಗದಲ್ಲಿ ಪೌಲನು ತನ್ನ ಸೇವೆಯನ್ನು ಸಮರ್ಥಿಸಿಕೊಳ್ಳುವದಕ್ಕಿಂತಲೂ ಅಧಿಕವಾಗಿ ತನ್ನ ಸೇವೆಯ ಪ್ರಾಮಾಣೀಕೃತತೆ ಮತ್ತು ಆ ಕಾಲದ ಸುಳ್ಳು ಬೋಧಕರ ಮೋಸಕರ ಪ್ರಯತ್ನಗಳ ನಡುವೆ ಒಂದು ಸ್ಪಷ್ಟವಾದ ವ್ಯತ್ಯಾಸವನ್ನು ತೋರಿಸಿ ಕೊಡುವದಾಗಿರಬಹುದಾಗಿದೆ.

ತಾನು ಏನು ಹೇಳಿದನೋ ಅದಕ್ಕೆ ದೃಢೀಕರಣವಾಗಿ ಥೆಸಲೋನಿಕದವರನ್ನೇ ಬಳಸಿದನು. ಅವರು ಆತನಿಗೆ ಸಾಕ್ಷಿಗಳಾಗುವರು. ಆತನು ಅವರ ಮಧ್ಯದಲ್ಲಿ ಹೇಗೆ ಜೀವಿಸಿದ್ದನು ಎಂಬುದನ್ನು ಅವರೇ ಬಲ್ಲವರಾಗಿದ್ದರು.

ಆತನು ತೊಡಗಿಸಿಕೊಂಡ ಚರ್ಚೆಯು ಸಾರುವಿಕೆಯ ನಿಜ ಸ್ವಭಾವದ ಒಂದು ಚಿತ್ರಣ ಕುರಿತು ತಿಳುವಳಿಕೆಯನ್ನು ಒದಗಿಸುವದಾಗಿದೆ. ಪ್ರತಿಯೊಬ್ಬ ಸುವಾರ್ತಾ ಬೋಧಕನು

ಶಾಸ್ತ್ರಗಳ ಈ ವಿಭಾಗವನ್ನು ಆಗಾಗ್ಗೆ ಓದಬೇಕು ಮತ್ತು ಜಾಗ್ರತೆಯಿಂದ ಅಧ್ಯಯನ ಮಾಡಬೇಕು.

### ಒಬ್ಬ ಬೋಧಕನು ಬಂದನು (2:1, 2)

ಈ ಅಧ್ಯಾಯದ ಮೊದಲ ಎರಡು ವಚನಗಳು ನಮ್ಮನ್ನು ಅಪೊಸ್ತಲರ ಕೃತ್ಯಗಳು 16 ಮತ್ತು 17 ಅಧ್ಯಾಯಗಳಿಗೆ ಮರಳಿ ಕರೆದೊಯ್ಯುತ್ತವೆ. 16ನೇ ಅಧ್ಯಾಯದಲ್ಲಿ ಫಿಲಿಪ್ಪಿಯದ ಸಭೆಯು ಆರಂಭಗೊಳ್ಳುವದನ್ನು ಕಾಣುತ್ತೇವೆ, ಮತ್ತು 17ನೇ ಅಧ್ಯಾಯದಲ್ಲಿ ಥೆಸಲೋನಿಕದ ಸಭೆಯು ಆರಂಭಗೊಳ್ಳುವದನ್ನು ನೋಡುತ್ತೇವೆ, ಅದು ಫಿಲಿಪ್ಪಿಯದಿಂದ ಸುಮಾರು ಅರವತ್ತು ಮೈಲುಗಳಷ್ಟು ದೂರದಲ್ಲಿತ್ತು.

ತಾನು ಫಿಲಿಪ್ಪಿಯದಲ್ಲಿ ಅನುಭವಿಸಿದ ಹಿಂಸೆಯು ಪೌಲನನ್ನು ಥೆಸಲೋನಿಕಕ್ಕೆ ಬಂದು ಅಲ್ಲಿನ ಜನರಿಗೆ ಸುವಾರ್ತೆಯನ್ನು ಸಾರುವದರಿಂದ ಹಿಂಜರಿಯುವಂತೆ ಮಾಡಲಿಲ್ಲ. ಆತನು ತನ್ನ ಸಾರುವಿಕೆಯ ಸೇವೆಯಲ್ಲಿ ನಿಜವಾಗಿದ್ದನು, ಬೇರೆಯವರ ಕಡೆಗಿನ ತನ್ನ ಉದ್ದೇಶಗಳಲ್ಲಿ ಮತ್ತು ಕ್ರಿಯೆಗಳಲ್ಲಿ ದೇವರನ್ನೇ ಮೆಚ್ಚಿಸುವದಕ್ಕೆ ಅಪೇಕ್ಷಿಸಿದನು.

ತಾನು ಬಂಧಿಸಲ್ಪಟ್ಟಿದ್ದನು, ಹೊಡೆತಗಳಿಗೆ ಗುರಿಯಾದನು, ಸೆರೆಗೆ ಹಾಕಲ್ಪಟ್ಟನು, ಅವಮಾನಗೊಳಿಸಲ್ಪಟ್ಟನು; ಆದರೆ ಈ ಯಾವ ಕಷ್ಟಗಳು ಸಹ ಆತನನ್ನು ಥೆಸಲೋನಿಕಕ್ಕೆ ಬರುವದನ್ನು ತಡೆಯಲಾಗಲಿಲ್ಲ ಎಂಬುದನ್ನು ಪೌಲನು ಥೆಸಲೋನಿಕದವರಿಗೆ ಜ್ಞಾಪಿಸುತ್ತಾನೆ. ಆತನು ಅವರ ಬಳಿಗೆ ಸುವಾರ್ತೆಯನ್ನು ತೆಗೆದುಕೊಂಡು ಬಂದಿದ್ದನು, ಅದಕ್ಕೆ ಅವರು ಕಿವಿಗೊಟ್ಟಿದ್ದರು ಮತ್ತು ವಿಧೇಯರಾಗಿದ್ದರು.

ಈ ಎರಡು ವಚನಗಳು ಒಂದು ಕಠಿಣ ಪರಿಸ್ಥಿತಿಯಲ್ಲಿ ಅಗತ್ಯವಾಗಿರುವಂಥ ಒಬ್ಬ ಬೋಧಕನು ಎಂಥವನೆಂಬುದನ್ನು ಒತ್ತಿ ಹೇಳುತ್ತವೆ. ಅತ್ಯಂಥ ಕಠಿಣವಾದ ಪರಿಸ್ಥಿತಿಗಳಲ್ಲಿ ಯಾರು ಸುವಾರ್ತೆಯನ್ನು ಕೊಂಡೊಯ್ಯುವರು?

*ಒಬ್ಬ ಅನುರಾಗವುಳ್ಳ ಮನುಷ್ಯ*. ಸುವಾರ್ತೆಯು ಬೇರೆಯವರಿಗೆ ಸಾರಲ್ಪಡತಕ್ಕದ್ದು ಎಂಬದನ್ನು ಆತನು ಆಳವಾಗಿ ನಂಬುವ ಅಗತ್ಯವಿರುತ್ತದೆ. ಕ್ರಿಸ್ತನು ಈ ಲೋಕಕ್ಕೆ ಬಂದನೆಂಬುದನ್ನು ಸಾರುವವನಾಗಿ ಪೌಲನು ಏಕೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುತ್ತಿದ್ದನು? ಅದಕ್ಕೆ ಒಂದೇ ಒಂದು ಉತ್ತರವಿರುತ್ತದೆ. ಕ್ರಿಸ್ತನ ಸಂದೇಶವು ಸಾರಲ್ಪಡಲೇ ತಕ್ಕದ್ದು ಎಂಬ ಗ್ರಹಿಕೆಯಿಂದ ಆತನು ಉತ್ತೇಜಿಸಲ್ಪಟ್ಟಿದ್ದನು.

*ಒಬ್ಬ ತತ್ವನಿಷ್ಠ ಮನುಷ್ಯ*. ಜನರಿಗೆ ಸುವಾರ್ತೆಯು ಅಗತ್ಯವಿರುತ್ತದೆ ಎಂಬ ಬಗ್ಗೆ ಆತನು ಎಷ್ಟೊಂದು ಮನವರಿಕೆಯುಳ್ಳವನಾಗಿರಬೇಕೆಂದರೆ ಅವರು ಸುವಾರ್ತೆಯನ್ನು ಕೇಳುವಂತಾಗುವದಕ್ಕಾಗಿ ಆತನು ಬಾಧೆಗಳನ್ನನುಭವಿಸುವದಕ್ಕೆ ಸಿದ್ಧನಾಗಿರತಕ್ಕದ್ದು. ಪೌಲನಿಗೆ ಫಿಲಿಪ್ಪಿಯಲ್ಲಿ ಅವಮಾನಕರವಾಗಿ ನಡೆದುಕೊಂಡಾಗ, ಆತನು ಸುಲಭವಾಗಿ ಬಹಳ ನಿರಾಶೆಗೊಂಡು ಇನ್ನೊಮ್ಮೆ ಸಾರುವದನ್ನೇ ಬಿಟ್ಟಿರುವದಕ್ಕೆ ಸಾಧ್ಯತೆಯಿತ್ತು. ಹೇಗೂ, ಆತನು ಫಿಲಿಪ್ಪಿಯನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನು, ಅಲ್ಲಿಯೂ ತನಗೆ ಅದೇ ರೀತಿಯ ವರ್ತನೆಯು ಕಾದಿರಬಹುದಾಗಿದೆ ಎಂಬುದನ್ನು ತಿಳಿದಿದ್ದರೂ ಅಲ್ಲಿಗೆ ಹೋದನು. ಹಳೆಯ ಗಾದೆಯೊಂದು ಹೀಗಿರುತ್ತದೆ “ದೇವರು ಸುಗಮವಾದ ಸಮುದ್ರಯಾನ

ಇರುತ್ತದೆಂದು ವಾಗ್ದಾನವನ್ನು ಮಾಡಲಿಲ್ಲ, ಆದರೆ ಸೇರಬೇಕಾದ ಸ್ಥಳವನ್ನು ಸಂತೋಷವಾಗಿ ತಲುಪುವಿರಿ ಎಂದಷ್ಟೇ ವಾಗ್ದಾನ ಮಾಡಿದನು." ಸುವಾರ್ತೆಯನ್ನು ಸಾರುವದರಿಂದ ಕೆಲವು ವೈಯಕ್ತಿಕವಾಗಿ ಬಾಧೆಯನ್ನು ತರಬಹುದೆಂದು ಪೌಲನಿಗೆ ಗೊತ್ತಿತ್ತು, ಆದರೆ ಆ ಬೆಲೆಯನ್ನು ಕಟ್ಟುವದು ಪ್ರಯೋಜನಕರವೆಂದು ಆತನು ಪರಿಗಣಿಸಿದ್ದನು.

*ಒಬ್ಬ ಸ್ಥೈರಣೆಯುಳ್ಳ ಮನುಷ್ಯ*. ಸ್ಥೈರಣೆಯು ಅಗತ್ಯವಾದದ್ದು. ಪೌಲನಿಗೆ ಒಂದು ಪಟ್ಟುಬಿಡದ ದೃಢಸಂಕಲ್ಪವಿತ್ತು. ಹಿಂಸೆ, ಅವಮಾನ, ತೃಣಿಕರಿಸುವಿಕೆ, ಮತ್ತು ಹೊಡೆತಗಳು ಇವುಗಳಿಗೆ ಅವನನ್ನು ಕುಂದಿಸುವದಕ್ಕೆ ಸಾಧ್ಯವಾಗಲಿಲ್ಲ.

ದೇವರು ಪೌಲನಿಗೆ ಯಶಸ್ಸನ್ನು ಕೊಟ್ಟನು ಎಂಬದರಲ್ಲಿ ಆಶ್ಚರ್ಯವೇನಿಲ್ಲ! ಪರಲೋಕದ ದೃಷ್ಟಿಕೋನದಲ್ಲಿ, ಒಬ್ಬ ಬೋಧಕನಾಗಿರುವದೆಂದರೆ ಕೇವಲ ಒಂದು ಶಿಕ್ಷಣವನ್ನು ಹೊಂದಿರುವದು, ಭಾಷಣವನ್ನು ಮಾಡುವ ಕಲೆಯನ್ನು ತಿಳಿದಿರುವದು, ಮತ್ತು ವಾಕ್ಯದ ಜ್ಞಾನವನ್ನು ಹೊಂದಿರುವದಕ್ಕಿಂತಲೂ ಹೆಚ್ಚಿನದಿರುತ್ತದೆ. ಈ ಗುಣಗಳು ಅಗತ್ಯವಿರುತ್ತವೆ, ಆದರೆ ಆತನು ಹಿಂಸೆಯಿಂದಾಗುವ ನೋವನ್ನು ಸಹಿಸಿಕೊಳ್ಳುವದಕ್ಕೆ ಸಹ ಶಕ್ತನಾಗಿರಬೇಕು. EC

**ಸೇವಕ ಮನೋಭಾವದ ಬೋಧಕರು (2:1-12)**

2ನೇ ಅಧ್ಯಾಯದ ಮೊದಲ ಅರ್ಧಭಾಗವು ಪೌಲ, ಸೀಲ, ಮತ್ತು ತಿಮೊಥೆಯರು ಥೆಸಲೋನಿಕಕ್ಕೆ ನೀಡಿದ್ದ ಭೇಟಿಯ ಕುರಿತಾಗಿರುತ್ತದೆ. ತಾವು ಅವರೊಟ್ಟಿಗೆ ಇರುವಾಗ ಬೆಳೆಸಿಕೊಂಡ ಸಂಬಂಧದ ಮೂಲಕವಾಗಿ ಏನನ್ನು ಕಲಿತುಕೊಳ್ಳಬಹುದೆಂಬುದನ್ನು ಪೌಲನು ಥೆಸಲೋನಿಕದವರಿಗೆ ಜ್ಞಾಪಿಸುತ್ತಿದ್ದಾನೆ. ಈ ಎಳೆಯ ಕ್ರೈಸ್ತರು ಮಾದರಿಯಾಗಿರುವದು ಮಾತ್ರವಲ್ಲದೆ ಶುಭವಾರ್ತೆಯನ್ನು ವಿವರಿಸುವದು ಪ್ರತಿಯೊಬ್ಬ ಕ್ರೈಸ್ತನ ಪಾತ್ರವಾಗಿರುತ್ತದೆಂಬುದನ್ನು ಕಲಿತುಕೊಳ್ಳುವಂತಾಗುವದಕ್ಕಾಗಿ, ಬೋಧಕರ ಗುಣಸ್ವಭಾವದ ಕುರಿತು ನಕಾರಾತ್ಮಕವಾಗಿ ಮತ್ತು ನಂತರದಲ್ಲಿ ಸಕಾರಾತ್ಮಕವಾಗಿ ಬಣ್ಣಿಸಲಾಗಿರುತ್ತದೆ.

2:1-12ರಲ್ಲಿ, ಹೆಚ್ಚುಕಡಿಮೆ ಪೌಲನು ಹೆಚ್ಚಳಪಟ್ಟುಕೊಳ್ಳುತ್ತಿದ್ದಾನೆ ಎಂಬುದಾಗಿ ತೋರಬಹುದಾಗಿದೆ; ಆದರೆ ಸೂಕ್ಷ್ಮವಾಗಿ ಗಮನಿಸುವಾಗ ಈ ವಿಭಾಗದ ಉದ್ದೇಶವು ಸಂಬಂಧಗಳನ್ನು, ಮನೋಭಾವಗಳನ್ನು, ಮತ್ತು ಉದ್ದೇಶಗಳನ್ನು ಪರೀಕ್ಷಿಸಿಕೊಳ್ಳುವದೇ ಆಗಿರುತ್ತದೆಂಬುದು ತಿಳಿದು ಬರುವದು. ಏಕೆ? ಆತನು ಈ ಎಳೆಯ ಕ್ರೈಸ್ತರಿಗೆ ಬೆಳವಣಿಗೆಗೊಳ್ಳುವಂತೆ ಪ್ರೋತ್ಸಾಹ ಮತ್ತು ಉತ್ತೇಜನವನ್ನು ಕೊಡುವದಕ್ಕೆ ಬಯಸಿದ್ದನು. ಈ ವಚನಗಳು ನಮ್ಮ ಸ್ವಂತ ಉದ್ದೇಶಗಳನ್ನು, ಮನೋಭಾವಗಳನ್ನು, ಮತ್ತು ಸಂಬಂಧಗಳನ್ನು ಪರೀಕ್ಷಿಸಿಕೊಳ್ಳುವಂತೆ ನಮಗೆ ಸಹಾಯ ಮಾಡುವವು.

*ದೇವರ ಸೇವೆಯನ್ನು ಮಾಡುವದು ನಮ್ಮ ಗುರಿ (2:1-3)*. ಬೇರೆಯವರೊಂದಿಗಿನ ಸಹವಾಸವನ್ನು ಯಾವದು ಪರಿಣಾಮಕರವಾಗಿ ಮಾಡುತ್ತದೆ? ಈ ಬೋಧಕರು ಮೊದಲ ಬಾರಿಗೆ ಥೆಸಲೋನಿಕಕ್ಕೆ ಬಂದಾಗ, ಅವರು ಬಹಳ ಕಷ್ಟಕರವಾದ ಪರಿಸ್ಥಿತಿಗಳನ್ನು

ಅನುಭವಿಸುವವರಾಗಿ ಬಂದರು; ಆದರೆ ಅವರ ಬರೋಣವು ದೊಡ್ಡ ಆಶೀರ್ವಾದವೆಂದು ಸಾಭಿತುಗೊಂಡಿತು. ಅವರು ಅಲ್ಲಿಗೆ ಬಂದದ್ದು "ವ್ಯರ್ಥ" ಅಥವಾ "ನಿಷ್ಪ್ರಯೋಜಕ" ಆಗಿರಲಿಲ್ಲ. 1ನೇ ವಚನವು ಒಂದು ಹೊಸ ಸ್ಥಳವನ್ನು "ಎಲ್ಲರಿಗೂ ಒಳ್ಳೇದನ್ನು ಮಾಡುವದಕ್ಕೆ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ" ಮಾಡುವದಕ್ಕೆ ಒಂದು ದೊಡ್ಡ ಸಂದರ್ಭವೆಂಬದಾಗಿ ಎಣಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತದೆ (ಗಲಾತ್ಯ 6:10). ನಾವು ಸಕಾರಾತ್ಮಕವಾಗಿ, ಒಂದು ಮಂದಹಾಸ, ಆಹ್ಲಾದಕರ ಮಾತು, ಮತ್ತು ಸಹಾಯಕರವಾದ ಕ್ರಿಯೆಗಳ ಮೂಲಕ ಆರಂಭವನ್ನು ಮಾಡುವದಾದರೆ ಶಾಶ್ವತವಾಗಿ ಉಳಿಯುವಂಥ ಛಾಪುಗಳನ್ನು ಮೂಡಿಸಬಲ್ಲೆವು. ನಾವು ನಮ್ಮ ಗುರಿಯನ್ನು ತಿಳಿದವರಾಗಿದ್ದರೆ-ಏನೇ ಪರಿಸ್ಥಿತಿಯಿದ್ದಾಗ್ಯೂ, ದೇವರ ಸೇವೆ ಮಾಡುವದು-ನಮ್ಮ ಬರೋಣವು ಎಂದಿಗೂ "ವ್ಯರ್ಥ"ವಾಗುವದಿಲ್ಲ.

ನಮಗೆ ಸಿಕ್ಕ ಸಂದರ್ಭಗಳನ್ನು ಉಪಯೋಗಿಸಿಕೊಳ್ಳದೆ ಇರುವದಕ್ಕೆ ಯಾವಾಗಲೂ ಸಾಕಷ್ಟು ಕಾರಣಗಳ ದೊರಕಬಲ್ಲವು. ವಿಫಲವಾಗುವ ಭಯ ಅಥವಾ ವಿರೋಧ ವ್ಯಕ್ತವಾಗುವದೆಂಬ ಭಯವು ನಾವು ಏನು ಮಾಡತಕ್ಕದ್ದೋ ಅದನ್ನು ಮಾಡದಂತೆ ನಮ್ಮನ್ನು ತಡೆಯುತ್ತದೆ. 2ನೇ ವಚನವು 1ನೇ ವಚನದಲ್ಲಿನ ಪರಿಸ್ಥಿತಿ ಏನೆಂಬುದನ್ನು ವಿವರಿಸುತ್ತದೆ. ಬೋಧಕರಿಗೆ ಫಿಲಿಪ್ಪಿಯದಲ್ಲಿ "ಹಿಂಸೆಯೂ" ಮತ್ತು "ಅವಮಾನವೂ . . . ಸಂಭವಿಸಿತ್ತು." ಈ ರೀತಿಯಾಗಿ ಅವರು ಅನುಭವಿಸಿದ್ದರಲ್ಲಿ ಬಂಧಿಸಲ್ಪಟ್ಟು, ಅಧಿಕಾರಿಗಳ ಮುಂದೆ ಎಳೆದೊಯ್ಯಲ್ಪಟ್ಟಿದ್ದು, ಹೊಡೆತಗಳನ್ನು ಹೊಂದಿದ್ದು, ಮತ್ತು ಸೆರೆಮನೆಗೆ ಹಾಕಲ್ಪಟ್ಟಿದ್ದು ಮತ್ತು ಕಾಲುಗಳಿಗೆ ಕೋಳ ಹಾಕಲ್ಪಟ್ಟಿದ್ದು ಸೇರಿತ್ತು ಎಂಬುದನ್ನು ಅಪೊಸ್ತಲರ ಕೃತ್ಯಗಳು 16:19-23 ವಚನಗಳು ಪ್ರಕಟಗೊಳಿಸುತ್ತವೆ.

ಇಂದು ನಮ್ಮೊಂದಿಗೆ ಇವುಗಳಲ್ಲಿ ಯಾವದಾದರೊಂದು ವಿಧದಲ್ಲಿ ನಡೆದುಕೊಳ್ಳಲ್ಪಡುವದಾದರೆ, ನಾವು ಬಹಳಷ್ಟು ಅನುಕಂಪವನ್ನು, ಸ್ವಲ್ಪ ಕನಿಕರವನ್ನು, ಮತ್ತು ಕನಿಷ್ಠ ಕೆಲವು ವಾರಗಳ ಮಟ್ಟಿಗಾದರೂ ವಿಶ್ರಾಂತಿ ಹಾಗೂ ಚೇತರಿಕೆಯನ್ನು ಎದುರು ನೋಡುತ್ತೇವೆ. ಇಂತಹ ಪರಿಸ್ಥಿತಿಗಳಲ್ಲಿ ಸೋತು ಹಿಂಜರಿಯಬಹುದಾದ ಜನರನ್ನು ಅರ್ಥಮಾಡಿಕೊಳ್ಳುವದಕ್ಕೆ ಸಹ ಶಕ್ತರಾಗುತ್ತೇವೆ.

ಈ ಬೋಧಕರು ಫಿಲಿಪ್ಪಿಯದಿಂದ ಅಂಫಿಪೊಲಿ ಮತ್ತು ಅಪೊಲೋನ್ಯ ಎಂಬ ಊರುಗಳನ್ನು ಮಾರ್ಗವಾಗಿ ಥೆಸಲೋನಿಕಕ್ಕೆ ಬಂದು ಸೇರಿದವರಾಗಿ, ಅಲ್ಲಿ ಸಭಾಮಂದಿರದೊಳಗೆ ಕ್ರಿಸ್ತನ ಕುರಿತಾಗಿ ಸಾರುವದಕ್ಕಾರಂಭಿಸಿದ್ದರು (ಅಪೊಸ್ತಲರ ಕೃತ್ಯಗಳು 17:1-3). ಅದರ ಫಲಿತದಿಂದಾಗಿ ಅವರಿಗೆ ಅಲ್ಲಿ ಬಹಳಷ್ಟು ವಿರೋಧ-"ಬಹು ವಿರೋಧ"-ಉಂಟಾಗಿತ್ತು ಆದರೆ ಅವರು ಬೋಧಿಸುವದನ್ನು ಮುಂದುವರೆಸಿದ್ದರು! ಅವರ ಸಮಸ್ಯೆಯು ಕೆಲವು ಆಕ್ಷೇಪಣೆಯನ್ನು ಮಾಡುವ ವಿರೋಧಿಗಳೊಂದಿಗೆ ವ್ಯವಹರಿಸುವದಕ್ಕಿಂತಲೂ ಅತ್ಯಂಥ ಹೆಚ್ಚು ದೊಡ್ಡದಾಗಿತ್ತು. "ಅವಮಾನ" ಮತ್ತು "ಬಹು ವಿರೋಧ" ಎಂಬದನ್ನು ಅನುವಾದಿಸಿರುವ ಪದಗಳು ನಿಂದನೆ, ಹೋರಾಟ, ಸಂಘರ್ಷ, ಮತ್ತು ಕಟುವೇದನೆ ಎಂದು ಸಹ ಅರ್ಥಗಳನ್ನೊಳಗೊಂಡಿರುತ್ತವೆ! ಥೆಸಲೋನಿಕದಲ್ಲಿ ಕ್ರೈಸ್ತರನ್ನು ಹಿಂಸೆ ಪಡಿಸುತ್ತಿದ್ದ ಕೆಲವರಂತೂ ಅವರಿಗೆ ಹಾನಿಯನ್ನುಂಟು ಮಾಡಬೇಕೆಂದು

ಅತ್ಯಂಥ ದೃಢಸಂಕಲ್ಪವನ್ನು ಮಾಡಿಕೊಂಡವರಾಗಿ ಅವರ ಬೋಧಕರನ್ನು ಅರವತ್ತು ಮೈಲುಗಳಷ್ಟು ದೂರದ ಬೆರೋಯದ ಬೆನ್ನತ್ತಿಕೊಂಡು ಹೋಗಿ ಅಲ್ಲಿ ಸಮಸ್ಯೆಯನ್ನು ಎಬ್ಬಿಸಿದ್ದರು! (ನೋಡಿರಿ ಅಪೊಸ್ತಲರ ಕೃತ್ಯಗಳು 17:13.)

ಕಷ್ಟಕರವಾದ ಪರಿಸ್ಥಿತಿಗಳಲ್ಲಿ ನಾವು ನಿರಾಶೆಗೊಳ್ಳಬಹುದು. ನಾವು ಗುರಿಯನ್ನು ಬಿಟ್ಟು ಬಿಡುವದಕ್ಕೆ ಬಯಸಬಹುದು. ನಾವು ಈ ಸವಾಲುಗಳನ್ನು ದೇವರ ಇಷ್ಟದಂತೆ ಜೀವಿಸುವದಕ್ಕೆ ನಮಗಿರುವ ಹೆಚ್ಚುವರಿ ಅವಕಾಶಗಳೆಂಬದಾಗಿ ಕಾಣಬೇಕೆಂಬದು ದೇವರ ಬಯಕೆಯಾಗಿರುತ್ತದೆ. ಅವುಗಳು ದೇವರನ್ನು ಘನ ಪಡಿಸುವದಕ್ಕೆ, ಉತ್ತಮ ಮಾದರಿ ಗಳನ್ನು ತೋರಿಸುವದಕ್ಕೆ, ಮತ್ತು ಅದೇ ರೀತಿಯಲ್ಲಿ ಬಾಧೆಯನ್ನನುಭವಿಸುತ್ತಿರುವ ಇತರರನ್ನು ಧೈರ್ಯಪಡಿಸುವದಕ್ಕೆ ಇರುವ ಹೆಚ್ಚುವರಿ ಅವಕಾಶಗಳಾಗಿರುತ್ತವೆ.

ಸರಿಯಾದದ್ದನ್ನು ತಪ್ಪಾದ ಉದ್ದೇಶದೊಂದಿಗೆ ಮಾಡುವದಕ್ಕೆ ಸಾಧ್ಯವಿರುತ್ತದೆ, ಆದರೆ ದೇವರು ಒಟ್ಟಾರೆಯಾದ ಚಿತ್ರಣವನ್ನು ನೋಡುತ್ತಾನೆ. ನಮ್ಮ ಹೃದಯಗಳು ತಪ್ಪಾಗಿದ್ದಲ್ಲಿ, ನಮ್ಮ ಕ್ರಿಯೆಗಳು ಕಪಟದಿಂದ ಕೂಡಿವೆ ಎಂದಾಗುತ್ತದೆ. ನಾವು ನಮ್ಮ ಉದ್ದೇಶಗಳನ್ನು ಪರೀಕ್ಷಿಸಿಕೊಂಡು ನಮ್ಮ ಒಳ್ಳೇ ಉದ್ದೇಶಗಳ ಕುರಿತು ಜನರಿಗೆ ಹೇಳುವದು ನಮಗೆ ಉತ್ತಮವಾಗಿರುತ್ತದೆ. ತಮ್ಮ ಉದ್ದೇಶಗಳು ಪ್ರಾಮಾಣಿಕ ಹಾಗೂ ಮುಚ್ಚುಮರೆಯಿಲ್ಲದವುಗಳಾಗಿದ್ದವು ಎಂಬುದನ್ನು ಈ ಬೋಧಕರು ಘೋಷಿಸುತ್ತಿದ್ದಾರೆ (2:3). ಅವರು ಒಂದು ಒಳ್ಳೇ ಕೀರ್ತಿಗೆ ಬೆಲೆ ಕೊಡುವವರಾಗಿದ್ದರು ಯಾಕೆಂದರೆ ಅವರು “ಅಬದ್ಧ,” “ಅಶುದ್ಧ,” ಮತ್ತು “ಮೋಸ”ಗಳಿಂದ ಒಬ್ಬ ಬೋಧಕನ ಜೀವಿತಕ್ಕೆ ಆಗಬಹುದಾದ ಹಾನಿಯು ಏನಾಗಿರಬಲ್ಲದು ಎಂಬುದನ್ನು ಗುರುತಿಸಿದ್ದರು. ಅದಕ್ಕೆ ತದ್ವಿರುದ್ಧವಾಗಿ, ಅವರಿಗೆ ಒಂದು ಭಕ್ತಿಯ ಜೀವನದ ಮಾದರಿಗಿರುವ ದೊಡ್ಡ ಬೆಲೆಯನ್ನು ಅವರು ಅರಿತವರಾಗಿದ್ದರು.

ದೇವರು ನಮ್ಮ ಕೃತ್ಯಗಳ ಬಗ್ಗೆ ಕಾಳಜಿ ಹೊಂದಿದ್ದಾನೆ, ಆದರೆ ಮೊದಲು ಆತನು ಹೃದಯದ-ಅದರ ಮನೋಭಾವಗಳು, ಉದ್ದೇಶಗಳು, ಮತ್ತು ಇಂಗಿತಗಳು-ಬಗ್ಗೆ ಕಾಳಜಿ ಹೊಂದಿದ್ದಾನೆ. ಆದಿ ಸಭೆಯಲ್ಲಿದ್ದ ಕೆಲವು ಜನರು ಸುವಾರ್ತೆಯನ್ನು ಸಾರುವದರಲ್ಲಿ ಸುಳ್ಳಾದ ಉದ್ದೇಶಗಳನ್ನು ಹೊಂದಿದ್ದರು (ಫಿಲಿಪ್ಪಿ 1:15-17). ಪೌಲನು ಸಂದೇಶವನ್ನು ಕೇಳಿದವರಿಂದ ಮಹಿಮೆಯನ್ನಾಗಲು ಅಥವಾ ಹಣವನ್ನಾಗಲಿ ಪಡೆದುಕೊಳ್ಳುವದಕ್ಕೆ ಯಾವದೇ ಆಸಕ್ತಿಯನ್ನು ಹೊಂದಿರಲಿಲ್ಲ ಎಂಬದಾಗಿ ಪ್ರಾಮಾಣಿಕತೆಯಿಂದ ಹೇಳುವದಕ್ಕೆ ಶಕ್ತನಾಗಿದ್ದನು (2:6, 9).

ನಮ್ಮ ಉದ್ದೇಶಗಳನ್ನು ಬೇರೆ ಜನರು ಖಚಿತವಾಗಿ ತಿಳಿದುಕೊಳ್ಳಲಾಗದು, ಆದರೆ ದೇವರಿಗೆ ಗೊತ್ತಿದೆ. ಆದುದರಿಂದ, ಕ್ರೈಸ್ತರಾಗಿ ನಾವು ಸಾಧಿಸಿರುವ ಪ್ರಗತಿಯ ಬಗ್ಗೆ ಮೌಲ್ಯಮಾಪನ ಮಾಡಿಕೊಳ್ಳುವದಕ್ಕಿರುವ ಪ್ರಾಮುಖ್ಯವಾದ ಭಾಗವೆಂದರೆ ನಮ್ಮ ಉದ್ದೇಶಗಳನ್ನು ಪರೀಕ್ಷಿಸಿಕೊಳ್ಳುವದೇ. ಬೇರೆಯವರು ನಮ್ಮ ಮೇಲೆ ಬಹಳ ಸರಳವಾಗಿ ಅಥವಾ ಬಹಳ ಕಠೋರವಾಗಿ ತೀರ್ಪು ಮಾಡಬಹುದು, ಆದರೆ ದೇವರು ಯಾವಾಗಲೂ ಒಂದು ನಿಖರವಾದ ನಿರ್ಧಾರಣೆಯನ್ನು ಮಾಡುವನು.

ನಾವು ಈಗ ಜೀವಿಸುತ್ತಿರುವ ಏಕೆ ಜೀವಿಸುತ್ತಿದ್ದೇವೆಂಬುದಕಕ್ಕೆ ದೇವರು ಯಾವ ಕಾರಣಗಳನ್ನು ಕಾಣುತ್ತಾನೆ? ನಮ್ಮ ಉದ್ದೇಶಗಳಿಗೆ ದೇವರ ಮೌಲ್ಯಮಾಪನವನ್ನು

ಅಳವಡಿಸುವದು ಕಷ್ಟಕರವಾಗಿರುತ್ತದೆ ಯಾಕೆಂದರೆ ಮಾನವ ಮೌಲ್ಯಮಾಪನಗಳು ಹಸ್ತಕ್ಷೇಪ ಮಾಡುತ್ತವೆ. ನಮ್ಮನ್ನು ಯಾರೊಬ್ಬರೂ ಟೀಕಿಸುತ್ತಿಲ್ಲವಾದರೆ, ನಾವು ಉತ್ತಮ ಕೆಲಸವನ್ನು ಮಾಡುತ್ತಿದ್ದೇವೆಂಬದಾಗಿ ಸ್ವಾಭಾವಿಕವಾಗಿಯೇ ನಂಬುವವರಾಗಿರುತ್ತೇವೆ. ಅನೇಕರು ನಮ್ಮನ್ನು ಟೀಕಿಸುತ್ತಿರುವದಾದರೆ, ನಾವು ಆತಂಕಕ್ಕೀಡಾಗುತ್ತೇವೆ. ಕೆಲವರಿಗಂತೂ, ಟೀಕೆಯು ಸೋಲಿಗೆ ಸಮಾನವೆಂಬ ಭಾವನೆಯಿರುತ್ತದೆ. ಕ್ರೈಸ್ತರಾಗಿ, ದೇವರು ನಮ್ಮನ್ನು ಬಲ್ಲವನಾಗಿದ್ದಾನೆ ಮತ್ತು ನಮ್ಮ ಇಂಗಿತಗಳನ್ನು ಅರಿತವನಾಗಿರುತ್ತಾನೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

*ಕ್ರೈಸ್ತರಿಗೆ ಆರೈಕೆಯನ್ನು ಮಾಡುವದು ನಮ್ಮ ಪಾತ್ರವಾಗಿದೆ (2:4-11).* ಥೆಸಲೋನಿಕಕ್ಕೆ ಬಂದ ಬೋಧಕರ ಚಾರಿತ್ರ್ಯಕ್ಕೆ ಸಾಕ್ಷಿಗಳು ಯಾರೆಂದರೆ ದೇವರು ಮತ್ತು ಥೆಸಲೋನಿಕ ಸಭೆ. ಅವರ ವಶಕ್ಕೆ ಸುವಾರ್ತೆಯನ್ನು ಒಪ್ಪಿಸುವ ಮೂಲಕ ದೇವರು ತನ್ನ ಅನುಮೋದನೆಯನ್ನು ತೋರಿಸಿದ್ದನು (2:4). ಈ ಬೋಧಕರು ಥೆಸಲೋನಿಕಕ್ಕೆ ನೀಡಿದ ಆರಂಭಿಕ ಭೇಟಿಯಲ್ಲಿ ಅವರು ಎಂಥ ಮನುಷ್ಯರಾಗಿದ್ದಾರೆಂಬುದನ್ನು ಥೆಸಲೋನಿಕದವರು ವಿವೇಚಿಸಿ ತಿಳುಕೊಳ್ಳುವದಕ್ಕೆ ಶಕ್ತರಾಗಿದ್ದರು. ಒಬ್ಬ ಆರೈಕೆ ಮಾಡುವ ಬೋಧಕ ಅಥವಾ ಸಭೆಯ ನಾಯಕನಾಗಿರುವದರ ಕುರಿತಾಗಿ ಈ ವಚನಗಳು ಏನನ್ನು ಹೇಳುತ್ತವೆ?

ಮೊದಲನೆಯದಾಗಿ, ಒಬ್ಬ ಆರೈಕೆಯನ್ನು ಮಾಡುವದರಲ್ಲಿ ಮುಖಸ್ತುತಿ ಸೇರಿರುವದಿಲ್ಲ (ವಚನಗಳು 5, 6). ಪೌಲ, ಸೀಲ, ಮತ್ತು ತಿಮೊಥೆಯರು ತಮ್ಮ ಶ್ರೋತೃಗಳ ಮುಖಸ್ತುತಿ ಮಾಡುವ ಮೂಲಕ ವೈಯಕ್ತಿಕ ಹೊಗಳಿಕೆಯನ್ನು ಪಡೆಯುವದಕ್ಕಾಗಿ ಬೋಧಿಸಲಿಲ್ಲ, ಅಲ್ಲದೆ ಅವರು ತಮ್ಮ ಲೋಭವನ್ನು ತೃಪ್ತಿ ಪಡಿಸಿಕೊಳ್ಳುವದಕ್ಕೆ ಹಣವನ್ನು ಪಡೆದುಕೊಳ್ಳಲು ಸಹ ಪ್ರಯತ್ನಿಸಲಿಲ್ಲ. ಶ್ರೋತೃಗಳು ಸಂದೇಶವು ಸಾರಲ್ಪಡುವ ವಿಧದಿಂದ ಪ್ರಭಾವಿತರಾಗಬೇಕೆಂಬ ಇಚ್ಛೆಯು ಪೌಲನಿಗೆ ಇರಲೇ ಇಲ್ಲ, ಆದರೆ ಸ್ವತಃ ಸಂದೇಶವು ಅವರನ್ನು ಪ್ರಭಾವಿತಗೊಳಿಸಬೇಕೆಂಬುದು ಆತನ ಬಯಕೆಯಾಗಿತ್ತು. ಸತ್ಯ ಮತ್ತು ಸುಳ್ಳು ಎರಡನ್ನೂ ಪ್ರಚಾರ ಮಾಡುವದಕ್ಕೆ ನಿಪುಣತೆಯಿಂದ ಕೂಡಿದ ಮನವೋಲಿಕೆ, ಶ್ರೇಷ್ಠ ಭಾಷಣ ಕಲೆ, ಮತ್ತು ಹೃದಯಸ್ಪರ್ಶಿ ಪದಗಳು ಇತ್ಯಾದಿಗಳನ್ನು ಬಳಸಬಹುದಾಗಿದೆ. ಶ್ರೋತೃಗಳ ಮೇಲೆ ದೇವರ ವಾಕ್ಯದ ಸರಳತೆ ಮತ್ತು ನಿಖರತೆ ಮಾತ್ರವೇ ಪ್ರಭಾವವನ್ನು ಬೀರುವಂತೆ ನೋಡಿಕೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು.

ಪೌಲ ಮತ್ತು ಆತನ ಸಂಗಡಿಗರು ಸತ್ಯವನ್ನು ಸರಳವಾಗಿ ಥೆಸಲೋನಿಕದವರಿಗೆ ತಿಳಿಸಿದ್ದರು, ಬೋಧಕರ ಕುರಿತಾಗಿ ಶ್ರೋತೃಗಳಿಗೆ ಯಾವದೇ ಮಿಥ್ಯವಾದ ಅನಿಸಿಕೆಗಳುಂಟಾಗುವಂತೆ ಮಾಡಲಿಲ್ಲ-ಸುವಾರ್ತೆಯ ಸಂದೇಶಕ್ಕೆ ಪ್ರತ್ಯುತ್ತರ ಕೊಡುವದನ್ನು ಬಿಟ್ಟರೆ ಅವರನ್ನು ಹೊಗಳುವದಕ್ಕೆ ಯಾವ ಕಾರಣವನ್ನೂ ಅವರಿಗೆ ಒದಗಿಸಲಿಲ್ಲ. ಜನರು ನಮಗೆ "ಎಂಥ ಮಹಾನ್ ಪ್ರಸಂಗಿ!" ಎಂದು ಹೇಳುವದು ಬೇಕಾಗಿಲ್ಲ, ಅಥವಾ "ಎಂಥ ಶ್ರೇಷ್ಠವಾದ ಭಾಷಣ!" ಎಂದಾಗಲಿ ಸಹ ಹೇಳುವದು ಬೇಕಾಗಿಲ್ಲ ಆದರೆ ಬದಲಾಗಿ, "ದೇವರಿಂದ ಎಂಥ ಶ್ರೇಷ್ಠವಾದ ಸಂದೇಶ ಸಿಕ್ಕಿತಲ್ಲಾ!" ಎಂದು ಹೇಳಲ್ಪಡುವದು ಬೇಕಿರುತ್ತದೆ. ನಮ್ಮ ಗುರಿಯು ಜನರು ಯೇಸುವಿನ ಪ್ರಭಾವಕ್ಕೊಳಗಾಗಬೇಕು ಎಂದಾಗಿರತಕ್ಕದ್ದು. ಜನರನ್ನು ನಮಗೆ ಅಲ್ಲ, ಆದರೆ ರಕ್ಷಕನಾದ ಯೇಸುವಿಗೆ

ಸ್ಪಂದಿಸಬೇಕೆಂದು ಪ್ರೋತ್ಸಾಹಿಸಬೇಕು!

ಎರಡನೆಯದಾಗಿ, ಆರೈಕೆ ಮಾಡುವದರಲ್ಲಿ ವಾತ್ಸಲ್ಯವು ಸೇರಿರುತ್ತದೆ (ವಚನಗಳು 7, 8). ಬೇರೆಯವರೊಂದಿಗೆ ಕೆಲಸ ಮಾಡುವಾಗ ಕ್ರೈಸ್ತರು ಹೇಗೆ ಇರತಕ್ಕದ್ದು? ಪೌಲ, ಸೀಲ, ಮತ್ತು ತಿಮೊಥೆಯರು ಒಂದು ಚಿಕ್ಕ ಮಗುವಿಗೆ ತಾಯಿಯು ಹೇಗೋ ಹಾಗೆಯೇ ಇದ್ದರು. ಎಂಥ ದೊಡ್ಡ ಪಾಠವನ್ನು ಕಲಿಯಬಹುದಾಗಿದೆಯಲ್ಲವೇ! ಒಂದು ಚಿಕ್ಕ ಮಗುವಿಗೆ ಕೊಡಲ್ಪಡುವ ಎಲ್ಲಾ ಸಮಯ, ಆರೈಕೆ, ಮತ್ತು ಗಮನವನ್ನು ಕುರಿತು ಯೋಚಿಸಿರಿ. ತಾನು ಸ್ವತಃ ಮಾತಾಡಲು, ನಡೆಯುವದಕ್ಕೆ, ಅಥವಾ ಆಹಾರ ಸೇವಿಸುವದಕ್ಕಾದಷ್ಟು ಅಸಹಾಯಕ ನಾಗಿರುವ ಕೂಸಿಗ ಒಬ್ಬ ತಾಯಿ ಅಥವಾ ದಾದಿಯು ನಿರಂತರವಾದ ಪೋಷಣೆಯನ್ನು ಒದಗಿಸುತ್ತಾಳೆ. ಕೂಸಿಗೆ ಬೇಕಾದದ್ದೆಲ್ಲವೂ ದೊರಕುವಂತೆಯೂ ಆತನ ದೇಹಕ್ಕೆ ಅತಿ ಚಿಕ್ಕ ಹಾನಿ ಸಹ ಆಗಬಾರದೆಂದೂ ತಾಯಿಯು ಆತನ ಎಲ್ಲಾ ಅಗತ್ಯತೆಗಳನ್ನು ದಯೆ ಹಾಗೂ ವಾತ್ಸಲ್ಯಗಳಿಂದ ಒದಗಿಸುವದಕ್ಕೆ ಅಪೇಕ್ಷಿಸುತ್ತಾಳೆ. ಆಕೆಯ ಕೈಯಲ್ಲಿ ದೇವರಿಂದ ಕೊಡಲ್ಪಟ್ಟಿರುವ ಒಂದು ಜೀವ ಇರುತ್ತದೆ! ಅದು ಒಬ್ಬ ಬೋಧಕನೆಂಬಂತೆ ಅನ್ನಿಸುತ್ತಿದೆಯೋ?

ನಮ್ಮ ಬೋಧಕರ ತರಬೇತಿಯಲ್ಲಿ "ಸರ್ಪಗಳಂತೆ ಜಾಣರೂ ಪಾರಿವಾಳಂತೆ ನಿಷ್ಕಪಟಿಗಳೂ ಆಗಿರುವ" ಬೋಧಕರನ್ನು ತರಬೇತುಗೊಳಿಸುವ ಗುರಿಯು ಇರುತ್ತದೋ (ಮತ್ತಾಯ 10:16)? ನಾನು ಒಂದು ಬೋಧಕರ ತರಬೇತಿ ಶಾಲೆಯೊಂದಿಗೆ ಕೆಲಸ ಮಾಡುತ್ತೇನೆ, ಮತ್ತು ಒಬ್ಬ ಬೋಧಕನು ಒಮ್ಮೆ ಪದವಿಯನ್ನು ಮುಗಿಸಿದ್ದ ವಿದ್ಯಾರ್ಥಿಗಳಲ್ಲಿ ಕೆಲವರನ್ನು "ವಾತ್ಸಲ್ಯವುಳ್ಳವರು" ಎಂದು ಶ್ಲಾಘಿಸುವವನಾಗಿ, ಇದು ಬೋಧಕರಿಗೆ ಇರಬೇಕಾದ ಒಂದು ವಿಶೇಷ ಅಗತ್ಯವಾಗಿರುತ್ತೆಂದು ಎತ್ತಿ ತೋರಿಸಿದನು (2 ತಿಮೊಥೆ 2:25). ಆ ಸಮಯದ ತನಕ ನಾನು ಅದರ ಕುರಿತಾಗಿ ಗಂಭೀರವಾಗಿ ಯೋಚಿಸಿರಲಿಲ್ಲ; ಆದರೆ ಅದು ಬೋಧಕರನ್ನು, ಉಪದೇಶಕರನ್ನು, ಹಿರಿಯರನ್ನು, ಮತ್ತು ಸಭಾಸೇವಕರನ್ನು ತರಬೇತುಗೊಳಿಸುವದರಲ್ಲಿ ನಮಗಿರಬೇಕಾದ ಗುರಿಗಳಲ್ಲಿ ಒಂದಾಗಿರತಕ್ಕದ್ದು. ನಾವು ಶಕ್ತಿ, ಅಧಿಕಾರ, ಮತ್ತು ಪ್ರಾಬಲ್ಯತೆಯ ಪ್ರಭಾವಕ್ಕೊಳಗಾಗುವ ಶೋಧನೆಯನ್ನು ಎದುರಿಸುವಾಗ, ಯೇಸುವಿನ ಕೆಲಸದ ವರ್ಣನೆಯನ್ನು ಜ್ಞಾಪಕಕ್ಕೆ ತಂದುಕೊಳ್ಳಿರಿ: "ಜಜ್ಜಿದ ದಂಟನ್ನು ಮುರಿದುಹಾಕದೆಯೂ ಆರಿಹೋಗುತ್ತಿರುವ ದೀಪವನ್ನು ನಂದಿಸದೆಯೂ . . ." (ಮತ್ತಾಯ 12:20).

ಥೆಸಲೋನಿಕದವರನ್ನು ಕುಟುಂಬದಲ್ಲಿನ ಕಿರಿಯ ಸದಸ್ಯರೆಂಬಂತೆ ಕಾಣುವ ಮೂಲಕ, ಪೌಲ ಮತ್ತು ಆತನ ಸಂಗಡಿಗರು ತಮ್ಮ ಹೊಸದಾಗಿ ಹುಟ್ಟಿರುವ "ಮಕ್ಕಳ" ಜೊತೆಯಲ್ಲಿ "ತಂದೆತಾಯಿಗಳಿಗೆ" ಇರುವ ಬಲವಾದ ಬಂಧವನ್ನು ಕಂಡರು. ಇದು ಥೆಸಲೋನಿಕದವರು ಅವರಿಗೆ "ಅತಿ ಪ್ರಿಯರಾದ" ಕಾರಣ ಅವರ ಮೇಲಿದ್ದ "ಮಮತೆ"ಯನ್ನು ಎಂಬದಾಗಿ ವರ್ಣಿಸಲ್ಪಟ್ಟಿದೆ (2:8).

ಹೊಸ ಕ್ರೈಸ್ತರ ಪರಿಸರದಲ್ಲಿ ಒಂದು ಕುಟುಂಬ ಸ್ನೇಹದ ಮನೋಭಾವವು ಇರಬೇಕೆಂಬುದು ದೇವರ ಬಯಕೆಯಾಗಿತ್ತು. ಅವರು ಒಂದು ಕುಟುಂಬದ, ಒಂದು ಸಹೋದರತ್ವದ ಭಾಗವಾಗಿರಬೇಕು ಎಂಬುದು ಆತನ ಇಚ್ಛೆಯಾಗಿತ್ತು. ಈ ಅನುಭವವು

ಇರುವದರಿಂದ ಅವರು ವಿಗ್ರಹಾರಾಧನೆಯನ್ನು ತಿರಸ್ಕರಿಸಿ ಸತ್ಯದೇವರನ್ನು ಸೇವಿಸುವವರಾದಾಗ ಅವರ ಭೂಲೋಕದ ಕುಟುಂಬಗಳಿಂದ, ಮತ್ತು ಅವರ ಸಮುದಾಯದ ಇತರ ಸದಸ್ಯರಿಂದ ಉಂಟಾದ ಬಹಿಷ್ಕಾರ ಮತ್ತು ಹಿಂಸೆಯ ನೋವುಗಳಿಂದ ಚೇತರಿಸಿಕೊಳ್ಳುವದಕ್ಕೆ ಸಹಾಯವಾಗುವದು. ಅವರು ದೇವರ ಕುಟುಂಬದ ಭಾಗವಾಗಿರುವದರಿಂದ ಸಿಕ್ಕುವ ಸಂತೋಷ ಮತ್ತು ಭದ್ರತೆಯನ್ನು ಅನುಭವಿಸುವರು.

ಮೂರನೆಯದಾಗಿ, ಆರೈಕೆಯಲ್ಲಿ ಕೆಲಸವು ಸೇರಿರುತ್ತದೆ (ವಚನಗಳು 9-11). ಬೇರೆ ಎಲ್ಲರಂತೆಯೇ, ಬೋಧಕರು ಮತ್ತು ಉಪದೇಶಕರು ಸಹ ಸೋಮಾರಿಗಳಾಗಿರಬೇಕೆಂಬ ಶೋಧನೆಗೆ ಒಳಗಾಗಬಲ್ಲರು. 9ನೇ ವಚನವು ಒಂದು ಹೊರಗಿನ ಪಟ್ಟಣಕ್ಕೆ ಹೋಗಿ ಸುವಾರ್ತೆಯನ್ನು ಸಾರುವದಕ್ಕೆ ಕಠಿಣ ಪರಿಶ್ರಮದ ಅಗತ್ಯವಿತ್ತೆಂಬ ಅನಿಸಿಕೆಯನ್ನುಂಟು ಮಾಡುತ್ತದೆ-ಮತ್ತು ಅದು ಖಂಡಿತವಾಗಿಯೂ ಕಠಿಣ ಪರಿಶ್ರಮವೇ ಆಗಿತ್ತು! ಇಲ್ಲಿ ಮುಖ್ಯವಾಗಿ ಅದೇ ಪರಿಸ್ಥಿತಿಯಿತ್ತು. ಈ ಬೋಧಕರು ಉಪದೇಶವನ್ನು ಮಾಡುವದರ ಜೊತೆಗೆ ತಮ್ಮ ಆರ್ಥಿಕ ಸಹಾಯಕ್ಕಾಗಿ ಕೆಲಸವನ್ನು ಸಹ ಮಾಡುತ್ತಿದ್ದರಾದ್ದರಿಂದ, ವಾಸ್ತವಿಕದಲ್ಲಿ ಅವರಿಗೆ ಎರಡು ಕೆಲಸಗಳಿದ್ದವು.

ಸುವಾರ್ತೆಯನ್ನು ಸಾರುವವನು ಅದರಿಂದಲೇ ಬದುಕಬೇಕೆಂಬದು ದೇವರ ಅನುಮೋದನೆಯಾಗಿರುತ್ತದೆಂದು ಪೌಲನು ಅರ್ಥಮಾಡಿಕೊಂಡಿದ್ದನು (1 ಕೊರಿಂಥ 9:6, 7; ಫಿಲಿಪ್ಪಿ 4:15-17). ಅದೇ ಸಮಯದಲ್ಲಿ, ಸಭೆಗಳು ತಮಗೆ ಆರ್ಥಿಕ ಸಹಾಯವನ್ನು ಮಾಡಬೇಕೆಂದು ಬೋಧಕರು ಒತ್ತಾಯಪಡಿಸಲಿಲ್ಲ. ಅವರು ಈಗಾಗಲೇ ಥೆಸಲೋನಿಕದವರಿಗಿರುವ ಬೇರೆ ಕಷ್ಟಗಳ ಜೊತೆಯಲ್ಲಿ ತಮಗೆ ಸಹಾಯ ಮಾಡಬೇಕೆಂಬ ಭಾರವನ್ನು ಅವರ ಮೇಲೆ ಹಾಕುವದಕ್ಕೆ ಇಷ್ಟಪಡಲಿಲ್ಲ. ಈ ಕೆಲಸಗಾರರು ಕ್ರೈಸ್ತೀಯ ಪ್ರೋತ್ಸಾಹವನ್ನು ಒದಗಿಸುವದಕ್ಕಾಗಿ ತಮ್ಮ ಜೀವಗಳನ್ನೇ ಅರ್ಪಿಸಿದ್ದ ಒಂದು ವಿಧವು ಇದಾಗಿತ್ತು.

ಸ್ಪಷ್ಟವಾಗಿರುವ ಪ್ರಕಾರ, ಬೆಂಬಲಿಸಲ್ಪಡುವದಕ್ಕೆ ಬೋಧಕರಿಗಿರುವ ಹಕ್ಕನ್ನು ಕ್ರೈಸ್ತರು ಗೌರವಿಸತಕ್ಕದ್ದು. ಬೋಧಕರು ಸುವಾರ್ತೆಯನ್ನು ಸಾರುವದಕ್ಕೆ ಸಹಾಯವನ್ನು ಪಡೆಯಲಿ ಅಥವಾ ಪಡೆಯದಿದ್ದರೂ ಸರಿಯೇ, ಕಠಿಣವಾಗಿ ಪರಿಶ್ರಮ ಪಡುವದನ್ನು ಕಲಿತುಕೊಳ್ಳಬೇಕು. ಬೋಧಿಸುವಿಕೆಯಲ್ಲಿ ಸೋಮಾರಿತನಕ್ಕೆ ಅಥವಾ ಕೆಲಸದ ಕಡೆಗೆ ಉಪೇಕ್ಷೆಯನ್ನು ಹೊಂದಿರುವದಕ್ಕೆ ಅವಕಾಶವೇ ಇರುವದಿಲ್ಲ.

ಅನೇಕ ಕೆಲಸಗಳು ತರಬೇತಿ, ಪ್ರತಿಭೆ, ಮತ್ತು ಸಾಮರ್ಥ್ಯಗಳ ಅಗತ್ಯವನ್ನು ಕೇಳುತ್ತವೆ. ಎಷ್ಟು ಸಾರಿ ನೀವು ಒಂದು ಉದ್ಯೋಗಕ್ಕೆ ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ದುಡಿಯುವಿಕೆಗಳನ್ನು ಅರ್ಹತೆಗಳೆಂದು ಪ್ರಸ್ತಾಪಿಸಲ್ಪಟ್ಟಿದ್ದನ್ನು ನೋಡಿರುವಿರಿ? ಖಂಡಿತವಾಗಿಯೂ ಇವುಗಳ ಜೀವಿತದಲ್ಲಿನ ಯಾವದೇ ಭಕ್ತಿಯ ಪಾತ್ರವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವಂಥ ಅರ್ಹತೆಗಳಾಗಿರುತ್ತವೆ. ಕೆಲವು ಸಭೆಗಳು ತಮ್ಮ ಕೆಲಸಗಾರರಲ್ಲಿ ಶಿಕ್ಷಣ, ವಾಗ್ಮಿತೆ, ಮತ್ತು ವ್ಯಾಪಾರದಲ್ಲಿ ಯಶಸ್ಸುಗಳಂತಹ ಅರ್ಹತೆಗಳನ್ನು ಕೇಳಿರುತ್ತವೆ, ಆದರೆ 2:10ರಲ್ಲಿ ಕೊಡಲಾಗಿರುವ ಬೈಬಲಿನ ಉದಾಹರಣೆಯನ್ನು ಅಸಡ್ಡೆ

ಮಾಡಿರುತ್ತವೆ: “ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ *ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವು.*” (ಒತ್ತಿ ಹೇಳಿದ್ದು ನನ್ನದು.) ಈ ತ್ರಿವಳಿ ಪದವು ನಮಗೆ ಎಷ್ಟೊಂದು ಪರಿಚಿತವಾಗಿರುತ್ತದೆಂದರೆ ಅವುಗಳ ನಡುವೆ ವ್ಯತ್ಯಾಸವನ್ನು ಮಾಡುವದಕ್ಕೆ ಕಷ್ಟಪಡಬಹುದಾಗಿದೆ. ಅಂಥ ಸಂಯೋಜನೆಗಳು ಸಾಮಾನ್ಯವಾಗಿ ಮೂರು ಬೇರೆ ಬೇರೆ ಯೋಚನೆಗಳಾಗಿರಬೇಕೆಂಬ ಉದ್ದೇಶ ಕ್ಕಾಗಿರುವದಿಲ್ಲ, ಆದರೆ ಒಂದನ್ನೊಂದು ಬಲವರ್ಧಿಸುವ ಮತ್ತು ಒಂದು ಪ್ರಾಮುಖ್ಯವಾದ ಗುಣಸ್ವಭಾವವನ್ನು ಒತ್ತಿ ಹೇಳುವ ಉದ್ದೇಶಕ್ಕಾಗಿರುತ್ತದೆ.

ಬೋಧಕರು ಒಂದು ಉನ್ನತ ಮಟ್ಟದ ನಡವಳಿಕೆಯನ್ನು ಕಾಪಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಅವರು ಮಾಡಿದ ಯಾವದೇ ಕೆಲಸವು ದೇವರ ಮಾನದಂಡದ ಪ್ರಕಾರ ನೆರವೇರಿಸಲ್ಪಟ್ಟದ್ದಾಗಿತ್ತು. ಇದರರ್ಥವು ಅವರು ಎಂದಿಗೂ ತಪ್ಪು ನಿರ್ಣಯಗಳನ್ನೇ ಮಾಡಲಿಲ್ಲ ಮತ್ತು ಆ ಕಾರಣದಿಂದ ಎಂದಿಗೂ ಪಾಪ ಮಾಡಿದವರಾಗಲಿಲ್ಲ ಎಂದಾಗಿರುವದಿಲ್ಲ. ಇದು ತೋರಿಸುವದೇನೆಂದರೆ ಅವರು ಒಳ್ಳೇದೋ ಅಥವಾ ಕೆಟ್ಟದ್ದೋ, ಯಾವ ಪರಿಸ್ಥಿತಿಯಿದ್ದರೂ ಅದು ದೇವರ ಗುರಿಗಳನ್ನು ಸಾಧಿಸುವದಕ್ಕಿರುವ ದೇವರ ಮಾರ್ಗವೆಂದಾಗುವ ಹಾಗೆ, ಅವರು ಅದಕ್ಕೆ ದೇವರ ಮಾನದಂಡವನ್ನು ಅನ್ವಯಿಸಿದರು ಎಂಬದೆ. ಬೋಧಕರು ಹೊರಟು ಹೋದಾಗ, ಥೆಸಲೋನಿಕದವರು, “ಈ ಸಮಸ್ಯೆಗಳ ಬಗ್ಗೆ ಅವರು ಮಾತಾಡಲೇ ಇಲ್ಲ; ಈ ಪಾಪಗಳ ಬಗ್ಗೆ ಪಶ್ಚಾತ್ತಾಪವನ್ನೇ ಪಡಲಿಲ್ಲ” ಎಂಬದಾಗಿ ಹೇಳುವದಕ್ಕಾಗಲಿಲ್ಲ. ಅವರ ಕೀರ್ತಿಯ ವಿರುದ್ಧವಾಗಿ ಯಾವದೇ ಆಧಾರಪೂರ್ವಕವಾದ ಆರೋಪಗಳನ್ನು ಮಾಡುವದಕ್ಕೆ ಸಾಧ್ಯವಿರಲಿಲ್ಲ.

ಈ ಬೋಧಕರ ನಡವಳಿಕೆಯ ಕುರಿತಾಗಿ 11ನೇ ವಚನವು ಇನ್ನೊಂದು ತ್ರಿವಳಿ ಪದವನ್ನು ಬಳಸುತ್ತದೆ: “ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ *ಬುದ್ಧಿಹೇಳುತ್ತಾ ಧೈರ್ಯಪಡಿಸುತ್ತಾ . . . ಖಂಡಿತವಾಗಿ ಹೇಳುತ್ತಾ* ಇದ್ದೆವು.” (ಒತ್ತಿ ಹೇಳಿದ್ದು ನನ್ನದು.) ಒಬ್ಬ ತಂದೆಯು ತನ್ನ ಮಕ್ಕಳನ್ನು ಪರಿಪಕ್ವತೆಯೆಡೆಗೆ ನಡಿಸುವದಕ್ಕೋಸ್ಕರ ಸಾಧ್ಯವಾದ ಎಲ್ಲಾ ಬುದ್ಧಿವಾದ, ಮನವೊಲಿಸುವಿಕೆ, ಮತ್ತು ಎಚ್ಚರಿಸುವಿಕೆಯನ್ನು ಬಳಸುವವನಾಗಿರುತ್ತಾನೆ, ಅದೇ ಸಮಯದಲ್ಲಿ ಅವರನ್ನು ಮನಗುಂದಿಸುವದರಿಂದ ಅಥವಾ ಅವಮಾನಿಸುವದರಿಂದ ದೂರವಿರುತ್ತಾನೆ (ಎಫೆಸ 6:4). ಸರಿಯಾದ ಮಕ್ಕಳನ್ನು ಬೆಳೆಸುವಿಕೆಯಲ್ಲಿ ಹೇಗೆ ತಂದೆತಾಯಿಗಳು ತಮ್ಮ ಜೀವಗಳನ್ನೇ ಅರ್ಪಿಸಿಕೊಳ್ಳುವದು ಸೇರಿರುತ್ತದೋ, ಹಾಗೆಯೇ ಸರಿಯಾದ ಬೋಧಿಸುವಿಕೆಯಲ್ಲಿ ಬೋಧಕನು ತನ್ನ ಜೀವಿತವನ್ನು ಒಂದು ಮಾದರಿಯಾಗಿ ಅರ್ಪಿಸಿಕೊಳ್ಳುವದನ್ನು ಒಳಗೊಂಡಿರತಕ್ಕದ್ದು.

ಅದೇ ರೀತಿಯಲ್ಲಿಯೇ, ಬೋಧಕರು ವಿದ್ಯಾರ್ಥಿಗಳಿಗೆ ಪರಿಪಕ್ವಗೊಳ್ಳುವದಕ್ಕಾಗಿ ಒಂದು ಉಪದೇಶದ ಪ್ರೋತ್ಸಾಹಕ ದಾರಿಯಾಗಬೇಕು. ವಾಸ್ತವದಲ್ಲಿ, ಎಲ್ಲಾ ಕ್ರೈಸ್ತರು ತ್ಯಾಗವನ್ನು ಮಾಡಬೇಕು ಮತ್ತು ತಮ್ಮ ಒಬ್ಬರೊಂದಿಗೊಬ್ಬರ ಸಂಬಂಧದಲ್ಲಿ ತಾಳ್ಮೆಯಿಂದ ಕಲಿಸುವವರಾಗಿರಬೇಕು: “ಒಬ್ಬರನ್ನೊಬ್ಬರು ಸಂತೈಸಿಕೊಂಡು ಒಬ್ಬ ಭಕ್ತಿಯನ್ನೊಬ್ಬರು ವೃದ್ಧಿಪಡಿಸುತ್ತಾ ಇರ್ರಿ” (5:11). ದೇವರು ತನ್ನ ಜನರ ಹಿತಕ್ಕೋಸ್ಕರ ಇರಬೇಕೆಂದು

ಬಯಸುವ ಶ್ರದ್ಧೆಯುಳ್ಳ, ತಾಳ್ಮೆಯುಳ್ಳ, ನಿರ್ದೋಷಿಗಳಾದ ಜನರು ನಾವಾಗಿರುವದಕ್ಕೆ ಗುರಿಯಿಟ್ಟುಕೊಳ್ಳೋಣ! ತಾನು ಪೋಷಣೆ ಮಾಡುವ ತಂದೆತಾಯಿಗಳಂತೆ, ಪ್ರೀತಿಯುಳ್ಳ ತಂದೆಯಂದಿರಂತೆ ಮತ್ತು ಆರೈಕೆ ಮಾಡುವ ತಾಯಿಯಂದಿರಂತೆ ವರ್ತಿಸತಕ್ಕದ್ದು!

*ದೇವರನ್ನು ಮಹಿಮೆ ಪಡಿಸುವದು ನಮ್ಮ ಗುರಿ (2:12).* ಕ್ರೈಸ್ತ ಜೀವನವು ಕ್ರಿಸ್ತನನ್ನು ಪ್ರತಿಬಿಂಬಿಸಬೇಕು. ಹೊಸ ಒಡಂಬಡಿಕೆಯು ಆಗಾಗ್ಗೆ "ಯೋಗ್ಯರಾಗಿರುವದು" ಎಂಬ ಪದವನ್ನು ಬಳಸುತ್ತದೆ. 2:12ರಲ್ಲಿ ಕ್ರೈಸ್ತರನ್ನು ". . . ಕರೆಯುವ ದೇವರಿಗೆ ಯೋಗ್ಯರಾಗಿ ನಡೆಯಬೇಕೆಂದು" ಬೇಡಿಕೊಳ್ಳಲಾಗಿರುತ್ತದೆ. ಇದರ ಅರ್ಥವೇನಾಗಿರುತ್ತದೆ? ದೇವರು ಅವರ ಜೀವಿತಗಳಲ್ಲಿ ಪರಿಣಾಮವನ್ನುಂಟು ಮಾಡಿದ್ದಾನೆಂಬುದನ್ನು ತೋರಿಸುವಂತೆ ಥೆಸಲೋನಿಕದವರನ್ನು ಪ್ರೋತ್ಸಾಹಿಸಲಾಗುತ್ತಿದೆ. ದೇವರು ಏನಾಗಿರುತ್ತಾನೆ ಮತ್ತು ತನ್ನ ಜನರು ಹೇಗೆ ಜೀವಿಸಬೇಕೆಂಬುದು ಆತನ ಅಪೇಕ್ಷೆಯಾಗಿರುತ್ತದೆಂಬುದನ್ನು ಜನರಿಗೆ ತೋರ್ಪಡಿಸುವ ರೀತಿಯಲ್ಲಿ ಕ್ರೈಸ್ತರು ವರ್ತಿಸಬೇಕು.

ದೇವರು ಏನಾಗಿರುತ್ತಾನೆ ಮತ್ತು ಆತನು ಏನನ್ನು ಅಪೇಕ್ಷಿಸುತ್ತಾನೆಂಬುದನ್ನು ಕಲಿತುಕೊಳ್ಳುವ ಈ ಪ್ರಕ್ರಿಯೆಯು ಪರಿಪಕ್ವಗೊಳ್ಳುವಿಕೆಯ ಭಾಗವಾಗಿರುತ್ತದೆ. ಹೊಸದಾಗಿ ಪರಿವರ್ತನೆಗೊಂಡವರು ದೇವರ ಬಗ್ಗೆ ಮತ್ತು ಅವರ ಜೀವಿತಗಳಿಗಾಗಿ ಆತನು ಹೊಂದಿರುವ ಚಿತ್ತದ ಕುರಿತು ಎಲ್ಲವನ್ನೂ ತಿಳಿದಿರಬೇಕು ಎಂದು ಎದುರು ನೋಡಲಾಗುವದಿಲ್ಲ, ಆದರೆ ಅವರಿಂದ "ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳುವದ"ನ್ನು ಎದುರು ನೋಡಲಾಗುತ್ತದೆ (ಎಫೆಸ 5:10). ಈ ತತ್ವವನ್ನು ಕಲಿತುಕೊಂಡು ಅನ್ವಯ ಪಡಿಸಿಕೊಳ್ಳುವದು ಕ್ರೈಸ್ತೀಯ ಬೆಳವಣಿಗೆಗೆ ತಳಹದಿಯಾಗಿರುತ್ತದೆ.

12ನೇ ವಚನವು ದೇವರ ರಾಜ್ಯ ಮತ್ತು ಮಹಿಮೆಯಲ್ಲಿ ಪಾಲುಗಾರರಾಗುವದಕ್ಕೆ ನಾವು ಯೋಗ್ಯರು ಎಂಬದಾಗಿ ಹೇಳುವದಿಲ್ಲ. ಅದು ನಮ್ಮಿಂದ ಎಂದಿಗೂ ಸಂಪಾದಿಸಿಕೊಳ್ಳಲಾಗದ ವರವಾಗಿರುತ್ತದೆ. ನಮ್ಮ ಇಂಗಿತವು ಭಕ್ತಿಯುಳ್ಳ ಜೀವಿತಗಳನ್ನು ನಡಿಸಬೇಕು ಎಂಬುದನ್ನು ಅದು ಕಲಿಸುತ್ತಿದೆ, ಅದು ಯೋಗ್ಯವಾದ ಇಂಗಿತವೇ ಆಗಿದೆ. ನಾವು ಔದಾರ್ಯತೆಯುಳ್ಳ ಮತ್ತು ತನ್ನ ರಾಜ್ಯವನ್ನು ಹಾಗೂ ಮಹಿಮೆಯನ್ನು ನಮ್ಮೊಬ್ಬೊಬ್ಬರೊಂದಿಗೂ ಸಂತೋಷವಾಗಿ ಹಂಚಿಕೊಳ್ಳುವವನಾದ ದೇವರಿಗೆ ಕೃತಜ್ಞತೆಯುಳ್ಳವರಾಗಿರಬಲ್ಲೆವು! ಆತನ ಗುಣಸ್ವಭಾವವನ್ನು ಪ್ರತಿಬಿಂಬಿಸುವಂಥ ಜೀವಿತವನ್ನು ನಾವು ನಡಿಸಬೇಕು ಎಂಬುದನ್ನು ಬಯಸುತ್ತಾನೆ. ಜನರು ನಮ್ಮಲ್ಲಿ ದೇವರನ್ನು ಕಾಣುತ್ತಾರೋ?

*ಮುಕ್ತಾಯ.* ಬೋಧಕರು ಈ ವಚನಗಳಲ್ಲಿನ ಪಾಠಗಳನ್ನು ಕಲಿತುಕೊಂಡರೆ ಅದು ಎಂಥಾ ದೊಡ್ಡ ವ್ಯತ್ಯಾಸವನ್ನುಂಟು ಮಾಡುವದು! ನಾವು ನಮ್ಮ ನಾಯಕನಾದ, ಯೇಸುವನ್ನು ಅನುಸರಿಸಬೇಕೆಂದು ತೀರ್ಮಾನ ಮಾಡಿಕೊಳ್ಳೋಣ, ಮತ್ತು ಆತನನ್ನು ಅನುಸರಿಸುವವರನ್ನು ನಾವು ಅನುಸರಿಸಬೇಕೆಂದು ತೀರ್ಮಾನ ಮಾಡಿಕೊಳ್ಳೋಣ. ತಮ್ಮ ಜೀವಿತಗಳಿಂದ ಮತ್ತು ಅವರ ಪಾಠಗಳಿಂದ ಸಹ ಜೊತೆಯ ಕ್ರೈಸ್ತರಿಗೆ ಸಹಾಯ ಮಾಡುವಂತೆ ಬೋಧಕರಿಗೆ ಮತ್ತು ನಾಯಕರಿಗೆ ಪ್ರೋತ್ಸಾಹ ಮಾಡುತ್ತೇವೆಂದು

ತೀರ್ಮಾನಿಸಿಕೊಳ್ಳೋಣ ಮತ್ತು ಯೇಸುವನ್ನು ಹಿಂಬಾಲಿಸುವ ಹಾಗೆ ಬೇರೆಯವರಿಗೆ ಸಹಾಯ ಮಾಡುವಂತಹ ಜೀವಿತವನ್ನು ನಡಿಸುವದಕ್ಕೆ ತೀರ್ಮಾನ ಮಾಡಿಕೊಳ್ಳೋಣ. TP

## ಪೌಲನು ಧೈರ್ಯಶಾಲಿಯಾಗಿದ್ದನು (2:2, 3)

ಪೌಲನು ಒಬ್ಬ ಆದರ್ಶ ಕ್ರೈಸ್ತ ಸಂದೇಶಕನಾಗಿದ್ದನು. ಕ್ರಿಸ್ತನು "ಎಲ್ಲಾದರಲ್ಲಿ ಪ್ರಮುಖನಾಗಬೇಕು" ಎಂಬುದು ಆತನ ಬಯಕೆಯಾಗಿತ್ತು (ಕೊಲೊಸ್ಸೆ 1:18). ಆತನು ತಾನು ಸ್ವತಃ ಪಾಪಿಯೆಂಬುದನ್ನು ಒಪ್ಪಿಕೊಂಡನು (1 ತಿಮೊಥೆ 1:15). ಪೌಲನು ಯಾವ ವಿಧವಾದ ಸಂದೇಶಕನಾಗಿದ್ದನೆಂಬುದನ್ನು 1 ಥೆಸಲೋನಿಕ 2ನೇ ಅಧ್ಯಾಯವು ಬಣ್ಣಿಸುತ್ತದೆ.

ಕೆಲವು ಸಮಯಗಳಲ್ಲಿ, ಪೌಲನು ಒಬ್ಬ ಧೈರ್ಯಶಾಲಿ ಸಂದೇಶಕನಾಗಿರಬೇಕಾಗಿತ್ತು. ಆತನಿಗೆ ಫಿಲಿಪ್ಪಿಯಲ್ಲಿ ನಡೆದುಕೊಳ್ಳಲ್ಪಟ್ಟ ರೀತಿಯಿಂದ ಆತನು ಸಂಯಮವನ್ನು ತೋರಿಸುವದಕ್ಕೆ ಕಾರಣವನ್ನು ಹೊಂದಿದ್ದಾಗ್ಯೂ (ನೋಡಿರಿ ವ. 2; ಅಪೊಸ್ತಲರ ಕೃತ್ಯಗಳು 16:16-24), ತನಗೆ ಭದ್ರತೆಯನ್ನು ಒದಗಿಸುವನೆಂದು ದೇವರಲ್ಲಿ ಭರವಸವಿಟ್ಟನು. ಆತನು "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" ಎಂದು ಹೇಳಿದ ಇತರ ಅಪೊಸ್ತಲರಂತೆ ಇದ್ದನು (ಅಪೊಸ್ತಲರ ಕೃತ್ಯಗಳು 5:29).

*ಆತನ ಸಂದೇಶವು ಅತ್ಯುತ್ತಮವಾಗಿತ್ತು*. ಅದು "ದೇವರ ಸುವಾರ್ತೆ" ಆಗಿತ್ತು (ವ. 2), ಪರಲೋಕದಿಂದ ಬಂದ ದೇವರ ಶುಭವಾರ್ತೆಯಾಗಿತ್ತು. ಅದು ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಸುತ್ತ ಕೇಂದ್ರಿಕೃತವಾದ, ರಕ್ಷಣೆಯುಂಟು ಮಾಡುವ ಸಂದೇಶವಾಗಿತ್ತು (ನೋಡಿರಿ 1 ಕೊರಿಂಥ 15). ಕೆಲವರು ಒಂದು ಸುಳ್ಳು ಸುವಾರ್ತೆಯನ್ನು ಸಾರುತ್ತಿದ್ದರು, ಆದರೆ ಪೌಲನು ರಕ್ಷಣೆಯನ್ನುಂಟು ಮಾಡುವದಕ್ಕೆ ದೇವರ ಶಕ್ತಿಯನ್ನೊಳಗೊಂಡಿದ್ದ, ಸತ್ಯ ಸುವಾರ್ತೆಯನ್ನು ಮಾತ್ರವೇ ಪೌಲನು ಸಾರುತ್ತಿದ್ದನು (ರೋಮಾ 1:16).

*ಆತನ ಜೀವನ ರೀತಿಯು ನಿರ್ಮಲವಾದದ್ದಾಗಿತ್ತು*. ಆತನು ಹೀಗೆ ಬರೆದನು, "ನಮ್ಮ ಬೋಧನೆಯು ಅಬದ್ಧವಲ್ಲ, ಅಶುದ್ಧವಲ್ಲ, ಮೋಸವಲ್ಲ" (ವ. 3). ಪೌಲನ ಜೀವನದ ರೀತಿಯು ಆತನ ಸಂದೇಶಕ್ಕೆ ವಿಶ್ವಾಸರ್ಹತೆಯನ್ನು ಒದಗಿಸಿತ್ತು. ಆತನು "ಅಶುದ್ಧತೆಯ" ದೋಷವನ್ನು ಹೊತ್ತವನಾಗಿರಲಿಲ್ಲ, ಅದು ಬಹುಶಃ ಲೈಂಗಿಕ ಅಶುದ್ಧತೆಯನ್ನು ಸೂಚಿಸಿ ಹೇಳಿದ್ದಾಗಿರಬಹುದಾಗಿದೆ. ವಿಗ್ರಹಾರಾಧಕ ಜನರ ದೇವಾಲಯಗಳಲ್ಲಿ ಅನೈತಿಕವಾದ ಲೈಂಗಿಕ ಚಟುವಟಿಕೆಗಳು ಸಾಮಾನ್ಯವಾಗಿರುತ್ತಿದ್ದವು, ಆದರೆ ಪೌಲನು ಆತ್ಮೀಕವಾದದ್ದನ್ನು, ಅಂದರೆ ದೇಹವನ್ನು ನಿಗ್ರಹಿಸಿಕೊಳ್ಳುವದನ್ನು ಒತ್ತಿ ಹೇಳಿದನು.

*ಆತನ ಉದ್ದೇಶ ಒಳ್ಳೇದಾಗಿತ್ತು*. ಆತನು ಹೀಗೆ ಬರೆದನು, "ನಮ್ಮ ಬೋಧನೆಯು . . . ಮೋಸವಲ್ಲ" (ವ. 3). ಪೌಲನು ಸುವಾರ್ತೆಯನ್ನು ಸಾರುವದಕ್ಕೆ ನಿರ್ಮಲವಾದ ಉದ್ದೇಶಗಳನ್ನು ಹೊಂದಿದ್ದನು. ಬೇರೆಯವರು "ಮುಖಸ್ತುತಿಯನ್ನು ಮಾಡುವವರಾಗಿ" (ವ. 5) ನಂಬಿಸಿ ಮೋಸಮಾಡುವವರಂತೆ ತೋರಬಹುದು, ಆದರೆ ತಾನು ಅವರಿಂದ ಯಾವದೇ ವೈಯಕ್ತಿಕ ಲಾಭವನ್ನು ಗಳಿಸಿಕೊಳ್ಳುವ ಯಾವ ಬಯಕೆಯನ್ನೂ ಹೊಂದಿರಲಿಲ್ಲ ಎಂಬುದನ್ನು

ಥೆಸಲೋನಿಕದವರಿಗೆ ನೆನಪಿಸಿದನು. ಆತನ ಉದ್ದೇಶವು ನಿರ್ಮಲ ಮತ್ತು ಸರಿಯಾದದ್ದು ಆಗಿತ್ತು-ಅವರು ದೇವರಿಂದ ರಕ್ಷಿಸಲ್ಪಡುವದನ್ನು ಕಾಣಬೇಕೆಂಬದೆ.

ಇಂದು ನಮ್ಮ ಧೈರ್ಯಶಾಲಿತನದ ವಿಷಯವೇನು? ನಾವು ಕ್ರಿಸ್ತನ ಶುಭವಾರ್ತೆಯನ್ನು ಸಾರುವದಕ್ಕೆ ಅಪಾಯಗಳಿಗೆ ಈಡಾಗುವದಕ್ಕೆ ನಾವು ಮನಸ್ಸುಳ್ಳವರಾಗಿರತಕ್ಕದ್ದು. ನಾವು ಬೇರೆಯವರಿಗೆ ಕ್ರಿಸ್ತನ ಕುರಿತು ಬೋಧಿಸುವಾಗ, ನಮ್ಮ ಸಂದೇಶವು ಸತ್ಯವಾಗಿಯೂ ನಮ್ಮ ಜೀವಿತಗಳು ನಿರ್ಮಲವಾಗಿಯೂ ಮತ್ತು ನಮ್ಮ ಉದ್ದೇಶಗಳು ಪ್ರಾಮಾಣಿಕವಾಗಿಯೂ ಇರತಕ್ಕದ್ದು. EE

## ನಂಬಿಗಸ್ತರಾದ ಬೋಧಕರು (2:2-6)

ಪ್ರತಿಯೊಬ್ಬ ನಿಜ ಬೋಧಕನು ನಂಬಿಗಸ್ತನಾಗಿರುವದಕ್ಕೆ ಅಪೇಕ್ಷಿಸುವನು. ಆತನು ದೇವರಿಂದ ಶ್ಲಾಘನೆಯನ್ನು ಪಡೆದುಕೊಳ್ಳುವಂತಹ ಬೋಧಕನಾಗಿರಬೇಕೆಂದು ಬಯಸುವವನಾಗಿರುತ್ತಾನೆ.

ನಂಬಿಗಸ್ತವಾಗಿ ಬೋಧಿಸುವದರಲ್ಲಿರುವ ಅಂಶಗಳಾವವು?

*ವಿರೋಧದ ಹೊರತಾಗಿಯೂ ಧೈರ್ಯದಿಂದಿರುವದು* (2:2). ಪೌಲನು ಚಡಿಗಳಿಂದ ಹೊಡೆಯುವ ಸ್ತಂಭದಿಂದ ಸೆರೆಮನೆಯ ತಕನ ಹೋದನು, ಆದರೆ ರಕ್ತವಾಗಲಿ ಅಥವಾ ಬೆವರಾಗಲಿ ಸಹ ಆತನನ್ನು ದೇವರ ವಾಕ್ಯವನ್ನು ಸಾರುವದರಿಂದ ತಡೆಯುವದಕ್ಕಾಗಲಿಲ್ಲ.

*ತಿಳಿಯಪಡಿಸುವದರಲ್ಲಿ ಸತ್ಯವಂತಿಕೆ* (2:3). ಆತನು ಥೆಸಲೋನಿಕದವರ ಬಳಿಗೆ ದೋಷಪೂರಿತ ಸಂದೇಶವನ್ನು ಹೊತ್ತುಕೊಂಡು ಬರಲಿಲ್ಲ. ಆತನು ತನ್ನ ವಶಕ್ಕೆ ಒಪ್ಪಿಸಲ್ಪಟ್ಟಿದ್ದಂಥ ಸುವಾರ್ತೆಯನ್ನು ಅವರಿಗೆ ನೀಡಿದನು.

*ದೇವರನ್ನು ಮೆಚ್ಚಿಸುವದಕ್ಕೆ ಸಮರ್ಪಣೆಯನ್ನು ಹೊಂದಿದ್ದನು* (2:4). ಆತನು ಕೇವಲ ದೇವರಿಂದ *ಮಾತ್ರವೇ* ಅನುಮೋದನೆಯನ್ನು ಹೊಂದುವದಕ್ಕೆ ಅಪೇಕ್ಷಿಸಿದನು.

ಒಬ್ಬ ನಂಬಿಗಸ್ತನಾದ ಬೋಧಕನು *ಮಾತ್ರವೇ* ನ್ಯಾಯತೀರ್ಪಿನ ಬೆಳ್ಳನೆಯ ಬೆಳಕಿನಲ್ಲಿ ತಡೆದುಕೊಂಡು ನಿಲ್ಲಬಲ್ಲನು. ಒಂದು ದೊಡ್ಡದಾದ ಕರೆಗಾಗಿ ಯಾವ ಮನುಷ್ಯನೂ ಎಂದೂ ಮಹತ್ವಾಕಾಂಕ್ಷೆಯನ್ನು ಪಟ್ಟಿಲ್ಲ. EC

## ಒಂದು ನಿರ್ಮಲ ಹೃದಯದಿಂದ (2:3-6)

ಒಂದು ಒಳ್ಳೇ ಕಾರ್ಯವು ಕೆಟ್ಟ ಉದ್ದೇಶದೊಳಗಿಂದ ಉದ್ಭವಿಸಿದ್ದಾಗ್ಯೂ, ಅದು ಒಂದು ಪ್ರಯೋಜನವನ್ನುಂಟು ಮಾಡಬಲ್ಲದು. ಬೋಧನೆಯನ್ನು ಮಾಡುವವನು ಅದನ್ನು ತಪ್ಪಾದ ಕಾರಣಗಳಿಗೋಸ್ಕರ ಮಾಡಿದಾಗ್ಯೂ, ಅದು ಬೇರೆಯವರಿಗೆ ಆಶೀರ್ವಾದವನ್ನುಂಟು ಮಾಡಬಲ್ಲದು. ಹೇಗೂ, ನಿಜತ್ವದಿಂದ ಬೆಳೆದು ಹೊರ ಬರುವ ಬೋಧನೆಯು ದೇವರ ಶಕ್ತಿಯಾಗಿರುವದು. ಅದು ದೇವರಿಂದ ಅನುಮೋದನೆಯನ್ನು ಹೊಂದುವದು ಮತ್ತು ಮನುಷ್ಯನಿಗೆ ಅತ್ಯಂಥ ದೊಡ್ಡ ಆಶೀರ್ವಾದವನ್ನುಂಟು ಮಾಡುವದು.

ಉದ್ದೇಶವು ಹೇಗಿರಬೇಕೆಂಬ ವಿಷಯದಲ್ಲಿ ಪೌಲನು ಎಲ್ಲಾ ಬೋಧಕರಿಗೂ ಒಂದು ಮಾದರಿಯನ್ನು ತೋರಿಸಿದ್ದಾನೆ. ಪ್ರತಿಯೊಬ್ಬ ಬೋಧಕನು ಸಹ “ನಾನು ಯಾವ ವಿಧವಾದ

ಹೃದಯವನ್ನು ಹೊಂದಿದ್ದೇನೆ?" ಎಂದು ತನ್ನನ್ನು ಕೇಳಿಕೊಳ್ಳಲಿ.

*ಅಬದ್ಧದಿಂದ ಮುಕ್ತವಾಗಿರುವ ಒಂದು ಹೃದಯ.* ಪೌಲನಿಗೆ ಅಬದ್ಧವಾದದ್ದರಲ್ಲಿ ಆಸಕ್ತಿಯಿರಲಿಲ್ಲ. ಆತನು ಸತ್ಯವನ್ನು ಕಂಡುಕೊಂಡಿದ್ದನು ಮತ್ತು ಕೇಳಿಸಿಕೊಳ್ಳುವದಕ್ಕೆ ಸಿದ್ಧವಿದ್ದ ಯಾರಿಗೇ ಆಗಲಿ ಅದನ್ನು ಸಾರಬೇಕೆಂಬ ಉತ್ತೇಜನವನ್ನು ಹೊಂದಿದ್ದನು. ಕ್ರೈಸ್ತ ರಕ್ತಸಾಕ್ಷಿಗಳು ಒಂದು ಅಚ್ಚುಕಟ್ಟಾಗಿ ಹೇಳಲಾಗಿದ್ದ ಸುಳ್ಳಿಗೋಸ್ಕರವಾಗಿ ತಮ್ಮ ಪ್ರಾಣಗಳನ್ನು ಕೊಡಲಿಲ್ಲ.

*ಅಶುದ್ಧತೆಯಿಂದ ಶುದ್ಧೀಕರಿಸಲ್ಪಟ್ಟ ಒಂದು ಹೃದಯ.* ಆತನು ವೇಷಹಾಕಿಕೊಂಡ ಆತ್ಮದೊಂದಿಗೆ, ಅಥವಾ ವಂಚನೆಯಿಂದಾಗಲಿ, ಕುಂತಂತ್ರದಿಂದಾಗಲಿ, ಅಥವಾ ಕೈಚಳಕದಿಂದಾಗಲಿ ಬೋಧಿಸಲಿಲ್ಲ. ಆತನು ಮುಚ್ಚುಮರೆಯಿಲ್ಲದವನು ಮತ್ತು ನಂಬಿಗಸ್ತನಾದವನು ಆಗಿದ್ದನು.

ಆತನು ಜನರನ್ನು ಕ್ರಿಸ್ತನ ಬಳಿಗೆ ಕರೆ ತರುವ ಮೂಲಕ ಅವರ ಸೇವೆಯನ್ನು ಮಾಡಿದನು, ಆದರೆ ಆತನ ಅತ್ಯುನ್ನತ ಬಯಕೆಯು ತನ್ನ ದೇವರನ್ನು ಮೆಚ್ಚಿಸಬೇಕೆಂಬುದೇ ಆಗಿತ್ತು. ಆತನು ಒಬ್ಬ ಕ್ರೈಸ್ತನಾಗಿ ಮಾರ್ಪಟ್ಟಾಗ, ಆತನು ತನ್ನ ಯೆಹೂದಿ ಸ್ವದೇಶಸ್ಥರನ್ನು ಮೆಚ್ಚಿಸಬೇಕೆಂಬ ಬಯಕೆಯನ್ನು ಪೂರ್ತಿಯಾಗಿ ಬಿಟ್ಟುಬಿಟ್ಟಿದ್ದನು. ಆತನ ಹೃದಯವು ಕೇವಲ ದೇವರಿಂದ ಯೋಗ್ಯನೆನಿಸಿಕೊಳ್ಳುವದನ್ನೇ ಬಯಸಿತು. ಹೊಸದಾಗಿ ಪರಿವರ್ತನೆಗೊಂಡವರಿಂದಾಗಲಿ ಅಥವಾ ಬೇರೆ ಯಾರಿಂದಲೇ ಆಗಲಿ ವೈಯಕ್ತಿಕ ಘನತೆಯನ್ನು ಅಪೇಕ್ಷಿಸುವದು ಚಿತ್ರಣದಲ್ಲಿಯೇ ಬರಲಿಲ್ಲ.

ಹಣವು ಆತನಿಗೆ ಸ್ಫೂರ್ತಿಯಾಗಲಿಲ್ಲ; ಲೋಭ ಅಥವಾ ಆಶಿಸುವಿಕೆಯು ಆತನನ್ನು ನಿರ್ಬಂಧಪಡಿಸಲಿಲ್ಲ. ಆತನು ತನ್ನ ಬೋಧನೆಯ ವೃತ್ತಿಯುದ್ದಕ್ಕೂ, ತನಗೆ ಆರ್ಥಿಕ ಸಹಾಯ ಮಾಡಿಕೊಳ್ಳಲು ಒಬ್ಬ ಕಸುಬುದಾರಿ ಮಿಶನರಿಯಾಗಿದ್ದನು.

ಎಲ್ಲಾ ಬೋಧಕರ ಉದ್ದೇಶದಲ್ಲಿ ಪೌಲನು ಇದ್ದ ರೀತಿಯಲ್ಲಿಯೇ ಇರುವದಾದರೆ ಪ್ರಪಂಚವು ಎಷ್ಟು ಆಶೀರ್ವಾದಕರವಾದ ದ್ವೀಪವಾಗುವದು? ಬೋಧಕರ ಕೀರ್ತಿಯು ದುಸ್ಥಿತಿಗೆ ಹೋಗಿರುತ್ತದೆ? ಅದು ಉದ್ದೇಶಗಳಿಗೆ ಸಂಬಂಧಿಸಿದ ವಿಷಯವಾಗಿರಬಹುದೋ?
EC

## ಪೌಲನು ವಾತ್ಸಲ್ಯದಿಂದ್ದನು (2:6-8)

2 ಮತ್ತು 3 ವಚನಗಳಲ್ಲಿ, ಪೌಲನು ತನ್ನನ್ನು ಧೈರ್ಯವಾಗಿರುವವನೆಂದು ಬಣ್ಣಿಸಿಕೊಂಡನು. 7aನೇ ವಚನದಲ್ಲಿ, ಆತನು ಹೀಗೆ ಹೇಳಿದನು, "ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು." ಆತನು ಅಧಿಕಾರದ ಕಡೆಗೆ ಧೈರ್ಯವಂತನೂ ಸದಸ್ಯರ ಕಡೆಗೆ ವಾತ್ಸಲ್ಯವುಳ್ಳವನೂ ಆಗಿದ್ದನು. "ವಾತ್ಸಲ್ಯ" ಎಂದರೆ ಒಬ್ಬ ಸ್ನೇಹಪರವಾಗಿರುವ ವ್ಯಕ್ತಿ ಎಂದರ್ಥವಾಗಿದೆ. ವಾಸ್ತವದಲ್ಲಿ, ಆತನು "ತಾಯಿಯು ತನ್ನ ಮಕ್ಕಳನ್ನೂ ಪೋಷಿಸುತ್ತಾಳೋ ಎಂಬಂತೆ" ಥೆಸಲೋನಿಕದವರನ್ನು ಪೋಷಣೆ ಮಾಡಿದನು (ವ. 7b).

*ಪೌಲನು ಅವರ ಮೇಲೆ ಅಧಿಕಾರ ಬಳಸಿ "ಹೇಳಬಹುದಾಗಿತ್ತು"* (*ವ.* 6). ಆತನು ಒಬ್ಬ

ಅಪೊಸ್ತಲನಾಗಿದ್ದನಾದ್ದರಿಂದ, ಆತನಿಗೆ ಖಡಾಖಂಡಿತವಾಗಿ, ಒರಟಾಗಿ, ಅಥವಾ ಆರ್ಥಿಕ ಸಹಾಯವನ್ನು ಕೇಳುವ ಮೂಲಕ ಭಾರವಾಗಿ ಸಹ ಇರುವ ಅಧಿಕಾರವಿತ್ತು. ಹೇಗೂ, ಆತನು ಸಭೆಯವರೊಂದಿಗೆ ಈ ವಿಧದಲ್ಲಿ ನಡೆದುಕೊಳ್ಳಲಿಲ್ಲ.

*ಪೌಲನು ಅವರ "ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡನು"* (ವ. 7). ಥೆಸಲೋನಿಕದವರು ಇನ್ನೂ ಎಳೆಯ ಮಕ್ಕಳಂತಿದ್ದರು ಮತ್ತು ಅನುಭವವಿಲ್ಲದವರಾಗಿದ್ದು. ಆದುದರಿಂದ, ಪೌಲನು ಅವರ ಮೇಲೆ "ಮಮತೆಯುಳ್ಳವನಾಗಿ" ಅವರ ಆರೈಕೆಯನ್ನು ಮಾಡಿದನು (ವ. 8).

*ಪೌಲನು ಅವರಿಗೆ ಸಮರ್ಪಣೆಯುಳ್ಳವನಾಗಿದ್ದನು* (ವ. 8). ಆತನು ಹೀಗೆ ಬರೆದನು, ". . . ದೇವರ ಸುವಾರ್ತೆಯನ್ನು ಹೇಳುವದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವದಕ್ಕೆ ಸಂತೋಷಿಸುವವರಾದೆವು." ಒಬ್ಬ ವಾತ್ಸಲ್ಯವುಳ್ಳ, ಪ್ರೀತಿಸುವ ವ್ಯಕ್ತಿಯು ಕೇವಲ ಮಾತುಗಳಲ್ಲಿ ಮಾತ್ರವೇ ಕಾಳಜಿಯನ್ನು ತೋರಿಸುವದಿಲ್ಲ; ಆತನು ಅಥವಾ ಅವಳು ತ್ಯಾಗಗಳನ್ನು ಸಹ ಮಾಡುವನು. ತಾಯಿಯು ತನ್ನ ಮಕ್ಕಳನ್ನು "ಪೋಷಿಸುವ" ಪ್ರಕಾರ, ಪೌಲನು ಸುವಾರ್ತೆಯನ್ನು (ಆತ್ಮೀಕ ಪೋಷಣೆಯನ್ನು) ಕೊಟ್ಟನು. "ಪೋಷಿಸುವ" ಎಂಬುದಕ್ಕಾಗಿರುವ ಪದವು ಒಂದು ಬಲವಾದ ಭಾವನಾತ್ಮಕ ಬಂಧವನ್ನು ಸೂಚಿಸುತ್ತದೆ. ಅವಶ್ಯಕವಾಗಿದ್ದಲ್ಲಿ ಆತನು ಅವರಿಗೋಸ್ಕರ ತನ್ನ ಪ್ರಾಣವನ್ನೇ ಕೊಟ್ಟಿರುತ್ತಿದ್ದನು (ನೋಡಿರಿ ರೋಮಾ 9:1-3).

ಕ್ರೈಸ್ತರಾಗಿ, ನಾವು ಬೇರೆಯವರ ಕಡೆಗೆ ಪೌಲನಿಗಿದ್ದ ವಾತ್ಸಲ್ಯದ ಮಾದರಿಯನ್ನು ಅನುಸರಿಸಬೇಕು, ವಿಶೇಷವಾಗಿ ಹೊಸದಾಗಿ ಪರಿವರ್ತನೆಗೊಂಡವರ ಕಡೆಗೆ ವಾತ್ಸಲ್ಯ ಹೊಂದಿರಬೇಕು. ಅವರಿಗೆ ದೇವರ ವಾಕ್ಯದಿಂದ ಪೋಷಣೆಯನ್ನು ಒದಗಿಸಬೇಕು. ಅವರಿಗೆ ನಾವು ಅವರಿಗೆ ಸುವಾರ್ತೆಯನ್ನು ಮಾತ್ರವಲ್ಲದೆ, ನಮ್ಮ ಪ್ರಾಣಗಳನ್ನು ಸಹ ಹಂಚಿಕೊಂಡವರಾಗಿರಬೇಕು. EE

## ಬೋಧಿಸುವದಕ್ಕೆ ಅನುಗುಣವಾಗಿ ಜೀವಿಸುವದು (2:7-12)

ಒಬ್ಬ ಬೋಧಕನಿಗೆ ಒಂದು ಉತ್ತಮ ಕೀರ್ತಿಯು ಇರತಕ್ಕದ್ದು. ಆತನು ಸತ್ಯವನ್ನು *ಸಾರಬಹುದು*, ಆದರೆ ಆತನು ಸತ್ಯದಂತೆ ಜೀವಿಸದಿದ್ದಲ್ಲಿ, ಆತನ ಸಂದೇಶವು ಸಾಮಾನ್ಯವಾಗಿ ಮಂದ ಕಿವಿಗಳ ಮೇಲೆ ಬೀಳುವದು. ನಾವು ಏನಾಗಿದ್ದೇವೋ ಅದು ನಾವು ಏನು ಹೇಳುತ್ತೇವೆಂಬುದರ ಮೇಲೆ ಪರಿಣಾಮವನ್ನು ಹೊಂದಿರುತ್ತದೆ.

ಪೌಲನ ಮಾದರಿಯು ಅತ್ಯಂಥ ಉನ್ನತವಾದ ಮೌಲ್ಯದ್ದಾಗಿತ್ತು. ಅವರ ಎದುರಿಗಿದ್ದ ಆತನ ಜೀವನವು ಒಂದು ದೃಷ್ಟಾಂತಗಳ ಫಲವತ್ತಾದ ಹೊಲದಂತಿತ್ತು. ಆತನು ಹೀಗೆ ಹೇಳಿದನು, "ನಾನು ನಿಮ್ಮ ಮಧ್ಯದಲ್ಲಿ ಹೇಗೆ ಜೀವಿಸಿದ್ದೇನೆಂಬದನ್ನು ನೋಡಿರಿ. ನಾನು ನಿಮ್ಮ ಬಗ್ಗೆ ಎಷ್ಟೊಂದು ಕಾಳಜಿ ಹೊಂದಿದ್ದೇನೆ ಮತ್ತು ದೇವರ ಕಡೆಗಿನ ನನ್ನ ವೈಯಕ್ತಿಕ ಭಕ್ತಿಯ ಬಗ್ಗೆ ನಾನೆಷ್ಟು ಗಂಭೀರವಾಗಿದ್ದೇನೆಂಬುದನ್ನು ಅದು ನಿಮಗೆ ತೋರಿಸುವ ದಿಲ್ಲವೋ?" ಪೌಲನು ಥೆಸಲೋನಿಕದವರಿಗೆ ತೋರಿದ ಮಾದರಿಯು ನಾವು ಹೇಗೆ ನಡಿಯಬೇಕಾಗಿರುತ್ತದೆಂಬುದನ್ನು ಪ್ರತಿಬಿಂಭಿಸುತ್ತದೆ.

*ಒಂದು ನಿಜವಾದ ಕಳಕಳಿಯೊಂದಿಗೆ.* ಆತನು ಪೋಷಣೆ ಮಾಡುವ ತಾಯಿಯು ತನ್ನ ಮಕ್ಕಳನ್ನು ಕೋಮಲವಾಗಿ ಆರೈಕೆ ಮಾಡುವ ರೀತಿಯಲ್ಲಿ ಅವರ ವಿಷಯದಲ್ಲಿ ನಡೆದುಕೊಂಡನು. ಆತನು ವಾತ್ಸಲ್ಯ ಮತ್ತು ಮಮತೆಯುಳ್ಳವನಾಗಿದ್ದು ಅವರಿಗೆ ಸಮಯವನ್ನು ಕೊಟ್ಟನು. ಒಬ್ಬ "ಜನರ ಬೋಧಕ"ನಾಗಿದ್ದ, ಆತನು ಅಲ್ಲಿ ಒಂದು ಪ್ರಸಂಗವನ್ನು ಬೋಧಿಸುವದಕ್ಕೆ ಇರಲಿಲ್ಲ-ಆತನು ಸುವಾರ್ತೆಯನ್ನು ಸಾರುವದರ ಜೊತೆಗೆ ಅದಕ್ಕೊಂದು ಮಾದರಿಯನ್ನು ತೋರುವದು ಆತನ ಬಯಕೆಯಾಗಿತ್ತು.

*ಜನರಗೋಸ್ಕರ ಒಬ್ಬನ ಪ್ರಾಣವನ್ನು ಕೊಡುವದು.* ಆತನು ಥೆಸಲೋನಿಕದವರಿಗೆ ತನ್ನ ಸಮಯವನ್ನು ಮಾತ್ರವೇ ಕೊಡುವದಕ್ಕೆ ಮನಸ್ಸುಳ್ಳವನಾಗಿರಲಿಲ್ಲ. ಆತನು ಅವರ ಆತ್ಮೀಕ ಬೆಳವಣಿಗೆಯಲ್ಲಿ ಎಷ್ಟೊಂದು ತೊಡಗಿಸಿಕೊಂಡಿದ್ದೇನೆಂದರೆ ಆತನು ಅವರಿಗೋಸ್ಕರ ತನ್ನ ಪ್ರಾಣವನ್ನು ಸಹ ಕೊಟ್ಟಿರುತ್ತಿದ್ದನೆಂದು ಹೇಳುವದಕ್ಕೆ ಶಕ್ತನಾಗಿದ್ದನು. ಉತ್ತಮವಾಗಿ ಬೋಧಿಸುವಿಕೆಯಲ್ಲಿ ಒಬ್ಬನ ತುಟಿಗಳ ಜೊತೆಗೆ ಪ್ರಾಣವು ಅಗತ್ಯವಾಗಿರುತ್ತದೆ.

*ಮಾದರಿಯ ಮೂಲಕ ನಡಿಸುವದು.* ಆತನು ಆರ್ಥಿಕವಾಗಿ ಅವರಿಗೊಂದು ಭಾರವಾಗಬಾರದೆಂಬ ಕಾರಣಕ್ಕಾಗಿ, ಬಹಳ ಸಂಭಾವ್ಯವಾಗಿ, ಒಬ್ಬ ಗುಡಾರ ತಯಾರಿಸುವವನಾಗಿ ಕೆಲಸ ಮಾಡಿದನು. ಆತನು ಅವರ ಮಧ್ಯದಲ್ಲಿ, ಅವರನ್ನು ಬಳಸಿಕೊಳ್ಳುವದರಿಂದ ದೂರವಿದ್ದವನಾಗಿ ಅಥವಾ ಯಾವದೇ ರೀತಿಯಲ್ಲಿ ಅವರಿಂದ ಲಾಭವನ್ನು ಪಡೆದುಕೊಳ್ಳದವನಾಗಿ ಒಂದು ನೀತಿಯ ಜೀವಿತವನ್ನು ನಡಿಸಿದನೆಂಬುದಕ್ಕೆ ಅವರು ಸಾಕ್ಷಿಯಾಗಿದ್ದರು.

*ತಂದೆತಾಯಿಗಳಂತೆ ಶಿಸ್ತುಗೊಳಿಸುವಿಕೆಯೊಂದಿಗೆ ಗದರಿಸುವದು.* ಪೌಲನು ಥೆಸಲೋನಿಕದವರ ಜೊತೆಯಲ್ಲಿ ತಂದೆಯು ತನ್ನ ಮಕ್ಕಳೊಂದಿಗೆ ಹೇಗೋ ಹಾಗೆಯೇ ನಡೆದುಕೊಂಡನು. ಆತನು ಅವಶ್ಯವಾಗುವಾಗಲೆಲ್ಲಾ ಅವರನ್ನು ತಿದ್ದುತ್ತಿದ್ದನು, ಆದರೆ ಅವರಿಗೆ ಆತನು ಅವರನ್ನು ಪ್ರೀತಿಸುತ್ತಾನೆ ಮತ್ತು ಅವರ ಒಳ್ಳೇದಕ್ಕಾಗಿಯೇ ಶಿಸ್ತುಗೊಳಿಸುತ್ತಿದ್ದಾನೆ ಎಂಬುದು ಗೊತ್ತಿತ್ತು.

ಪೌಲನು ಆದರ್ಶವಾದ ಬೋಧಕನಾಗಿದ್ದನು! ಆತನ ಬೋಧನೆಯು ಯಾವನಲ್ಲಿಯೇ ಆಗಲಿ ಉತ್ತಮವಾದದ್ದನ್ನು ಹೊರ ತರುವದಾಗಿತ್ತು. ಆತನು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ಯಾವದೇ ಗುಪ್ತವಾದ ಕಾರ್ಯಸೂಚಿಯನ್ನು ಹೊಂದಿಲ್ಲ ಎಂಬುದನ್ನು ಬಲ್ಲವರಾಗಿರುವದರಿಂದ ಆತನ ಮಾತನ್ನು ಕೇಳಿಸಿಕೊಳ್ಳುವಿರಿ. EC

## ಪೌಲನು ಉತ್ತಮವಾಗಿ "ನಡೆದುಕೊಂಡನು" (2:9-12)

ಒಬ್ಬ ಪೋಷಣೆ ಮಾಡುವ ಅಪೊಸ್ತಲನಾಗಿ, ಪೌಲನು ಥೆಸಲೋನಿಕದವರೊಂದಿಗೆ ಉತ್ತಮವಾಗಿ ನಡೆದುಕೊಂಡನು. ಆತನು ಹೀಗೆ ಬರೆದನು, "ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬದಕ್ಕೆ ನೀವೇ ಸಾಕ್ಷಿಗಳು, ದೇವರೂ ಸಾಕ್ಷಿ" (ವ. 10). ಪುನಃ ತಂದೆತಾಯಿಗಳ ಸಾದೃಶ್ಯವನ್ನು ಮತ್ತೊಮ್ಮೆ ಬಳಸುವವನಾಗಿ, ಪೌಲನು ತಾನು ಒಬ್ಬ ಉತ್ತಮ ತಂದೆಯಂತೆ ವಿಶ್ವಾಸಿಗಳ

ಜೊತೆಯಲ್ಲಿ ನಡೆದುಕೊಂಡೆನು ಎಂಬುದಾಗಿ ತನ್ನ ನಡವಳಿಕೆಯನ್ನು ಬಣ್ಣಿಸುತ್ತಾನೆ (ನೋಡಿರಿ ವ. 11). ಒಬ್ಬ ಉತ್ತಮ ತಂದೆಯು ಹೇಗೆ ನಡೆದುಕೊಳ್ಳುವನು?

*ಆತನು ತನ್ನ ಮಕ್ಕಳ ಅಗತ್ಯತೆಗಳನ್ನು ಒದಗಿಸುವದಕ್ಕೆ ದುಡಿಯುವನು* (ವ. 9). ಪೌಲನಿಗೆ ಹಣವನ್ನು ಪಡೆದುಕೊಳ್ಳುವದಕ್ಕೆ ಹಕ್ಕು ಇತ್ತು, ಆದರೆ ಆತನು ಎಳೆಯ ಕ್ರೈಸ್ತರ ಮೇಲೆ ಆರ್ಥಿಕವಾಗಿ ಭಾರವಾಗಬಾರದೆಂದು ಸ್ವತಃ ಗುಡಾರಗಳನ್ನು ತಯಾರಿಸುವ ಮೂಲಕ ತನ್ನ ಆರ್ಥಿಕ ಅಗತ್ಯತೆಗಳನ್ನು ಸಂಧಿಸಿಕೊಂಡಿದ್ದನು. ಆತನು ಅವರಿಂದ ಪ್ರತಿಯಾಗಿ ಏನನ್ನೂ ಅಪೇಕ್ಷಿಸದೆ ಅವರಿಗೆ ಆತ್ಮೀಕ ಆಹಾರವನ್ನು ಕೊಟ್ಟಿದ್ದನು. ಆತನು ಥೆಸಲೋನಿಕದವರ ಮಧ್ಯದಲ್ಲಿ ವಾಸ ಮಾಡಿ ಅವರಿಗೆ ಆತ್ಮೀಕ ಪೋಷಣೆಯನ್ನು ಒದಗಿಸುವದಕ್ಕೋಸ್ಕರ "ಕಷ್ಟವನ್ನು," ಮತ್ತು "ಪ್ರಯಾಸವನ್ನು," ಪಟ್ಟಿದ್ದನು ಹಾಗೂ "ಹಗಲಿರುಳು ದುಡಿಮೆ" ಮಾಡಿದ್ದನು.

*ಆತನು ಸರಿಯಾದ ನಡೆಯಲ್ಲಿ ನಡೆಯುವವನಾಗಿದ್ದನು* (ವ. 10). ತಾನು ಥೆಸಲೋನಿಕದವರ ಮಧ್ಯದಲ್ಲಿ ಹೇಗೆ ನಡಕೊಂಡನು ಎಂಬುದನ್ನು ಪೌಲನು "ಶುದ್ಧರಾಗಿಯೂ," "ನೀತಿವಂತರಾಗಿಯೂ," ಮತ್ತು "ನಿರ್ದೋಷಿಗಳಾಗಿಯೂ" ಎಂಬ ಪದಗಳನ್ನು ಬಳಸುವ ಮೂಲಕ ಬಣ್ಣಿಸುತ್ತಾನೆ. ಒಬ್ಬ ಶುದ್ಧನಾದ (ನಿಷ್ಠೆಯುಳ್ಳ) ವ್ಯಕ್ತಿಯು ಯಾರೆಂದರೆ, ಭಕ್ತಿಯುಳ್ಳವನು, ದೇವರಿಗೆ ಗೌರವನ್ನು ತೋರಿಸುವವನು. ಪೌಲನು ಮಾಡುವ ಪ್ರಾರ್ಥನೆ ಅಥವಾ ಆರಾಧನೆಯನ್ನು ನೋಡಿ ಥೆಸಲೋನಿಕದವರು ಕಲಿತುಕೊಂಡಿದ್ದರೆಂಬುದರಲ್ಲಿ ಸಂಶಯವೇ ಇಲ್ಲ. ಒಬ್ಬ ನೀತಿವಂತ ಮನುಷ್ಯನು ಯಾರೆಂದರೆ ಸದ್ಗುಣಶೀಲನು, ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವವನು. ಥೆಸಲೋನಿಕದ ಸಹೋದರರು ಬೇರೆಯವರಿಗೆ ದಯೆ ಮತ್ತು ದಾರಾಳತನವನ್ನು ತೋರಿಸುವಂತಹ ರೀತಿಗಳಲ್ಲಿ ಪೌಲನು ದೇವರ ವಾಕ್ಯಕ್ಕೆ ವಿಧೇಯನಾಗುವದನ್ನು ನೋಡಿ ಅವನಿಂದ ಕಲಿತಿದ್ದರು. ಒಬ್ಬ ನಿರ್ದೋಷಿಯಾದ ವ್ಯಕ್ತಿಯು ಪಾಪರಹಿತನಲ್ಲ, ಆದರೆ ಸರಿಯಾದದ್ದನ್ನೇ ಮಾಡಬೇಕೆಂದು ಪರಿಶ್ರಮ ಪಡುವವನು ಮತ್ತು ಅವನು ಅಥವಾ ಅವಳು ಬಿದ್ದು ಹೋಗುವಾಗ ಕ್ಷಮಾಪಣೆಯನ್ನು ಕೇಳುವಂತ ವ್ಯಕ್ತಿಯಾಗಿರುವನು. ಪೌಲನು ತಾನೊಬ್ಬ ಸಹೋದರನಿಗೆ ನೋವುಂಟು ಮಾಡಿದಾಗ ಆತನ ಕ್ಷಮೆ ಕೇಳುವದನ್ನು ಥೆಸಲೋನಿಕದವರು ನೋಡಿರಬಹುದಾಗಿತ್ತು.

*ಆತನ ಮಾತುಗಳು ಸರಿಯಾಗಿದ್ದವು* (ವಚನಗಳು 11, 12). ಥೆಸಲೋನಿಕದವರು ಪೌಲನ "ಬುದ್ಧಿಹೇಳುವಿಕೆ," "ಪ್ರೋತ್ಸಾಹಿಸುವಿಕೆ," ಮತ್ತು "ವಿನಂತಿಸಿಕೊಳ್ಳುವಿಕೆ" ಮೂಲಕ ಪ್ರಯೋಜನವನ್ನು ಪಡೆದಿದ್ದರು. ನಾವು ಕೇವಲ ನಮ್ಮ ನಂಬಿಕೆಯನ್ನು ಜೀವಿಸಿ ತೋರಿಸುವವರಾಗಿರಬೇಕು, ಹೊರತು ಅದರ ಬಗ್ಗೆ ಮಾತಾಡುವವರಾಗಿರಬಾರದು ಎಂದು ಜನರು ಹೇಳುತ್ತಾರೆ. ಹೇಗೂ, ಒಳ್ಳೇ ತಂದೆಯಂದಿರು ಅವಶ್ಯ ಬಿದ್ದಾಗಲೆಲ್ಲಾ ಮಾತಾಡುವದಕ್ಕೆ ಮತ್ತು ಬುದ್ಧಿಹೇಳುವದಕ್ಕೆ ಮನಸ್ಸುಳ್ಳವರಾಗಿರುವ ಪ್ರಕಾರವೇ, ಕ್ರೈಸ್ತರು ಸಭೆಗೆ ಭಕ್ತಿವೃದ್ಧಿಯನ್ನುಂಟು ಮಾಡುವ ವಿಧದಲ್ಲಿ ಮಾತುಗಳನ್ನು ಬಳಸುವದಕ್ಕೆ ಮನಸ್ಸುಳ್ಳವರಾಗಿರತಕ್ಕದ್ದು. ನಾವು ಒಂದು ಅಗತ್ಯತೆಯನ್ನು ಕಂಡಾಗ ಬುದ್ಧಿಹೇಳುವವರಾಗಿರಬೇಕು, ಜನರಿಗೆ ಉತ್ತಮ ಜೀವನಗಳನ್ನು ನಡಿಸುವಂತೆ ಸಹಾಯ

ಮಾಡಬೇಕು. ನಾವು ನಿರಾಶೆಗೊಂಡ ಹೃದಯದವರಿಗೆ ಪ್ರೋತ್ಸಾಹವನ್ನು ನೀಡಬೇಕು. ದೇವರ ಒಳ್ಳೇತನಕ್ಕೆ ಸಾಕ್ಷಿಗಳಾಗಿರುವವರಾದ, ನಾವು ವಿನಂತಿಸಿಕೊಳ್ಳಬೇಕು.

ನಾವು ಸಹ ಅನುಸರಿಸಬೇಕಾದ ಒಂದು ನಡವಳಿಕೆಗೆ ಪೌಲನು ಮಾದರಿ ತೋರಿದನು. ನಾವು ಕೆಲಸ ಮಾಡಿ ಸಭೆಯ ಅಗತ್ಯತೆಗಳನ್ನು ಒದಗಿಸಬೇಕು, ನಮ್ಮ ಭೌತಿಕ ಆಶೀರ್ವಾದಗಳ ಮೂಲಕವಾಗಿ ಕಾರ್ಯ ಮಾಡುವಂತೆ ದೇವರಿಗೆ ಅವಕಾಶವನ್ನು ಕೊಡಬೇಕು. ನಾವು ಭಕ್ತಿಯುಳ್ಳವರು, ನೀತಿವಂತರು, ಮತ್ತು ನಿರ್ದೋಷಿಗಳು ಆಗಿರುವ ಮೂಲಕ ಸರಿಯಾಗಿ ನಡೆಯಬಲ್ಲೆವು. ನಾವು ಫಲದಾಯಕ ಜೀವಿತಗಳನ್ನು ನಡಿಸುವಂತೆ ಬೇರೆಯವರಿಗೆ ಬುದ್ಧಿವಾದ, ಪ್ರೋತ್ಸಾಹ, ಮತ್ತು ವಿನಂತಿಸಿಕೊಳ್ಳುವ ಮೂಲಕ ಸರಿಯಾದ ಮಾತುಗಳನ್ನು ಬಳಸಬಲ್ಲೆವು. EE

### ಹೇಗೆ ಆಲಿಸಬೇಕು (2:13)

ಥೆಸಲೋನಿಕದವರು ದೇವರ ವಾಕ್ಯವನ್ನು ಎಷ್ಟು ಉತ್ತಮವಾಗಿ ಅಂಗೀಕರಿಸಿದರೆಂಬದರಲ್ಲಿ ಅವರ "ಒಳ್ಳೇ ಹೃದಯಗಳು" ಸ್ವಲ್ಪ ಮಟ್ಟಿಗೆ ತೋರಿಬಂದವು.

*ಅವರು ವಾಕ್ಯವನ್ನು "ಮನುಷ್ಯರ ವಾಕ್ಯವಲ್ಲದೆಣಿಸದೆ" ಅಂಗೀಕರಿಸಿಕೊಂಡಿದ್ದರು* (ವ. 13a). ಅವರು ಕೇಳಿದ ಸಂದೇಶವು ಪೌಲ ಮತ್ತು ಆತನ ಸಂಗಡಿಗರಂತಹ ಮನುಷ್ಯರ ಮೂಲಕ ಬಂದಿತು (ರೋಮಾ 10:14). ಹೇಗೂ, ಸಂದೇಶವು ಮನುಷ್ಯರ ಮೂಲದಿಂದ ಬಂದದ್ದಾಗಿರಲಿಲ್ಲ. ಗಲಾತ್ಯ 1:11ರಲ್ಲಿ, ಪೌಲನು ಹೀಗೆ ಬರೆದನು, "ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ." ಅದೇ ಅಧ್ಯಾಯದ ನಂತರದ ಭಾಗದಲ್ಲಿ ಆತನು ತನ್ನ ಪರಿವರ್ತನೆಯ ಬಳಿಕ ತಕ್ಷಣವೇ ಯೆರೂಸಲೇಮಿಗೆ ಹೋಗಲಿಲ್ಲ (ವ. 17) ಮತ್ತು ಆತನ ಸಂದೇಶವು ಯೇಸು ಕ್ರಿಸ್ತನಿಂದಲೇ ಪ್ರಕಟಿಸಲ್ಪಟ್ಟಿತು ಎಂಬುದನ್ನು ತಿಳಿಸುತ್ತಾನೆ (ವ. 12). ಪೌಲನು ಥೆಸಲೋನಿಕದವರಿಗೆ ತಿಳಿಸಿದ ಸಂದೇಶವು ಆತನು ಆಸ್ಯಸೀಮೆಯಲ್ಲಿನ ಸಭೆಗಳಿಗೆ ಬರೆದ ಅದೇ ಸುವಾರ್ತೆಯಂತೆಯೇ ಆಗಿತ್ತು. ಈ ಸಂದೇಶವು ದೇವರಿಂದ ಪ್ರೇರಿತವಾಗಿತ್ತು.

*ಅವರು ವಾಕ್ಯವನ್ನು "ದೇವರ ವಾಕ್ಯ"ವೆಂದು ತಿಳಿದುಕೊಂಡಿದ್ದರು* (ವ. 13b). ಪೌಲನು ತಿಮೊಥೆಯನಿಗೆ "ದೈವಪ್ರೆರಿತವಾದ ಪ್ರತಿಯೊಂದು ಶಾಸ್ತ್ರಗಳು" ಎಂದು ಬರೆಯುತ್ತಾನೆ (2 ತಿಮೊಥೆ 3:16a). ಇಲ್ಲಿರುವ "ಪ್ರೇರಿತ" ಎಂಬುದಕ್ಕಿರುವ ಪದವು "ಶ್ವಾಸ ಊದಲ್ಪಟ್ಟ" ಎಂಬ ಅಧಿಕಾರ್ಥವನ್ನು ಕೊಡುತ್ತದೆ, ಈ ಮಾತುಗಳು ದೇವರ ಬಾಯಿಂದ ಶ್ವಾಸ ಊದಲ್ಪಟ್ಟಿರುತ್ತವೆಂಬ ಸಾದೃಶ್ಯವನ್ನು ನೀಡುತ್ತವೆ. ಥೆಸಲೋನಿಕದವರು ಸಂದೇಶವನ್ನು "ಅಂಗೀಕರಿಸಿಕೊಂಡರು," ಅಂದರೆ ಅವರು ಅದನ್ನು ಕಿವಿಯಾರೆ ಕೇಳಿದರು, ಮತ್ತು ಅವರು ಅದನ್ನು "ಅಂಗೀಕರಿಸಿಕೊಂಡರು" ಸಹ, ಅವರು ಅದನ್ನು ತಮ್ಮ ಮಾನದಂಡವಾಗಿ ಸ್ವೀಕರಿಸಿಕೊಂಡರು.

ಹಾಗಾದರೆ, ಸಂದೇಶವು ಅವರಲ್ಲಿ ತನ್ನ "ಕೆಲಸ ನಡಿಸಿ[ತು]" ಮತ್ತು ಅವರ ಜೀವಿತಗಳನ್ನು ರೂಪಾಂತರಗೊಳಿಸಿತು. ಈ ಯೋಚನೆಯು ಪೌಲನು ಬೇರೊಂದು ಕಡೆಯಲ್ಲಿ ಬರೆದ ಯೋಚನೆಯನ್ನು ಹೋಲುವದಾಗಿರುತ್ತದೆ. ಎಫೆಸ 3:20ರಲ್ಲಿ, ಆತನು

"ನಮ್ಮಲ್ಲಿ ಕಾರ್ಯಸಾಧಿಸುವ ಶಕ್ತಿ"ಯ ಬಗ್ಗೆ ಮಾತಾಡಿದನು. ಫಿಲಿಪ್ಪಿ 2:12, 13ರಲ್ಲಿ, ಪೌಲನು ಹೀಗೆ ಬರೆದನು, ". . . ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ. ಯಾಕೆಂದರೆ ದೇವರೇ ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟು ಮಾಡುವವನಾಗಿದ್ದಾನೆ." ಅವರ ಜೀವಿತಗಳಲ್ಲಿ ದೇವರು ಮಾಡಿದ ಕಾರ್ಯವು ಒಂದು ರೂಪಾಂತರಗೊಳಿಸುವ ಪರಿಣಾಮವನ್ನು ಹೊಂದಿತ್ತು, ಅವರನ್ನು ಕರ್ತನ ಪ್ರಭಾವದ ಸಾರೂಪ್ಯವುಳ್ಳವರನ್ನಾಗಿ ರೂಪಿಸಿತ್ತು (2 ಕೊರಿಂಥ 3:18).

ನಾವು ಸುವಾರ್ತೆಯ ಸಂದೇಶವನ್ನು ಕೇಳಿಸಿಕೊಳ್ಳುವಾಗ, ಅದನ್ನು ನಾವು ದೇವರಿಂದಲೇ ಬಂದದ್ದೆಂದು ಗುರುತಿಸುತ್ತೇವೋ? ಕೆಲವು ಸಾರಿ ಕ್ರೈಸ್ತರು, ತಮಗೆ ಹಾಗೆಂದು ಅನ್ನಿಸದಿದ್ದಾಗ್ಯೂ ಅದು "ಮನುಷ್ಯರಿಂದ" ಬಂದದ್ದು ಎಂಬಂತೆ ನಡೆದುಕೊಳ್ಳುತ್ತಾರೆ. ಉದಾಹರಣೆಗೆ, ಒಬ್ಬ ಬೋಧಕನು "ಸಭೆಯಾಗಿ ಕೂಡಿ ಬರುವದನ್ನು ಬಿಟ್ಟು ಬಿಡಬಾರದು" ಎಂಬದನ್ನು ಬೋಧಿಸುತ್ತಾನೆ (ಇಬ್ರಿಯ 10:25), ಮತ್ತು ಅದಕ್ಕೆ ಶ್ರೋತೃವು ಹೀಗೆ ಪ್ರತ್ಯುತ್ತರ ಕೊಡುವನು, "ಅದು ನಿನ್ನ ಸ್ವಂತ ಯೋಚನೆಯಾಗಿದೆ, ಬೋಧಕನೇ." ದೇವರು "ಸಕಲಸತ್ಕಾರ್ಯಗಳನ್ನು ಮಾಡುವದಕ್ಕೆ ಸಿದ್ಧರಾಗಿರಬೇಕು" (ತೀತನಿಗೆ 3:1) ಎಂದು ಹೇಳುತ್ತಾನೆ, ಆದರೆ ಸಭೆಯವರು ಹೀಗೆ ಹೇಳುವರು, "ಹಿರಿಯರಿಗೆ ಬೇಕಾದದ್ದು ಅದೇ ಆಗಿದೆ." ಬೈಬಲಾಧಾರಿತ ಬೋಧನೆಯು ಮನುಷ್ಯ ವಾಕ್ಯಗಳಲ್ಲ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

ಬೈಬಲಾಧಾರಿತ ಉಪದೇಶಗಳನ್ನು ನಾವು ಅವುಗಳೇನಾಗಿದ್ದಾವೆಂಬುದಕ್ಕಾಗಿ-ದೇವರ ವಾಕ್ಯ-ಕಿವಿಗೊಡಬೇಕು ಮತ್ತು ಅಂಗೀಕರಿಸಿಕೊಳ್ಳಬೇಕು. ಶಾಸ್ತ್ರಗಳು ಸುಳ್ಳಾಗಲಾರವು (ಯೋಹಾನ 10:35) ಮತ್ತು ದೇವರು "ಧಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿಯ 12:29) ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ. ಒಳ್ಳೇ-ಹೃದಯವುಳ್ಳ ಜನರು ವಾಕ್ಯವನ್ನು ದೈವಿಕವೆಂಬದಾಗಿ ಅಂಗೀಕರಿಸಿಕೊಳ್ಳುವರು! EE

## ವಾಕ್ಯವು ಸಾರಲ್ಪಡುವಾಗ (2:13)

ಕ್ರೈಸ್ತರಾಗಿ, ನಮ್ಮ ಅತ್ಯಂಥ ದೊಡ್ಡ ಜವಾಬ್ದಾರಿಗಳಲ್ಲೊಂದೆಂದರೆ ದೇವರ ವಾಕ್ಯವನ್ನು ಅಂಗೀಕರಿಸಿಕೊಳ್ಳುವದು. ಆತನ ವಾಕ್ಯವಿಲ್ಲದ ಹೋದರೆ ನಮಗೆ ರಕ್ಷಣೆಗೆ ನಡಿಸುವ ಯಾವ ಮಾರ್ಗದರ್ಶಿಯಿರುವದಿಲ್ಲ ಮತ್ತು ಕ್ರೈಸ್ತ ಜೀವಿತಕ್ಕೆ ನಿಜವಾದ ಭಕ್ತಿವೃದ್ಧಿಯು ಇರುವದಿಲ್ಲ.

ಥೆಸಲೋನಿಕದವರು ತಮಗೆ ಬೋಧಿಸಲ್ಪಟ್ಟ ವಾಕ್ಯವನ್ನು ಅಂಗೀಕರಿಸಿಕೊಂಡ ವಿಧಕ್ಕಾಗಿ ಪೌಲನು ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡುತ್ತಿದ್ದನು. ಅವರು ವಾಕ್ಯವನ್ನು ಅಂಗೀಕರಿಸಿಕೊಂಡದ್ದು ಅವರ ಪರಿವರ್ತನೆಗೆ ಬಾಗಿಲನ್ನು ತೆರೆದಿತ್ತು.

*ಅವರು ಅದನ್ನು ಅಂಗೀಕರಿಸಿಕೊಳ್ಳುವದಕ್ಕೆ ನಿರ್ಧರಿಸಿಕೊಂಡರು.* ಅವರು ಅದನ್ನು ಕೇಳಿಸಿಕೊಂಡರು, ಅದನ್ನು ಅಳೆದು ನೋಡಿದರು, ಮತ್ತು ಅದೊಂದು ನಿತ್ಯವಾದ ಸಂದೇಶವೆಂಬುದನ್ನು ಕಂಡುಕೊಂಡರು.

*ಅವರು ಅದನ್ನು ದೇವರ ವಾಕ್ಯವಾಗಿದೆಯೆಂಬುದಾಗಿ ನಂಬಿದರು.* ಥೆಸಲೋನಿಕದವರು ಸಂದೇಶವನ್ನು ಸಾರಿದ ಮನುಷ್ಯರನ್ನು ದಾಟಿ ನೋಡಿದರು, ಅವರನ್ನು ಪ್ರೇರೆಪಿಸಿದ ಪವಿತ್ರಾತ್ಮನನ್ನು ದೃಷ್ಟಿಸಿದರು. ಪೌಲ ಮತ್ತು ಆತನ ಸಂಗಡಿಗರ ಮೂಲಕವಾಗಿ ದೇವರೇ ತಮ್ಮೊಂದಿಗೆ ಮಾತಾಡುತ್ತಿದ್ದಾನೆಂಬದಾಗಿ ಅವರು ನಂಬಿದರು. ಒಬ್ಬ ಸುವಾರ್ತೆಯನ್ನು ದೇವರ ವಾಕ್ಯವೆಂದು ಸ್ವೀಕರಿಸಿಕೊಳ್ಳುವ ತನಕ ಅದಕ್ಕೆ ನಿಜವಾಗಿಯೂ ವಿಧೇಯನಾಗಲಾರನು.

*ಅವರು ಅದನ್ನು ಸಜೀವವಾದ, ಕಾರ್ಯಸಾಧಕವಾದ ವಾಕ್ಯವೆಂದು ಅಂಗೀಕರಿಸಿಕೊಂಡರು.* ಅವರು ಅದನ್ನು ನಿರ್ಜೀವವಾದ, ದೂಳು ಹಿಡಿದದ್ದು ಮತ್ತು ತಣ್ಣನೆಯದ್ದಾಗಿ ಕಾಣಲಿಲ್ಲ, ಆದರೆ ವಾಸ್ತವಾಂಶಗಳಿಂದ ಕೂಡಿದ್ದಾಗಿ, ಸತ್ಯ ಮತ್ತು ನಿಖರವಾದದ್ದೆಂದು ಕಂಡರು. ಈ ವಾಕ್ಯಗಳು ಪವಿತ್ರಾತ್ಮನ ಶಕ್ತಿಯಿಂದ ಜೀವವುಳ್ಳವುಗಳಾಗಿದ್ದವು. ಅವುಗಳಿಗೆ ತಮ್ಮ ಹೃದಯಗಳನ್ನು ತೆರೆಯುವ ಮೂಲಕ, ಅವರು ತಮ್ಮೊಳಗೆ ವಾಕ್ಯವು ಕೆಲಸ ನಡಿಸುವದನ್ನು ಅನುಭವ ಮಾಡಿದರು.

ಇಲ್ಲಿ ಒಂದು ಚಿಕ್ಕ ವಾಕ್ಯಸಾಲಿನಲ್ಲಿ ಒಬ್ಬನು ಹೇಗೆ ಕ್ರೈಸ್ತನಾಗುತ್ತಾನೆಂಬುದರ ಚಿತ್ರಣವು ಕೊಡಲ್ಪಟ್ಟಿದೆ. ಆತನ ದೇವರ ಸಜೀವವಾದ ಮತ್ತು ಕಾರ್ಯಸಾಧಿಸುವ ವಾಕ್ಯವನ್ನು ಅಂಗೀಕರಿಸಿಕೊಳ್ಳುವನು, ಮತ್ತು ಪವಿತ್ರಾತ್ಮನಿಂದ ಬಲಗೊಳಿಸಲ್ಪಟ್ಟ ವಾಕ್ಯವು ಜೀವವುಳ್ಳ ವಾಕ್ಯವಾದ ಯೇಸು ಕ್ರಿಸ್ತನಿಗೆ ಆತ್ಮವನ್ನು ಪರಿವರ್ತನೆಗೊಳಿಸುತ್ತದೆ.

ಪ್ರತಿ ಉದಾತ್ತ ಹೃದಯವು ಇದನ್ನು ಕೇಳಿಕೊಳ್ಳಬೇಕು, "ನಾನು ವಾಕ್ಯವನ್ನು ಹೇಗೆ ಅಂಗೀಕರಿಸಿಕೊಂಡಿದ್ದೇನೆ?" EC

## ಸುವಾರ್ತೆಯನ್ನು ತಿಳಿಯಪಡಿಸುವದು (2:1-13)

ಈ ಅಧ್ಯಾಯದಲ್ಲಿ, ಪೌಲನು ತನ್ನ ಮೇಲೆ ಥೆಸಲೋನಿಕದಲ್ಲಿನ ಒಬ್ಬ ವಿರೋಧಿ ಯೆಹೂದ್ಯ ವ್ಯಕ್ತಿಯಿಂದ ಮಾಡಲಾದ ಆಕ್ರಮಣದ ವಿರುದ್ಧ ತನ್ನ ಪರವಾಗಿ ಒಂದು ಪ್ರತಿವಾದವನ್ನು ಮಂಡಿಸುತ್ತಾನೆ. ತಾನು, ತಿಮೊಥೆ, ಮತ್ತು ಸೀಲರು ಹೇಗೆ ಅವರ ಮಧ್ಯದಲ್ಲಿ ಜೀವಿಸಿದ್ದರು, ಕೆಲಸ ಮಾಡಿದರು, ಮತ್ತು ಬೋಧಿಸಿದರು ಎಂಬುದರ ಬಗ್ಗೆ ಆತನು ಥೆಸಲೋನಿಕದವರಿಗೆ ನೆನಪಿಸುತ್ತಾನೆ. ನಾವು ಸುವಾರ್ತೆಯನ್ನು ತಿಳಿಯಪಡಿಸುವ ವೇಳೆ, ನಮ್ಮ ಉದ್ದೇಶಗಳು, ನಡವಳಿಕೆಯ ರೀತಿ, ಮತ್ತು ವಿಧಾನಗಳು ಏನಾಗಿರಬೇಕೆಂಬ ಕುರಿತ ಒಂದು ಚಿತ್ರಣವು ನಮಗೆ ಇಲ್ಲಿ ಸಿಕ್ಕುತ್ತದೆ. ಈ ವಾಕ್ಯಭಾಗವು ಸುವಾರ್ತೆ ಸಾರುವ ಸೇವೆಗೆ ಒಂದು ವೈಯಕ್ತಿಕ ಸುವಾರ್ತೆ ಸೇವಕನ ಕೈಪಿಡಿಯಂತೆ ಕೆಲಸ ಮಾಡಬಹುದಾಗಿದೆ.

ಈ ಹೊಸ ಒಡಂಬಡಿಕೆಯ ಅತ್ಯಂಥ ಶ್ರೇಷ್ಠ ವಾಕ್ಯಭಾಗಗಳಲ್ಲೊಂದಾಗಿರುವ ಇದು ಪೌಲ ಹಾಗೂ ಆತನ ಸಂಗಡಿಗರು ಮೌಖಿಕವಾಗಿ ಮತ್ತು ಲಿಖಿತವಾಗಿ ಸಾರಿದ ಸಂದೇಶವು ಪ್ರೇರಿತವಾದದ್ದೆಂಬದನ್ನು ದೃಢೀಕರಿಸುವದಾಗಿದೆ.

"ಸಂದೇಶವನ್ನು ಸಾರುವದು ಮತ್ತು ತಿಳಿಯಪಡಿಸುವದಕ್ಕೆ ಸಂಬಂಧಿಸಿದಂತೆ ಅತ್ಯಂಥ ಪರಿಚಿತವಾಗಿರುವ ಮತ್ತು ಅತಿ ಹೆಚ್ಚು ಸಾರಿ ಬಳಸಲ್ಪಟ್ಟಿರುವ ಹೊಸ

ಒಡಂಬಡಿಕೆಯ ವಾಕ್ಯಭಾಗ ಯಾವದು?" ಎಂದು ನೀವು ಕೇಳುವಾದದಲ್ಲಿ, ಬಹುಶಃ ಉತ್ತರವು 2 ತಿಮೊಥೆ 4:1-4 ಎಂದಾಗಿರಬಹುದಾಗಿದೆ. ಹೇಗೂ, ಮತ್ತೊಂದು ಉತ್ತರವು ಏನಾಗಿಬಹುದೆಂದರೆ 1 ಥೆಸಲೋನಿಕ 2:1-13. ಈ ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ವಾಕ್ಯಭಾಗವು 2 ತಿಮೊಥೆ 2:1-4ರಷ್ಟು ಪರಿಚಿತವಾದದ್ದು ಅಥವಾ ಸತತವಾಗಿ ಬಳಸಲ್ಪಟ್ಟಿರುವದು ಆಗಿರುವದಿಲ್ಲ; ಆದರೆ ಪ್ರತಿಯೊಬ್ಬ ಉಪದೇಶಕ, ಬೋಧಕ, ಹಿರಿಯ, ಪೋಷಕ, ಮತ್ತು ಕ್ರೈಸ್ತನು, ನಿರ್ದಿಷ್ಟವಾಗಿ ಸಂದೇಶವನ್ನು ತಿಳಿಯಪಡಿಸುವದರ ಉದ್ದೇಶ ಮತ್ತು ರೀತಿಯ ಬಗ್ಗೆ ಮಾತಾಡುವ, ಈ ಸಂದೇಶದ ಭಾಗವನ್ನು ಪೂರಾ ಕುಡಿಯುದಾದರೆ ಉತ್ತಮತೆಯನ್ನು ಸಾಧಿಸುವನು.

*ಸಂದೇಶ (2:13).* ಪೌಲನು ಎಂದಿಗೂ ತನ್ನ ಸಂದೇಶವು ಪ್ರೇರಿತವಾದದ್ದು ಮತ್ತು ಅಧಿಕಾರಯುತವಾದದ್ದು ಎಂಬದಾಗಿ ಹೇಳಿಕೊಳ್ಳಲಿಲ್ಲ ಎಂಬದಾಗಿ ಕೆಲವು ಬರಹಗಾರರು ಸಮರ್ಥಿಸುವದಕ್ಕೆ ಪ್ರಯತ್ನಿಸಿದ್ದಾರೆ. ಆ ರೀತಿ ಹೇಳಿಕೊಳ್ಳುವಿಕೆಯು ಹೊಸ ಒಡಂಬಡಿಕೆಯಲ್ಲಿರುವ ಪುರಾವೆಯ ಬೆಳಕಿನಲ್ಲಿ ನಿರಾಧಾರವಾದದ್ದು. ಥೆಸಲೋನಿಕದವರೊಂದಿಗಿನ ಈ ಪತ್ರ ವ್ಯವಹಾರದಲ್ಲಿ ಪೌಲನು ತನ್ನ ಸಂದೇಶದ ಪ್ರೇರಣೆ ಮತ್ತು ಅಧಿಕಾರದ ಬಗ್ಗೆ ಹೇಳಿಕೊಂಡಿರುವದಕ್ಕೆ ಅನೇಕ ಸೂಚನೆಗಳು ಕಂಡು ಬರುತ್ತವೆ. ಆತನು ಹೀಗೆ ಹೇಳಿದನು, "*ನಾವು* ಕರ್ತನಾದ ಯೇಸುವಿನ ಅಧಿಕಾರದಿಂದ ನಿಮಗೆ ಕೊಟ್ಟ ಆಜ್ಞೆಗಳನ್ನು ತಿಳಿದಿದ್ದೀರಷ್ಟೆ. . . . ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬದೇ. ಆದದರಿಂದ ಹಾದರಕ್ಕೆ ದೂರವಾಗಿರಬೇಕು" (1 ಥೆಸಲೋನಿಕ 4:2, 3; ಒತ್ತಿ ಹೇಳಿದ್ದು ನನ್ನದು). 8ನೇ ವಚನವು ಹೀಗೆ ಹೇಳುತ್ತದೆ, "ಹೀಗಿರಲು ಈ ಮಾತನ್ನು ತಾತ್ಸಾರ ಮಾಡುವವನು ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲದೆ ಪವಿತ್ರಾತ್ಮ ವರವನ್ನು ನಿಮಗೆ ದಯಪಾಲಿಸಿದ ದೇವರನ್ನೂ ತಿರಸ್ಕರಿಸುವನು." ಈ ಎರಡೂ ವಚನಗಳನ್ನು ಒಂದಾಗಿ ಕೂಡಿಸಿರಿ. ಎರಡು ಮತ್ತು ಎರಡು ಕೂಡಿದರೆ ನಾಲ್ಕು ಆಗುತ್ತದೆ. 2 ಮತ್ತು 8 ಒಟ್ಟಾಗಿ ಸೇರಿ ಎಷ್ಟಾಗುತ್ತದೆ? 2ನೇ ವಚನದಲ್ಲಿ ಪೌಲನು "*ನಾವು* . . . ಕೊಟ್ಟ ಆಜ್ಞೆಗಳನ್ನು ತಿಳಿದಿದ್ದೀರಷ್ಟೆ" ಎಂದು ಹೇಳುತ್ತಾನೆ. 8ನೇ ವಚನವು ಹೀಗೆ ಹೇಳುತ್ತದೆ, "ಈ ಮಾತನ್ನು ತಾತ್ಸಾರ ಮಾಡುವವನು ಮನುಷ್ಯನನ್ನು ತಿರಸ್ಕರಿಸುವದು ಮಾತ್ರವಲ್ಲ . . . ದೇವರನ್ನೂ ತಿರಸ್ಕರಿಸುತ್ತಾನೆ." ಈಗ ಎರಡು ವಚನಗಳಲ್ಲಿ ಅತಿ ಸುವ್ಯಕ್ತವಾಗಿರುವದೇನು? ಆತನು "ಇದು ದೇವರ ವಾಕ್ಯವೇ" ಎಂದು ಹೇಳುತ್ತಿದ್ದಾನೆ.

*ಪ್ರೇರಣೆ (2:1-6, 8).* ಅವರಿಗೆ ಸಂದೇಶವನ್ನು ಸಾರುವಂತೆ ಯಾವದು ಪ್ರೇರಣೆಯನ್ನು ನೀಡಿತ್ತು? ಮನುಷ್ಯರು ನಿಜವಾಗಿಯೂ ನಂಬದಂಥಹ ಯಾವದೇ ಕಾರ್ಯಕ್ಕೋಸ್ಕರ ಬಹಳ ದೀರ್ಘಕಾಲದ ವರೆಗೆ ಬಾಧೆಗಳನ್ನನುಭವಿಸುವದಕ್ಕೆ ಮನಸ್ಸುಳ್ಳವರಾಗಿರುವದಿಲ್ಲ. ಅಷ್ಟುಮಾತ್ರವಲ್ಲದೆ, ಬಾಧೆಯು ಕೊಳಕನ್ನು ಶುದ್ದೀಕರಿಸಿ ನಿಜವಾದ ಉದ್ದೇಶಗಳನ್ನು ಸ್ಪಷ್ಟತೆಗೆ ತರುವಂಥ ದಾರಿಯನ್ನು ಹೊಂದಿದೆ. ಫಿಲಿಪ್ಪಿಯಲ್ಲಿ ಸಂಭವಿಸಿದ್ದ ಕಾರ್ಯವು ಅವರ ಪ್ರೇರಣೆಯ ಕುರಿತು ನಮಗೆ ಏನನ್ನೋ ತಿಳಿಸುವದಾಗಿದೆ. ಅವರು ಹೊಡೆತಗಳನ್ನು ಹೊಂದಿದ್ದರು, ಮತ್ತು ಹೀಗಿದ್ದಾಗ್ಯೂ ಅವರು ಸಾರುವದನ್ನು ಮುಂದುವರೆಸಿದ್ದರು.

ಅವರಿಗೆ ಪ್ರೇರಣೆಯು ಅಬದ್ಧ, ಅಶುದ್ಧತೆ, ಅಥವಾ ಕಪಟ ಆಗಿರಲಿಲ್ಲ. ಪೌಲನು ಹೀಗೆ

ಹೇಳಿದನು, "ನಾನು ಜನರಿಂದ ಸ್ತುತಿಯನ್ನಾಗಲಿ ಮತ್ತು ಮೆಚ್ಚಿಕೆಯ ಚಪ್ಪಾಳೆಗಳನ್ನಾಗಲಿ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿಲ್ಲ. ನಾನು ದೇವರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಿದ್ದೇನೆ. ಈ ಕಾರ್ಯಗಳು ನಮಗೆ ಪ್ರೇರಣೆಯನ್ನಾಗಲಿ ಅಥವಾ ಸ್ಫೂರ್ತಿಯನ್ನಾಗಲಿ ನೀಡಲಿಲ್ಲ. ಅವುಗಳು ನಮ್ಮ ಸಂದೇಶದ ಲಕ್ಷಣಗಳಾಗಿರಲಿಲ್ಲ."

ಅವರು ಸ್ವಾರ್ಥ ಗುರಿಗಳೊಂದಿಗೆ ಸೇವೆ ಮಾಡುವ ನಿರ್ಬಂಧಕ್ಕೊಳ ಪಡಿಸಪಟ್ಟಿರಲಿಲ್ಲ. 5ನೇ ವಚನದಲ್ಲಿ ಆತನು ತನ್ನೊಳಗಿನ ಪ್ರೇರಣೆಯನ್ನು ಎಲ್ಲರೆದುರಿಗೆ ಬಿಚ್ಚಿಡುತ್ತಾನೆ ಮತ್ತು ನಕಾರಾತ್ಮಕ ಉದ್ದೇಶಗಳು ತನಗೆ ಪ್ರೇರಣೆಯಾಗಿರುವದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದನು.

ಪೌಲನು ಹಣದ ಲಾಭಕ್ಕೋಸ್ಕರ ಈ ಸೇವೆಯಲ್ಲಿರಲಿಲ್ಲ. ಪೌಲನು ಹಣದ ಸಹಾಯವನ್ನು ಪಡೆದುಕೊಳ್ಳದ ಸಭೆಗಳೆಂದು ನಮಗೆ ಹೊಸ ಒಡಂಬಡಿಕೆಯಲ್ಲಿ ಗೊತ್ತಿರುವ ಕನಿಷ್ಠ ಎರಡು ಸಭೆಗಳೊಳಗೆ ಥೆಸಲೋನಿಕವು ಒಂದಾಗಿರುತ್ತದೆ. ತನಗೆ ಹಣದ ಸಹಾಯವನ್ನು ಪಡೆದುಕೊಳ್ಳುವ ಅಧಿಕಾರವಿರುತ್ತದೆ, ಆದರೆ ಆ ಅಧಿಕಾರವನ್ನು ನಾನು ಬಳಕೆ ಮಾಡುವದಿಲ್ಲ ಎಂಬುದನ್ನು ಸಹ ಆತನು 1 ಕೊರಿಂಥ 9ರಲ್ಲಿ ವಾದಿಸಿದನು. ಥೆಸಲೋನಿಕ ಮತ್ತು ಕೊರಿಂಥಗಳಲ್ಲಿ, ಪೌಲನು ತನ್ನ ಸ್ವಂತ ಕೈಗಳಿಂದ ದುಡಿದನು, ಮತ್ತು ಕೊರಿಂಥದವರಿಗೆ ಬರೆಯುತ್ತಾ, "ನಾನು ಇತರ ಸಭೆಗಳಿಂದ ಹಣದ ಸಹಾಯವನ್ನು ಪಡೆದೆನೆಂದು ತಿಳಿಸುತ್ತಾನೆ." ಆತನು ಅದನ್ನು 2 ಕೊರಿಂಥ 11:8ರಲ್ಲಿ ಯಾವ ಮಾತುಗಳಿಂದ ವಿವರಿಸಿದನೆಂಬದನ್ನು ಗಮನಿಸಿರಿ, "ನಿಮ್ಮ ಸೇವೆ ಮಾಡುವದಕ್ಕೋಸ್ಕರ ನಾನು ಇತರ ಸಭೆಗಳಿಂದ ಸಂಬಳ ತೆಗೆದುಕೊಂಡು ಅವುಗಳನ್ನು ಸುಲುಕೊಂಡೆನು." ಥೆಸಲೋನಿಕ ಮತ್ತು ಕೊರಿಂಥದ ಎರಡೂ ಪಟ್ಟಣಗಳಲ್ಲಿ ಆತನು ಗುಡಾರ ತಯಾರಿಸುವವನಾಗಿ ಕೆಲಸ ಮಾಡಿದನು. ಆತನು ಸಂಬಳಕ್ಕಾಗಿ ದುಡಿಯಬೇಕೆಂದಾಗಲಿ, ಭೌತಿಕತೆಯ ಉದ್ದೇಶಗಳಿಂದಾಗಲಿ ಪ್ರಚೋದಿಸಲ್ಪಟ್ಟವನಾಗಿರಲಿಲ್ಲ.

ಆತನು ಮನುಷ್ಯರ ಶ್ಲಾಘನೆಯಿಂದ ಪ್ರೇರಣೆಗೊಂಡಿರಲಿಲ್ಲ. ಆತನು ಥೆಸಲೋನಿಕದಲ್ಲಿ ಕೆಲಸ ಮಾಡುವಂತೆ ಪ್ರೇರಣೆ ಮಾಡಿದ ಆತನ ಮಾನವ ಅಹಂನ್ನು ಮನುಷ್ಯರಿಂದ ಸಿಕ್ಕುವ ಘನತೆಯು ಪ್ರಚೋದಿಸಿರಲಿಲ್ಲ. ಆತನು 2:6ರಲ್ಲಿ ಏನು ಹೇಳಿದನೆಂಬುದನ್ನು ಗಮನಿಸಿರಿ: "ನಾವು ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ."

ಮಾನವ ಆತ್ಮವನ್ನು ತೃಪ್ತಿಗೊಳಿಸುವಂಥ ಮಾನವನ್ನು ಅಪೇಕ್ಷಿಸುವ ಮನೋಭಾವವು ನಂಬಿಕೆಗೆ ಒಂದು ನಿಜವಾದ ಅಡಚಣೆಯನ್ನು ಒದಗಿಸಬಲ್ಲದು. ಯೋಹಾನ 5:44ರಲ್ಲಿ, ಯೇಸು ಹೀಗೆ ಹೇಳುತ್ತಾನೆ, "ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?"

ಪೌಲನು ಏಕೆ ಸೇವೆ ಮಾಡಿದನು? ಆತನು ಪ್ರೀತಿಯಿಂದಾಗಿ ಸೇವೆ ಮಾಡಿದನು. ಆತನಿಗೆ ಹೊಗಳಿಕೆಯ ಚಪ್ಪಾಳೆಗಳು ಪ್ರೇರಣೆಯಾಗಿರಲಿಲ್ಲವಾದರೆ, ಆತನು ದುರಾಶೆಯ ಸೋಗನ್ನು ಹಾಕಿಕೊಂಡಿಲ್ಲವಾದರೆ, ಮತ್ತು ಆತನು ಮುಖಸ್ತುತಿಯ ಮಾತುಗಳನ್ನು

ಬಳಸಲಿಲ್ಲವಾದರೆ, ಪೌಲನಿಗೆ ಪ್ರೇರಣೆಯನ್ನು ನೀಡಿದ್ದಾದರೂ ಏನು? ಆತನು 8ನೇ ವಚನದಲ್ಲಿ ನಮಗೆ ಹೀಗೆ ಹೇಳಿದನು, "ನೀವು ನಮಗೆ ಅತಿ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ನಮ್ಮ ಪ್ರಾಣವನ್ನೇ ಕೊಡುವದಕ್ಕೆ ಸಂತೋಷಿಸುವವರಾದೆವು."

ಸಂದೇಶವನ್ನು ತಿಳಿಯಪಡಿಸುವದರಲ್ಲಿ ನಾವು ಕೇವಲ ಕೆಲವೊಂದು ವಾಸ್ತವಾಂಶ ಗಳನ್ನು ಮಾತ್ರವೇ ಕೊಡುವವರಾಗಿರುವದಿಲ್ಲ. ನಾವು ಕ್ಷಮಾಪಣೆಯ ಶರತ್ತುಗಳ-ಪಶ್ಚಾತ್ತಾಪದಲ್ಲಿ ವ್ಯಕ್ತಗೊಳಿಸಲಾಗುವ ನಂಬಿಕೆ, ಅರಿಕೆ, ಮತ್ತು ಆತನ ಮರಣದಲ್ಲಿ ಪಾಲುಗಾರರಾಗಲು ದೀಕ್ಷಾಸ್ನಾನ ಮಾಡಿಕೊಳ್ಳುವಿಕೆ-ಬಗ್ಗೆ ಹೇಳುವವರಾಗಿ ಬರುತ್ತೇವೆ. ನಾವು ಒಂದು ಸಂದೇಶವನ್ನು ಹೊತ್ತುಕೊಂಡು ಮತ್ತು ಕೊಡುವದಕ್ಕೆ ಮಾತ್ರವೇ ಬರುವದಿಲ್ಲ, ಆದರೆ ನಮ್ಮನ್ನೇ ಕೊಡುವದಕ್ಕೆ ಬರುತ್ತೇವೆ. ಅತ್ಯಂಥ ಪರಿಣಾಮಕಾರಿಯಾದ ಒಬ್ಬ ಬೋಧಕ, ಸುವಾರ್ತಿಕ, ಮತ್ತು ವೈಯಕ್ತಿಕ ಕೆಲಸಗಾರನು ಯಾರೆಂದರೆ, ಪೌಲನ ಹಾಗೆ, "ನಾನು ನಿಮ್ಮ ಮೇಲೆ ಮಮತೆಯನ್ನು ಹೊಂದಿದ್ದೇನೆ" ಎಂದು ಹೇಳಬಲ್ಲವನೇ. ಪೌಲನಿಗಿದ್ದ ಅತ್ಯಂಥ ದೊಡ್ಡ ಪ್ರೇರಣೆಯು ಪ್ರೀತಿಯ ಪ್ರೇರಣೆ ಎಂದು ಹೇಳುವದಕ್ಕೆ ಇದು ಇನ್ನೊಂದು ವಿಧವಾಗಿರುತ್ತದೆ. ಆತನು ಕರ್ತನನ್ನು ಪ್ರೀತಿಸಿದನು, ಮತ್ತು ಆತನು ಸುವಾರ್ತೆಯನ್ನು ಪ್ರೀತಿಸಿದನು. ಮುಖ್ಯವಾಗಿ ಈ ವಾಕ್ಯಭಾಗದ ಮೂಲಕ ಪ್ರಕಾಶಿಸುತ್ತಿರುವದೇನೆಂದರೆ ಆತನು ಎಲ್ಲಾ ಜನರ ಆತ್ಮಗಳನ್ನು ಪ್ರೀತಿಸಿದನು ಎಂಬ ಮಹಾ ಸತ್ಯವೇ ಆಗಿದೆ.

*ವರ್ತನೆ (2:7, 11).* ಆತನ ವರ್ತನೆಯ ವಿಷಯವೇನು? ಪ್ರೇರಣೆ ಮತ್ತು ವರ್ತನೆಗಳು ಬಹಳ ನಿಕಟವಾಗಿ ಸಂಬಂಧ ಹೊಂದಿವೆ. ವಾಸ್ತವಾಂಸದಲ್ಲಿ ಒಬ್ಬನು ಹೇಗೆ ವರ್ತಿಸುವನೆಂಬುದನ್ನು ಮತ್ತು ಆತನ ವಿಧಾನವನ್ನು ನಿರ್ಧರಿಸುವದು ಆತನ ಪ್ರೇರಣೇಯೇ ಆಗಿದೆ. ಈ ವಿಭಾಗದಲ್ಲಿ ಪೌಲನು ಎರಡು ಅತ್ಯಂಥ ಹೃದಯಸ್ಪರ್ಶಿ ಸಾದೃಶ್ಯಗಳನ್ನು ಬಳಸುತ್ತಾನೆ. ಒಂದು 7ನೇ ವಚನದಲ್ಲಿ ಕಾಣಿಸಿಕೊಳ್ಳುತ್ತದೆ. ಆತನು ಹೀಗೆ ಹೇಳುತ್ತಾನೆ, "ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು." ಇದಕ್ಕಿಂತ ಹೆಚ್ಚು ಹೃದಯಸ್ಪರ್ಶಿ ಸಾದೃಶ್ಯವು 11ನೇ ವಚನದಲ್ಲಿ ಬರುತ್ತದೆ, ಅದು ಒಬ್ಬೊಬ್ಬರ ವಿಷಯದಲ್ಲಿರುವ ಕಾಳಜಿಯ ಕುರಿತಾಗಿ ನಮಗೆ ತೋರಿಸಿ ಕೊಡುತ್ತದೆ: ಆತನು ಹೀಗೆ ಹೇಳಿದನು, "ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿಹೇಳುತ್ತಾ ಧೈರ್ಯಪಡಿಸುತ್ತಾ . . . ಖಂಡಿತವಾಗಿ ಹೇಳುತ್ತಾ ಇದ್ದೆವು."

ಪ್ರತಿಯೊಂದು ಮಗುವಿಗೂ ತನ್ನ ತಂದೆ ಮತ್ತು ತಾಯಿಯ ಸಂಗಡ ಸ್ವಲ್ಪ ಸಮಯವನ್ನು ಕಳೇಯುವ ಅಗತ್ಯವಿರುತ್ತದೆ. ನೀವು ನಿಮ್ಮ ಮಕ್ಕಳನ್ನು ಒಂದು ಸಮೂಹವಾಗಿ ಪೋಷಣೆಯನ್ನು ಒದಗಿಸುವದಿಲ್ಲ. ಈ ವಿಭಾಗದಲ್ಲಿ ಒಂದು ದೊಡ್ಡ ಪ್ರೀತಿಯ ಪ್ರೇರಣೆಯಿತ್ತು, ಮತ್ತು ಆ ಪ್ರೀತಿಯು ವರ್ತನೆ ಮತ್ತು ವಿಧಾನಗಳೊಳಗೆ ತುಳುಕಿ ಬಿತ್ತು. ಅದು ಪರಿವರ್ತನೆಗೊಂಡ ಪ್ರತಿಯೊಬ್ಬ ಥೆಸಲೋನಿಕದವನಿಗಾಗಿ ಒಂದು ವೈಯಕ್ತಿವಾದ ಕಾಳಜಿಯಾಯಿತು. ಅದೊಂದು ವಾತ್ಸಲ್ಯ ಮತ್ತು ಮಮತೆಯಿಂದ ಕೂಡಿದ

ಕೈಚಾಚುವಿಕೆಯಾಗಿತ್ತು. ಅದೊಂದು ಪ್ರಾಮಾಣೀಕೃತ ಸಂದೇಶವನ್ನು ಪ್ರೀತಿಯಿಂದ ಮಂಡಿಸುವಿಕೆಯಾಗಿತ್ತು. ಪೌಲನು ತನ್ನನ್ನೇ ಒಪ್ಪಿಸಿ ಕೊಡುವದಕ್ಕೆ ಸಿದ್ಧನಾಗಿದ್ದನು.

ಅನೇಕ ಸಾರಿ *ಪ್ರೀತಿಯೇ* ಹೃದಯಗಳನ್ನು ತೆರೆಯುತ್ತದೆ ಹೊರತು *ತರ್ಕ* ಅಲ್ಲ. ನೀವು ಜನರಿಗಾಗಿ ಎಷ್ಟೊಂದು *ಚಿಂತಿಸುತ್ತೀರೆಂಬು*ದನ್ನು ಅವರು ತಿಳಿಯುವ ತನಕ ನಿಮಗೆಷ್ಟು *ತಿಳಿದದೆ* ಎಂಬುದರ ಬಗ್ಗೆ ಅವರು ಚಿಂತಿಸುವದಿಲ್ಲ ಎಂಬುದು ಸತ್ಯವಲ್ಲವೋ?

George Santayanaನು 1905ರಲ್ಲಿ ಐದು ಸಂಪುಟಗಳುಳ್ಳ *The Life of Reason* ಎಂಬ ಕೃತಿಯ ಬರಹವನ್ನು ಮೊದಲ ಬಾರಿಗೆ ಪೂರ್ತಿಗೊಳಿಸಿದ್ದನು. ಬಳಿಕ ತಾಣು ಮರಣಿಸುವದಕ್ಕೆ ಸ್ವಲ್ಪ ಕಾಲ ಮುಂಚೆ ಆತನು ಆ ಕೃತಿಯನ್ನು ಪುನಸ್ಸಂಪಾದಿಸಿದನು ಮತ್ತು ಆ ಕೃತಯ ಬಹಳಷ್ಟು ಭಾಗವನ್ನು ಪುನಃ ಬರೆದನು. ಆ ಗತಿಸಿದ ವರ್ಷಗಳ ಬಳಿಕ, ಆತನಿಗೆ "ನೀನು ನಿನ್ನ ದೃಷ್ಟಿಕೋನಗಳನ್ನು ಬದಲಾಯಿಸಿಕೊಂಡಿರುವಿಯೋ? ನೀನು ನಿನ್ನ ಅಭಿಪ್ರಾಯಗಳನ್ನು ಮಾರ್ಪಡಿಸಿಕೊಂಡಿ ರುವಿಯೋ? ನೀನು ಈಗ ಬೇರೆಯಾದ ಆದರ್ಶಗಳನ್ನು ಹೊಂದಿರುವಿಯಾ?" ಎಂದು ಕೇಳಲಾಯಿತು. ಆತನು ಹೀಗೆ ಪ್ರತ್ಯುತ್ತರ ನೀಡಿದನು, "ಇಲ್ಲ! ಇಲ್ಲ! ನಾನು ಹೆಚ್ಚಾಗಿ ಹಳೇ ಕಾರ್ಯಗಳನ್ನೇ ಹೇಳಿದ್ದೇನೆ, ಆದರೆ ನಾನು ಅವುಗಳನ್ನು ಸ್ವಲ್ಪ ವ್ಯತ್ಯಾಸವಾದ ಧ್ವನಿಯಲ್ಲಿ ಹೇಳುವದಕ್ಕೆ ಬಯಸಿದ್ದೆನು ಅಷ್ಟೆ." ಆ ಧ್ವನಿಯಯ ಬಹಳ ಪ್ರಾಮುಖ್ಯವಾಗಿರುತ್ತದೆ. ಶ್ರೇಷ್ಠವಾದ ಬೋಧನೆ, ಪ್ರಸಂಗಿಸುವಿಕೆ, ಮತ್ತು ವೈಯಕ್ತಿಕ ಕೆಲಸದಲ್ಲಿ, ಅರ್ಥ ಮತ್ತು ವರ್ತನೆಗಳು ಸಮ್ಮಿಳನಗೊಂಡಿರುತ್ತವೆ. ನಾವು ಆ ಪ್ರೀತಿಯ ಸಂದೇಶವನ್ನು ಸಾರುವ ವೇಳೆ, ನಮ್ಮ ವರ್ತನೆಯು ಪ್ರೀತಿಯದ್ದಾಗಿರಬೇಕು.

*ಮುಕ್ತಾಯ.* ಈ ಸುವಾರ್ತೆಯಂತಹ ಮಹಾ ಸಂದೇಶವನ್ನು ಪ್ರೀತಿಯಲ್ಲಿ ಸಾರಲ್ಪಡುವದಾದರೆ ಜನರು ಸಂದೇಶವನ್ನು ವಿರೋಧಿಸುವದು ವಿರಳವಾಗಿರುತ್ತದೆ. ನಾವು ಯಾರೊಂದಿಗೆ ಮಾತಾಡುತ್ತೇವೋ ಅವರ ಬಳಿಗೆ ಈ ರಕ್ಷಣೆಯನ್ನುಂಟು ಮಾಡುವ ಸಂದೇಶವನ್ನು ಕೊಂಡೊಯ್ದು ಅವರ ಮೇಲೆ ನಿಜವಾದ ಕಾಳಜಿಯನ್ನು ತೋರ್ಪಡಿಸುವಾಗ ನಾವು ಅವರ ಮೇಲೆ ಬಲವಾದ ಪ್ರಭಾವವನ್ನು ಬೀರಬಲ್ಲೆವು ಎಂಬುದನ್ನು ನನಗೆ ನಂಬದೇ ಇರುವದಕ್ಕೆ ಆಗುವದಿಲ್ಲ.

ನಾವು ಸಂದೇಶವನ್ನು ನೋಡುತ್ತೇವೆ. ಅದು ದೇವರ ವಾಕ್ಯ: "ನೀವು . . . ದೇವರ ವಾಕ್ಯವೆಂದೇ ತಿಳಿದು ಅಂಗೀಕರಿಸಿದಿರಿ" (1 ಥೆಸಲೋನಿಕ 2:13). ನಾವು ಒಂದು ಪ್ರೇರಣೆಯನ್ನು-ಒಂದು ದೊಡ್ಡ ಪ್ರೀತಿಯ ಪ್ರೇರಣೆ, ಹೊರತು ಒಂದು ಹಣ ಗಳಿಸುವ ಪ್ರೇರಣೆಯಲ್ಲ, ಮನುಷ್ಯರಿಂದ ಮಾನವನ್ನು ಅಪೇಕ್ಷಿಸುವ ಪ್ರೇರಣೆಯಲ್ಲ-ಕಾಣುತ್ತೇವೆ. ಈ ಪ್ರೀತಿಯ ಪ್ರೇರಣೆಯು ನಾಶನದಲ್ಲಿರುವವರನ್ನು ಪೌಲನು ಹೇಗೆ ಸಂಧಿಸಿದನೆಂಬುದಕ್ಕೆ ಸ್ವಾದವನ್ನು ನೀಡಿತ್ತೆಂಬುದರಲ್ಲಿ ವರ್ತನೆಯನ್ನು ಕಾಣುತ್ತೇವೆ- "ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ," ಅಥವಾ ಇನ್ನಷ್ಟು ವ್ಯಕ್ತಗೊಂಡದ್ದಾಗಿ, "ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ." AM

## ಒಳ್ಳೇ ಹೃದಯಗಳುಳ್ಳ ಜನರು (2:13-20)

ಒಬ್ಬ ದೊಡ್ಡ ಯಜಮಾನನು ದೇವರೊಂದಿಗೆ ಸರಿಯಾದ ಸಂಬಂಧವನ್ನಿಟ್ಟು

ಕೊಳ್ಳುವದಕ್ಕೆ ಯಾವುದ ಉತ್ತಮ ದಾರಿಯೆಂದು ಆಲೋಚನೆಯನ್ನು ಮಾಡಿ ತನಗೆ ತಿಳಿಸುವಂತೆ ತನ್ನ ತತ್ವಜ್ಞಾನಿಗಳಿಗೆ ಹೇಳಿದನು ಎಂಬ ಬಗ್ಗೆ ಯೆಹೂದ್ಯರೊಳಗೆ ಒಂದು ದಂತಕತೆ ಇರುತ್ತದೆ. ಒಬ್ಬ ಮನುಷ್ಯನು ಮುಂದೆ ಬಂದನು ಮತ್ತು ಉತ್ತಮ ದಾರಿಯೆಂದರೆ ನೀನು ಒಂದು ಬೈಬಲಾಧಾರಿತವಾದ ಒಳ್ಳೇ ಕಣ್ಣನ್ನು ಹೊಂದಿರುವದು, ಅದರಲ್ಲಿ ಒಂದು ತೃಪ್ತ ಮನೋಧರ್ಮವು ಸೇರಿರುತ್ತದೆಂದು ಹೇಳಿದನು. ಮತ್ತೊಬ್ಬನು ನೀನೊಬ್ಬ ಒಳ್ಳೇ ಸಹಪಾಠಿಯಾಗಿರುವಂತೆ ನೋಡಿಕೋ ಎಂದು ಹೇಳಿದನು. ನೀನೊಬ್ಬ ಒಳ್ಳೇ ನೆರೆಯವನಾಗಿರುವಂತೆ ಜಾಗ್ರತೆ ವಹಿಸು ಎಂದು ಮೂರನೆಯವನು ಹೇಳಿದನು. ಅಂತಿಮವಾಗಿ, Eleazar ಎಂಬವನು ಒಂದು ಒಳ್ಳೇ ಹೃದಯವನ್ನು ಹೊಂದಿರುವದು ಎಲ್ಲಕ್ಕಿಂತ ಉತ್ತಮವಾದದ್ದು ಎಂದು ಹೇಳಿದನು. ಆಗ ಆ ರಬ್ಬೀಯು, “ಮಾನ್ಯರೇ, ನೀವು ಹೇಳಿದ ಉತ್ತರ ಸರಿಯಾಗಿದೆ, ಯಾಕೆಂದರೆ ನೀವು ಒಂದು ಹೃದಯವನ್ನು ಹೊಂದಿದ್ದರೆ, ನಿಮ್ಮ ಕಣ್ಣು ಸರಿಯಾಗಿರುವದು ಮತ್ತು ನೀವು ಒಬ್ಬ ಒಳ್ಳೇ ನೆರೆಯವನು ಹಾಗೂ ಒಬ್ಬ ಒಳ್ಳೇ ಸಹಪಾಠಿ ಆಗಿರುವಿರಿ” ಎಂದು ಹೇಳಿದನು.

ಪೌಲನು 2:13-20ರಲ್ಲಿ ಥೆಸಲೋನಿಕದವರ ಬಗ್ಗೆ ಏನು ಹೇಳಿದನೆಂಬದರ ಪ್ರಕಾರವಾಗಿ, ಅವರು “ಒಳ್ಳೇ ಹೃದಯಗಳುಳ್ಳ” ಜನರಾಗಿದ್ದರು ಎಂಬುದನ್ನು ನಾವು ಕಾಣಬಹುದಾಗಿದೆ. ಈ ವಚನಗಳಲ್ಲಿ, ಆತನು ಅವರೊಂದಿಗಿದ್ದ ವೇಳೆಯಲ್ಲಿ ಥೆಸಲೋನಿಕದವರು ತನ್ನ ಸಂದೇಶಕ್ಕೆ ಹೇಗೆ ಪ್ರತಿಯಾಗಿ ಸ್ಪಂದಿಸಿದರೆಂಬುದನ್ನು ಪೌಲನು ಬಣ್ಣಿಸುತ್ತಾನೆ. ಅವರು ತೋರಿದ ಸ್ಪಂದನೆಯು ಅವರಲ್ಲಿ “ಒಳ್ಳೇ ಹೃದಯಗಳಿದ್ದವು” ಎಂಬುದನ್ನು ತೋರಿಸುತ್ತದೆ. EE

## ಕೃತಜ್ಞತಾಸ್ತುತಿಯನ್ನು ಸಲ್ಲಿಸುವ ಬೋಧಕರು (2:13-20)

ಪೌಲನು ಥೆಸಲೋನಿಕದವರ ಸಂಗಡ ಒಂದು ವಿಶೇಷವಾದ ಬಂಧವನ್ನು ರೂಪಿಸಿಕೊಂಡಿದ್ದನು. 2:13-20ರಲ್ಲಿ, ಥೆಸಲೋನಿಕದವರನ್ನು ಕ್ರಿಸ್ತನಲ್ಲಿ ತನ್ನ ಸಹೋದರರು ಹಾಗೂ ಸಹೋದರಿಯರನ್ನಾಗಿ ಹೊಂದಿರುವದಕ್ಕೆ ತನ್ನ ಸಂತೋಷವನ್ನು ವ್ಯಕ್ತಪಡಿಸಿದನು. ಈ ಸಂಬಂಧವು ಫಿಲಿಪ್ಪಿಯಿಂದ ಓಡಿಸಲ್ಪಟ್ಟ ಬಳಿಕ ಪೌಲ, ಸೀಲ, ಮತ್ತು ತಿಮೊಥೆಯರು ಆಕಸ್ಮಿಕವಾಗಿ ಥೆಸಲೋನಿಕಕ್ಕೆ ಹೋಗಬೇಕಾಗಿ ಬಂದ ಕಾರಣದಿಂದಾಗಿ ಏರ್ಪಡಿಸಿಕೊಳ್ಳಲ್ಪಟ್ಟ ಒಂದು ಅಚಿಂತಿತವಾದ ಸಂಬಂಧವಾಗಿರಲಿಲ್ಲ. ಅದು ಅವರು ಒಟ್ಟಿಗೆ ಇರುವ ವೇಳೆ ಅರಳಿಸಲ್ಪಟ್ಟು ಅವರು ಬೇರ್ಪಟ್ಟ ಬಳಿಕ ಬಾಡಿ ಹೋದಂಥ ಒಂದು ತಾತ್ಕಾಲಿಕವಾದ ಸಂಬಂಧವಾಗಿರಲಿಲ್ಲ. ಅದೊಂದು ಜೀವಿತಕಾಲದ ಸಂಬಂಧಕ್ಕಿಂತಲೂ ಹೆಚ್ಚಿನದ್ದಾಗಿತ್ತು; ಅದು ನಿರಂತರವಾಗಿ ಆ ಬೋಧಕರ ಮನಸ್ಸುಗಳಲ್ಲಿದ್ದಂಥ ಒಂದು ನಿತ್ಯಕಾಲದ ಸ್ನೇಹವಾಗಿತ್ತು.

ನಾವು ಬೇರೆಯವರಿಗೆ ಉಪದೇಶಿಸುವಾಗ, ನಾವು ಜೊತೆಯ ಕ್ರೈಸ್ತರಿಗೆ ಆಲೋಚನೆಯನ್ನು ಹೇಳುವದಕ್ಕೆ ಹೋಗುವಾಗ, ನಾವು ಸಹೋದರ ಹಾಗೂ ಸಹೋದರಿಯರನ್ನು ದೇವರ ಚಿತ್ತ ಮಾಡುವಂತೆ ಪ್ರೋತ್ಸಾಹಿಸುವಾಗ, ನಾವು ನಿತ್ಯಕಾಲದ ಸಂಬಂಧಗಳನ್ನು ನಿರ್ಮಿಸಿಕೊಳ್ಳುವವರಾಗಿರುತ್ತೇವೆ. ಉಪದೇಶ, ಸಲಹೆ ನೀಡುವಿಕೆ,

ಮತ್ತು ಬೇರೆಯವರನ್ನು ಪ್ರೋತ್ಸಾಹಿಸುವಿಕೆಗಳು ಸಭೆಯು ಕಾರ್ಯ ಮಾಡಬೇಕೆಂದು ದೇವರು ಬಯಸುವಂಥ ದಾರಿಯ ಬೆಲೆಯುಳ್ಳ ಭಾಗಗಳಾಗಿರುತ್ತವೆ.

*ದೇವರ ವಾಕ್ಯಕ್ಕೆ ಕೆಲಸ ನಡಿಸಲು ಬಿಡಿರಿ (2:13).* ಬೋಧಕರು ದೇವರ ವಾಕ್ಯವನ್ನು ಅನುಸರಿಸುವಾಗ ಏನು ಸಂಭವಿಸುತ್ತದೆ? ಬೋಧಕರು ದೇವರ ವಾಕ್ಯವನ್ನು ಅನುಸರಿಸುವವರಾಗಿರುವಾಗ ವಿದ್ಯಾರ್ಥಿಗಳು ತಮ್ಮ ಆ ಬೋಧಕರನ್ನು ಅನುಸರಿಸುವದಾದರೆ ಏನು ಸಂಭವಿಸುತ್ತದೆ? ಅದ್ಭುತವಾದ ಸಂಗತಿಗಳು ಸಂಭವಿಸುತ್ತವೆ! ಬೋಧನೆಯು ಅವರಿಗೆ ದೇವರಿಂದ ಬಂದ ಸಂದೇಶವೆಂಬುದನ್ನು ಜನರು ಗ್ರಹಿಸಿಕೊಂಡು ತಮ್ಮನ್ನು ವಾಕ್ಯದ ಮೂಲಕ ದೇವರಿಗೆ ಸಮರ್ಪಿಸಿಕೊಳ್ಳುವಾಗ, ಆತನು ಅವರ ಜೀವಿತಗಳಲ್ಲಿ ಕಾರ್ಯ ಮಾಡುವದಕ್ಕೆ ಆರಂಭಿಸುತ್ತಾನೆ. ನಿತ್ಯನಿತ್ಯಕ್ಕೂ ಜೀವಿತಗಳು ಮಾರ್ಪಡುತ್ತವೆ!

1:2, 3ರಲ್ಲಿನ ಕೃತಜ್ಞತೆಯ ಯೋಚನೆಗಳು ಪುನಃ 2:13ರಲ್ಲಿ ಪರಿಚಯಿಸಲ್ಪಡುತ್ತವೆ. ಪೌಲನು ತಾನು ಹಾಗೂ ತನ್ನ ಸಂಗಡಿಗರು ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿದ್ದಕ್ಕೆ ಒಂದು ನಿರ್ದಿಷ್ಟವಾದ ಕಾರಣವನ್ನು ಪ್ರಸ್ತಾಪಿತ್ತಾನೆ. ಕ್ರೈಸ್ತರಾಗಿ ಮಾರ್ಪಟ್ಟಿದ್ದ ಥೆಸಲೋನಿಕದವರ ಮೇಲೆ ಪ್ರಭಾವವನ್ನು ಬೀರಿದ ಸಂಗತಿಯು ಯಾವದೆಂದರೆ ದೇವರು ಅವರಿಗೋಸ್ಕರ ಒಂದು ಸಂದೇಶವನ್ನು ಹೊಂದಿದ್ದಾನಲ್ಲಾ ಎಂಬದೆ. ಇದರ್ಥವೇನೆಂದರೆ ದೇವರು ಅವರ ಮೇಲೆ ನಿಜವಾಗಿಯೂ ಕಳಕಳಿಯನ್ನು ಹೊಂದಿದ್ದನು ಮತ್ತು ಅದನ್ನು ಯೇಸುವಿನ ರಕ್ಷಣೆಯ ಕಾರ್ಯದ ಮೂಲಕವಾಗಿ ತೋರ್ಪಡಿಸಿದ್ದನು ಎಂಬದೆ. ದೇವರು ಅವರಿಗೆ ಸಹಾಯ ಮಾಡುವದಕ್ಕೆ ಬಯಸಿದ್ದನು ಮತ್ತು ಅವರ ನಿತ್ಯವಾದ ಗಮ್ಯತೆಗಾಗಿ ಸಿದ್ಧತೆಯನ್ನು ಮಾಡುತ್ತಿದ್ದಾನೆಂಬ ಮನವರಿಕೆಯು ಅವರಿಗೆ ಉಂಟಾಗಿತ್ತು. ತತ್ಫಲಿತವಾಗಿ, ದೇವರು ಬಯಸುವದನ್ನು ಮಾಡುವದೇ ಅವರ ಮೊದಲ ಆದ್ಯತೆಯಾಯಿತು. ಅವರು ಸುವಾರ್ತೆಯನ್ನು ಸ್ವತಃ ದೇವರಿಂದಲೇ ತಮಗೆ ಬಂದ ಸಂದೇಶವೆಂಬಂತೆ ಎಣಿಸಿದರು!

ಬೇರೆಯವರು ತಮ್ಮಲ್ಲಿ ವಾಕ್ಯವು ಕೆಲಸ ನಡಿಸಬೇಕೆಂದು ಬಯಸುವಂತಾಗುವ ರೀತಿಯಲ್ಲಿ ನಾವು ದೇವರ ವಾಕ್ಯವನ್ನು ಬೋಧಿಸುವ ಮೂಲಕ, ಅದರ ಬಗ್ಗೆ ಅತ್ಯಾಸಕ್ತಿಯುಳ್ಳವರಾಗಿರುವ ಮೂಲಕ ಅದು ನಮ್ಮೊಳಗೆ ಕೆಲಸ ನಡಿಸುವಂತೆ ಅವಕಾಶ ಕೊಡಬೇಕು. ದೇವರ ವಾಕ್ಯವು ಕೆಲಸ ಮಾಡುವ ವೇಳೆ, ಅದು ಪ್ರತಿಯೊಬ್ಬೊಬ್ಬ ಕ್ರೈಸ್ತನನ್ನು ಮತ್ತು ಇಡೀ ಸಭೆಗಳನ್ನು ಬದಲಾಯಿಸುವದು.

*ನಂಬಿಗಸ್ತರನ್ನು ಅನುಸರಿಸಿರಿ (2:14, 15a).* ದೇವರು ನಮ್ಮ ಜೀವಿತಗಳಿಗಾಗಿ ಯೋಜನೆಯೊಂದನ್ನು ಹೊಂದಿದ್ದಾನೆಂಬುದನ್ನು ಗ್ರಹಿಸಿಕೊಂಡ ಸಂಭ್ರಮದಲ್ಲಿ ಸುವಾರ್ತೆಯ ಸಂದೇಶವನ್ನು ಅಂಗೀಕರಿಸಿಕೊಳ್ಳುವದು ಒಂದು ಸಂಗತಿಯಾದರೆ, ಕಠಿಣ ಪರಿಸ್ಥಿತಿಗಳಲ್ಲಿ ದೇವರ ಸಂದೇಶಕ್ಕೆ ನಂಬಿಗಸ್ತರಾಗಿ ಉಳಿಯುವದು ಸಂಪೂರ್ಣ ವ್ಯತ್ಯಾಸವಾದ ಸಂಗತಿಯಾಗಿರುತ್ತದೆ. ಹೊಸದಾಗಿ ಕ್ರೈಸ್ತರಾಗಿರುವವರು ಮತ್ತು ಭವಿಷ್ಯದಲ್ಲಿ ಕ್ರೈಸ್ತರಾಗಲಿರುವವರು “ನನ್ನ ಕುಟುಂಬವು ಇದಕ್ಕೆ ವಿರೋಧ ವ್ಯಕ್ತಪಡಿಸುವದಾದರೆ ನಾನೇನು ಮಾಡುವೆನು?”; “ನನ್ನ ಸಮರ್ಪಣೆಯ ಬಗ್ಗೆ ಸಹೋದ್ಯೋಗಿಗಳು ಅಪಹಾಸ್ಯ ಮಾಡುವದಾದರೆ ಅದನ್ನು ನಾನು ಹೇಗೆ ತೆಗೆದುಕೊಳ್ಳುವೆನು?”; “ಸೈತಾನನು ತನಗೆ ಸಾಧ್ಯವಾದ ರೀತಿಯಲ್ಲಿ ನಾಶ ಮಾಡುವದಕ್ಕೆ ನೋಡುವಂತಹ ಒಂದು

ಜೀವಿತವನ್ನು ಆರಂಭಿಸುವದಕ್ಕೆ ನಾನು ನಿಜವಾಗಿಯೂ ಬಯಸುತ್ತೇನೋ?" ಎಂಬಂತಹ ಪ್ರಶ್ನೆಗಳಿಗೆ ಉತ್ತರಿಸುವದು ಉತ್ತಮವಾಗಿರುತ್ತದೆ.

ಹಿಂಸೆಗೆ ಥೆಸಲೋನಿಕದ ಕ್ರೈಸ್ತರು ಹೇಗೆ ಪ್ರತಿಕ್ರಿಯೆಯನ್ನು ತೋರಿದರು? ಅವರು ಸಹಿಸಿಕೊಂಡರು; ಅವರು ನಂಬಿಗಸ್ತರಾಗಿ ಉಳಿದರು (2:14, 15a). ಕೆಲವು ದೇಶಗಳಲ್ಲಿ ಸಾರ್ವಜನಿಕವಾಗಿ ಆರಾಧಿಸುವದು ನಿಷೇದಿಸಲ್ಪಟ್ಟಿರುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ ಕ್ರೈಸ್ತ ಜೀವಿತವನ್ನು ನಡಿಸುವದಕ್ಕಾಗುವದಿಲ್ಲ ಎಂಬುದಾಗಿ ಬಹುಶಃ ನಾವು ಯೋಚಿಸಬಹುದು. ಹೇಗೂ, ನಾವು ನೆನಪಿನಲ್ಲಿಟ್ಟುಕೊಳ್ಳಬೇಕು, ಏನೆಂದರೆ ನಾವು ಯಾವದೇ ಪರಿಸ್ಥಿತಿಯಲ್ಲಿಯೇ ಆಗಲಿ-ಹಿಂಸೆಯಲ್ಲಿ ಸಹ-ದೇವರ ಸೇವೆಯನ್ನು ಮಾಡಬಲ್ಲೆವು ಮತ್ತು ಆತನನ್ನು ಮೆಚ್ಚಿಸಬಲ್ಲೆವು ಎಂಬದೆ.

ಕೆಲವು ಜನರು ತಮ್ಮ ಕ್ರಿಸ್ತನಂಬಿಕೆಯ ನಿಮಿತ್ತವಾಗಿ ಹಿಂಸೆಗೊಳಗಾಗಿರುತ್ತಾರೆಂಬುದನ್ನು ಮತ್ತು ಯಾವದೇ ಪರಿಸ್ಥಿತಿಯಲ್ಲಿಯೇ ಆಗಲಿ ನಾವು ನಂಬಿಗಸ್ತರಾಗಿರಬೇಕೆಂದು ದೇವರು ಬಯಸುತ್ತಾನೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವವರಾಗಿ, ನಾವು ನಮಗಿರುವ ಸ್ವಾತಂತ್ರ್ಯಕ್ಕಾಗಿ ದೇವರಿಗೆ ಸ್ತೋತ್ರ ಮಾಡಬೇಕು! ಕಠಿಣ ಪರಿಸ್ಥಿತಿಗಳ ನಿಮಿತ್ತವಾಗಿ ದೇವರ ಸೇವೆಯನ್ನು ಬಿಟ್ಟುಬಿಡಬೇಕೆಂದೆನಿಸುವ ಶೋಧನೆಯನ್ನು ನಾವು ನಿರಾಕರಿಸಬೇಕು. ಮಿತ್ರರಿಂದ, ಬಂಧುಗಳಿಂದ, ಅಥವಾ ಕ್ರೈಸ್ತ ಸಹೋದರರಿಂದ ಸಹ ಮಾಡಲ್ಪಡುವ ಅಸಡ್ಡೆ ಅಥವಾ ವಿರೋಧವು ನಂಬಿಗಸ್ತರಾಗಿರುವದರಿಂದ ನಮ್ಮನ್ನು ತಡೆಯುವಂಥದ್ದಾಗಬಾರದು. ನಿರಂತರವಾಗಿ ದೇವರ ಸೇವೆಯನ್ನು ಮಾಡುವ ಮೂಲಕ, ನಮ್ಮ ನಂಬಿಕೆಯ ಕಾರಣದಿಂದ ನಾವು ನಿರ್ಲಕ್ಷ್ಯಕ್ಕೆ, ಅಪಹಾಸ್ಯಕ್ಕೆ, ಅಥವಾ ನಿಂದನೆಗೆ ಒಳಗಾದಾಗ್ಯೂ ನಂಬಿಗಸ್ತರ ಹೆಜ್ಜೆಗಳನ್ನು ಅನುಸರಿಸುತ್ತಾ ಇರೋಣ.

*ವಿರೋಧವನ್ನು ನಿರೀಕ್ಷಿಸಿರಿ (2:15b, 16).* ದೇವರ ನಂಬಿಗಸ್ತರನ್ನು ಹಿಂಸಿಸುವವರು ದೇವರನ್ನು ವಿರೋಧಿಸುವವರಾಗಿದ್ದಾರೆ, ಆದರೆ ಅವರು ಎಲ್ಲಾ ಜನರ ಒಳ್ಳೇ ಹಿತಾಸಕ್ತಿಯನ್ನು ಸಹ ವಿರೋಧಿಸುವವರಾಗಿದ್ದಾರೆ. ದೇವಜನರಿಗೆ ತಡೆಯನ್ನೊಡ್ಡುವ ಮೂಲಕ, ಅವರು ನೀಡುವ ಸಂದೇಶವೇನೆಂದರೆ ಸೈತಾನನ ದಾರಿಯು ಉತ್ತಮ ಮತ್ತು ದೇವರ ದಾರಿಯು ಬಹು ಕಠಿಣವಾದದ್ದು ಎಂಬದೆ. ಆದುದರಿಂದ, ಅವರು ಕ್ರೈಸ್ತರಿಗೂ ಕ್ರೈಸ್ತೇತರರಿಗೂ ಕಳುಹಿಸುವ ಸಂದೇಶವೇನೆಂದರೆ ದೇವರು ಬಯಸುವದನ್ನು ಮಾಡುವ ಬದಲಾಗಿ ಸೈತಾನನು ಬಯಸುವದನ್ನೇ ಮಾಡಬೇಕೆಂಬ ಒಂದು ಪ್ರೋತ್ಸಾಹಕ್ಕೆ ಸಂಬಂಧಿಸಿದ್ದಾಗಿದೆ.

ನಾವು ವಿರೋಧವನ್ನು ನಿರೀಕ್ಷಿಸಬೇಕು. ದೇವರು ಬಯಸಿದ್ದನ್ನು ಮಾಡುವಾಗ ಆತನು ಸಂತೋಷಗೊಳ್ಳುವ ರೀತಿಯಲ್ಲಿಯೇ, ಸೈತಾನನು ಬೇಸರಗೊಳ್ಳುತ್ತಾನೆ. ನೀವು ಯೋಚಿಸುವ ಪ್ರತಿಯೊಂದು ಒಳ್ಳೇ ಯೋಚನೆಯನ್ನು, ನೀವು ಹೇಳುವ ಪ್ರತಿಯೊಂದು ಒಳ್ಳೇ ಮಾತನ್ನು, ನೀವು ಮಾಡುವ ಪ್ರತಿಯೊಂದು ಒಳ್ಳೇ ಕಾರ್ಯವನ್ನು ಆತನು ವಿರೋಧಿಸುವದಕ್ಕೆ ಪ್ರಯತ್ನಿಸುತ್ತಾನೆ. ಆ ಒಳ್ಳೇ ಚಟುವಟಿಕೆಗಳನ್ನು ವಿರೋಧಿಸುವಂತೆ ಆತನು ತನಗೆ ಸಾಧ್ಯವಾಗುವ ಯಾವದನ್ನಾಗಲಿ ಸಹ ಬಳಸುವನು. ಸೈತಾನನು ನಿಮಗೆ

ವಿರೋಧವನ್ನೊಡ್ಡುವಾಗ ಆಶ್ಚರ್ಯಗೊಳ್ಳದಿರಿ. ನೀವು ಅದನ್ನು ಎದುರು ನೋಡಬಹುದು!

ಪಾಪವು ಕೆಲವು ರೀತಿಗಳಲ್ಲಿ ಆಕರ್ಷಕವಾಗಿರುತ್ತಾದಾದರೂ, ಅದರ ಫಲಿತವು ಯಾವಾಗಲೂ ಮರಣ, ಅಥವಾ ದೇವರಿಂದ ಬೇರ್ಪಡಿಸುವಿಕೆಯಾಗಿರುವದು, ಯಾಕೆಂದರೆ "ಪಾಪವು ಕೊಡುವ ಸಂಬಳ ಮರಣ" (ರೋಮಾ 6:23). ಕೆಲವು ಸಾರಿ ನಾವು ಪಾಪದ ಮರಣಾಂತಿಕವಾದ ಪರಿಣಾಮಗಳನ್ನು ಮರೆತು ಬಿಡುತ್ತೇವೆ. ತಾವು ಪಾಪ ಮಾಡಿ ತಪ್ಪಿಸಿಕೊಳ್ಳಬಹುದೆಂದು, ಅದರಿಂದ ಯಾವದೇ ಕೆಟ್ಟ ಫಲಿತಗಳುಂಟಾಗುವದಿಲ್ಲ ಎಂದು ಅನೇಕ ಜನರು ಯೋಚಿಸುತ್ತಾರೆ. ನಮ್ಮ ಪಾಪವು ಮರಣಕ್ಕೆ-ದೇವರ ಕುಮಾರನ ಮರಣಕ್ಕೆ-ಕಾರಣವಾಗಿರುತ್ತದೆ. ಅದು ಗಂಭೀರವಾದದ್ದು. ದೇವರ ಮಾರ್ಗವು ಈ ಜೀವಿತದಲ್ಲಿ ಪ್ರಯೋಜನಗಳನ್ನು ನೀಡುತ್ತದೆ ಮತ್ತು ದೇವರೊಂದಿಗೆ ನಿತ್ಯಜೀವದಲ್ಲಿ ಫಲಿತಗೊಳ್ಳುತ್ತದೆ. ನಾವು ಕ್ರೈಸ್ತ ಜೀವಿತವನ್ನು ನಡಿಸುವಾಗ ವಿರೋಧವನ್ನು ನಿರೀಕ್ಷಿಸಬಹುದು, ಆದರೆ ನಾವು ದೇವರ ಹಾಗೂ ಆತನ ಜನರೊಂದಿಗೆ ನಿತ್ಯವಾದ ಸಂತೋಷವನ್ನು ಸಹ ನಿರೀಕ್ಷಿಸಬಹುದಾಗಿದೆ.

*ಸಹೋದರರನ್ನು ಪ್ರೀತಿಸಿರಿ (2:17, 18).* ಕೆಲವು ಜನರು ಥೆಸಲೋನಿಕದ ಜನರ ಅಕ್ಕಪಕ್ಕ ಇರುವದನ್ನು ದ್ವೇಷಿಸಿದರಾದರೂ, ಇನ್ನು ಕೆಲವರು ಅವರೊಂದಿಗಿರುವದಕ್ಕೆ ಆನಂದ ಪಡುತ್ತಿದ್ದರು. ಅವರ ಕ್ರಿಯೆಗಳನ್ನು ಕೆಲವರು ವಿರೋಧವನ್ನು ಮಾಡುತ್ತಿದ್ದರು, ಅದೇ ವೇಳೆಯಲ್ಲಿ ಇನ್ನು ಕೆಲವರು ಅವರನ್ನು ಮೆಚ್ಚಿಕೊಳ್ಳುತ್ತಿದ್ದರು. ಈ ಸಹೋದರರಿಂದ ಬೇರ್ಪಟ್ಟವರಾಗಿ, ಪೌಲ, ಸೀಲ, ಮತ್ತು ತಿಮೊಥೆಯರು ಪುನಃ ಅವರನ್ನು ನೋಡಬೇಕೆಂದು ಬಯಸಿದ್ದರು; ಮತ್ತು ಅವರು ಆ ಬಯಕೆಯನ್ನು ಅವರಿಗೆ ತಿಳಿಯಪಡಿಸಿದರು.

ನಮ್ಮ ಸಂಭಾಷಣೆಯಲ್ಲಿ ಮತ್ತು ಬೇರೆ ಸ್ಥಳಗಳಲ್ಲಿರುವ ನಮ್ಮ ಸಹೋದರರಿಗೆ ಬರೆಯುವ ವೇಳೆ ಸೇರ್ಪಡೆಗೊಳಿಸಿಕೊಳ್ಳಬೇಕಾದ ಇನ್ನೊಂದು ಬೆಲೆಯುಳ್ಳ ಸಂದೇಶವು ಇಲ್ಲಿರುತ್ತದೆ: ನಮಗೆ ಅವರ ನೆನಪು ಕಾಡುತ್ತಿದೆ ಮತ್ತು ನಾವು ಅವರೊಂದಿಗಿರುವದಕ್ಕೆ ಬಯಸುತ್ತೇವೆ. ಪ್ರೀತಿ, ಭಕ್ತಿ, ಮತ್ತು ಮಮತೆಗಳೆಲ್ಲಾ ಕ್ರೈಸ್ತ ಅನ್ಯೋನ್ಯತೆಯಲ್ಲಿನ ಭಾಗಗಳಾಗಿರುತ್ತವೆ. ಈ ಪ್ರೀತಿಯನ್ನು ತೋರ್ಪಡಿಸುವಿಕೆಯು ಆ ಮನೋಭಾವಗಳನ್ನು ಮತ್ತು ಭಾವಗಳನ್ನು ವ್ಯಕ್ತಪಡಿಸುವ ಸ್ವಾಭಾವಿಕ ವಿಧಗಳಾಗಿರುತ್ತವೆ. ನಾವು ನಮ್ಮ ಸಹೋದರರನ್ನು ಮತ್ತು ಸಹೋದರಿಯರನ್ನು ಪ್ರೀತಿಸಬೇಕು ಹಾಗೂ ಅದನ್ನು ಅವರಿಗೆ ತಿಳಿಯಪಡಿಸಬೇಕು!

ಪ್ರೀತಿಯನ್ನು ನಾವು ಬಯಸುವ ರೀತಿಯಲ್ಲಿ ತೋರಿಸದ ಹಾಗೆ ವಿರೋಧವು ನಮಗೆ ಅಡ್ಡಿಯಾಗಬಲ್ಲದು. ನಾವು ಮಾಡುವದಕ್ಕೆ ಸಾಧ್ಯವಾದದ್ದನ್ನು ಮಾಡದಂತೆ ತಡೆಯುವ ಹಾಗೆ ತೊಂದರೆಗಳಿಗೆ ಅವಕಾಶವನ್ನು ಕೊಡಬಾರದು. ಕ್ರೈಸ್ತನಿಗಾದರೋ, ಎಲ್ಲಿ ಜೀವವಿರುತ್ತದೋ ಅಲ್ಲಿ ಪ್ರೀತಿಯಿರುವದಾಗಿದೆ!

*ಪುನರ್ಮಿಲನವನ್ನು ನಿರೀಕ್ಷಿಸಿರಿ (2:19, 20).* ಕ್ರೈಸ್ತನಿಗಾದರೋ, ಹಿನ್ನಡೆಯು ತಾತ್ಕಾಲಿಕವಾದದ್ದು, ಯಾಕೆಂದರೆ ಎಲ್ಲಾ ಸಮಸ್ಯೆಗಳು ಕ್ರಮೇಣದಲ್ಲಿ ಪರಾಜಯಗೊಳಿಸಲ್ಪಡುವವು. ಯೇಸು ಸರ್ವರ ಕರ್ತನಾಗಿದ್ದಾನೆ ಮತ್ತು ಎಲ್ಲಾ ವೈರಿಗಳನ್ನು-ಮರಣವನ್ನು ಸಹ-ನಿರ್ಮೂಲನ ಮಾಡುವನು (1 ಕೊರಿಂಥ 15:23-26). ದೇವರ ಇತರ ನಂಬಿಗಸ್ತ

ಮಕ್ಕಳಿಂದ ಬೇರ್ಪಡುವಿಕೆಯು ಕೇವಲ ತಾತ್ಕಾಲಿಕವಾಗಿರಬಲ್ಲದು, ಯಾಕೆಂದರೆ ಜೊತೆಯ ಕ್ರೈಸ್ತರು ಹಾಗೂ ಯೇಸುವಿನೊಂದಿಗಿನ ಮಹಾ ಪುನರ್ಮಿಲನವು ನಮಗೋಸ್ಕರ ಕಾದಿರುತ್ತದೆ.

2ನೇ ಅಧ್ಯಾಯದ ಅಂತ್ಯಭಾಗವು ಯೇಸುವಿನ ಪುನರಾಗಮನದ ಮೇಲೆ ಗಮನವನ್ನು ಹರಿಸುತ್ತದೆ. ಇದು ಸೋಮಾರಿಗಳಾಗಿರುವ ಅಥವಾ ದಾರಿ ತಪ್ಪುತ್ತಿರುವ ಕ್ರೈಸ್ತರನ್ನು ಎಚ್ಚರಿಸುವದಕ್ಕೆ ಒಂದು ದೊಡ್ಡ ಕೋಲನ್ನು ಬೀಸುವಂತೆ ಆಗಿರಲಿಲ್ಲ. ಈ ಕ್ರೈಸ್ತರ ಮೇಲೆ ಅವರ ಬೋಧಕರಿಗಿರುವ ಬಲವಾದ ಭಾವಗಳನ್ನು ಅವರಿಗೆ ತಿಳಿಯುವಂತೆ ಮಾಡುವದಕ್ಕಾಗಿ ಒಂದು ಪ್ರೋತ್ಸಾಹದ ರೂಪದಲ್ಲಿ ಯೇಸುವಿನ ಬರೋಣದ ಕುರಿತು ಪ್ರಸ್ತಾಪಿಸಲಾಗಿರುತ್ತದೆ. ಯೇಸುವಿನ ಪುನರಾಗಮನವು ಅವರಿಗೆ ಪುನರ್ಮಿಲನಗೊಳ್ಳಲು ಒಂದು ಸಂದರ್ಭವಾಗುವದು.

ಈ ಬೋಧಕರು ಏನನ್ನು ಹೇಳುತ್ತಿದ್ದರು? “ಯೇಸು ಪುನಃ ಹಿಂದಿರುಗಿ ಬರುತ್ತಿದ್ದಾನೆ! ನಾವು ಅದರ ಬಗ್ಗೆ ಸಂಭ್ರಮದಿಂದ ಇದ್ದೇವೆ! ಏಕೆ? ನಾವು ನಿಮ್ಮನ್ನು ನೋಡುವೆವು ಮತ್ತು ನಿಮ್ಮೊಂದಿಗೆ ಶಾಶ್ವತವಾಗಿ ಇರುವೆವು! ನಿಮ್ಮ ಕುರಿತು ನಾವು ಹೊಂದಿರುವ ಭಾವಗಳನ್ನು ನೀವು ತಿಳಿಯಬೇಕೆಂದು ಬಯಸುತ್ತೇವೆ, ಆದ್ದರಿಂದ ಅದನ್ನು ನಿಮಗೆ ತಿಳಿಸುವದಕ್ಕಾಗಿ ಕಾಯುತ್ತಿದ್ದೇವೆ!”

ನಾವು ನಮ್ಮ ಜೊತೆಯ ಕ್ರೈಸ್ತರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿರುವ ನಮಗೆ ಇದೊಂದು ಎಂಥ ದೊಡ್ಡ ಉದಾಹರಣೆಯಾಗಿರುತ್ತದೆ. ನಾವು ನಮ್ಮ ವಿದ್ಯಾರ್ಥಿಗಳಿಗೆ “ನಾನು ನಿಮ್ಮೊಂದಿಗೆ ಪರಲೋಕದಲ್ಲಿರುವ ದಿನಕ್ಕಾಗಿ ಎದುರು ನೋಡುತ್ತಿದ್ದೇನೆ!” ಎಂದು ಹೇಳುವದಾದರೆ ಅದು ಅವರಿಗೆ ಎಂಥ ದೊಡ್ಡ ಪ್ರೋತ್ಸಾಹವಾಗುವದು. ಒಬ್ಬ ಸಹೋದರ ಅಥವಾ ಸಹೋದರಿಯು ನಮಗೆ “ಯೇಸು ಹಿಂದಿರುಗಿ ಬರುವದನ್ನು ನಾನು ನೋಡಲು ಬಯಸುತ್ತೇನೆ, ಹೀಗೆ ನಿನ್ನೊಂದಿಗೆ ಶಾಶ್ವತವಾಗಿ ಇರುವಂತಾಗುವದು!” ಎಂದು ಹೇಳಿದರೆ ಎಂಥ ದೊಡ್ಡ ಪ್ರೋತ್ಸಾಹವಾಗುವದು.

*ಮುಕ್ತಾಯ*. ಒಂದು ಸಭೆಯ ಬೋಧಕರು ತಮ್ಮ ವಿದ್ಯಾರ್ಥಿಗಳ ಸಂಗಡದ ಸಂಬಂಧಗಳ ಬಗ್ಗೆ ಕಳಕಳಿಯನ್ನು ಹೊಂದಿರುವದಾದರೆ ಆ ಸಭೆಯು ಹೆಚ್ಚು ಬಲಿಷ್ಠವಾಗಿರುವದು. ತಾವು ಅವರ ಒಳ್ಳೇ ಮಾದರಿಯನ್ನು ಅನುಸರಿಸುವದಕ್ಕೆ ಬಯಸುತ್ತೇವೆಂದು ವಿದ್ಯಾರ್ಥಿಗಳು ತಮ್ಮ ಬೋಧಕರಿಗೆ ಹೇಳುವದಾದರೆ ಬೋಧಕರು ಪ್ರೋತ್ಸಾಹಿಸಲ್ಪಡುವರು. ಬೇರೆಯವರಲ್ಲಿ ಕಠಿಣವಾದ ಪರಿಸ್ಥಿತಿಗಳ ಹೊರತಾಗಿಯೂ ನಂಬಿಗಸ್ತಿಕೆಯನ್ನು ಕಾಣುವಾಗ ಜೊತೆಯ ಕ್ರೈಸ್ತರು ಪ್ರೋತ್ಸಾಹವನ್ನು ಹೊಂದುವರು.

ಈ ವಚನಗಳು ಕ್ರೈಸ್ತರ ಮಧ್ಯದಲ್ಲಿ ಒಂದು ಬಲವಾದ ಸಂಬಂಧದ ಬೆಳವಣಿಗೆ ಮತ್ತು ಕಾಪಾಡಿಕೊಳ್ಳುವಿಕೆಯ ಕುರಿತಾಗಿ ಒಂದು ತಿಳುವಳಿಕೆಯನ್ನು ನೀಡುತ್ತವೆ. ನಾವು ದೇವರ ಕುಟುಂಬವನ್ನು ನಮ್ಮ ಕುಟುಂಬವಾಗಿ ಮಾಡಿಕೊಳ್ಳುವಾಗ, ಈ ಅನುಭವದಿಂದ ಸಿಕ್ಕುವ ಸಂತೋಷವು ನಮ್ಮದಾಗುವದು. TP

## ದೇವರಿಗೋಸ್ಕರ ಬಾಧೆಯನ್ನು ಸಹಿಸಿಕೊಳ್ಳುವದು (2:14-16)

ಥೆಸಲೋನಿಕದವರು ದೇವರಿಗೆ ತಾವು ಹೊಂದಿರುವ ಸಮರ್ಪಣೆಯ ನಿಮಿತ್ತವಾಗಿ ಬಾಧೆಯನ್ನನುಭವಿಸಿದರು, ಆದರೆ ಒಳ್ಳೇ ಹೃದಯದವರಾಗಿದ್ದರು, ಸೋತು ಹೋಗದೆ ಸೈರಿಸಿಕೊಂಡಿದ್ದರು. ಒಬ್ಬನು ಹಗೆತನದಿಂದ ಕೂಡಿದ ಪರಿಸರದಲ್ಲಿರುವದಾದರೆ ಕ್ರಿಸ್ತನ ಸೇವೆಯನ್ನು ಮಾಡುವದು ಎಷ್ಟು ಕಷ್ಟಕರ ಎಂಬುದನ್ನು 14-16 ವಚನಗಳು ಬಣ್ಣಿಸುತ್ತವೆ.

ಥೆಸಲೋನಿಕದವರು "ದೇವರ ಸಭೆಗಳನ್ನು ಅನುಸರಿಸುವವರಾದರು. . . ಕಷ್ಟಗಳನ್ನು . . . ಸ್ವದೇಶದವರಿಂದ ಅನುಭವಿಸಿದರು" (ವ. 14). ಫಿಲಿಷ್ಟಿಯದ ಕ್ರೈಸ್ತರು ಯೆಹೂದ್ಯೇತರರ ಕೈಗಳಲ್ಲಿ ಬಾಧೆಯನ್ನನುಭವಿಸಿದರು (ಅಪೊಸ್ತಲರ ಕೃತ್ಯಗಳು 5:27-42; 8). ಈ ಥೆಸಲೋನಿಕದವರು ತಮ್ಮ "ಸ್ವದೇಶದವರಿಂದ," ಅನ್ಯಜನರಿಂದ ಬಾಧೆಯನ್ನು ಅನುಭವಿಸಿದರು, ಆದರೆ ಅದಕ್ಕೆ ಯೆಹೂದ್ಯರಿಂದ ಪ್ರಚೋದನೆಯು ಸಿಕ್ಕಿತ್ತು (ಅಪೊಸ್ತಲರ ಕೃತ್ಯಗಳು 17:1-10).

ಕ್ರೈಸ್ತರನ್ನು ಹಿಂಸಿಸುತ್ತಿದ್ದ ಕ್ರೈಸ್ತೇತರ-ಯೆಹೂದ್ಯರನ್ನು ಪೌಲನು ಕಠೋರವಾಗಿ ಖಂಡಿಸುತ್ತಾನೆ (ವಚನಗಳು 15, 16). ಆತನು ತನ್ನ ಸ್ವಜನಾಂಗದವರನ್ನು ಪ್ರೀತಿಸುತ್ತಿದ್ದನಾದರೂ (ರೋಮಾ 9:1-4), ಅವರು ಸಭೆಯನ್ನು ಹಿಂಸಿಸುವದನ್ನು ಪೌಲನು ಖಂಡಿಸುತ್ತಾನೆ. ಪೀಲಾತನು ಯೇಸುವಿನಲ್ಲಿ ಅಪರಾಧಿಯನ್ನಾಗಿ ಮಾಡುವ ಯಾವ ತಪ್ಪನ್ನು ಕಾಣಲಿಲ್ಲ ಎಂಬ ವಾಸ್ತವಾಂಶದ ಹೊರತಾಗಿಯೂ, ರೋಮನ್ನರು ಆತನನ್ನು ಶಿಲುಬೆಗೆ ಹಾಕಬೇಕೆಂದು ಪಟ್ಟು ಹಿಡಿಯುವ ಮೂಲಕ ಅವರು "ಕರ್ತನಾದ ಯೇಸುವನ್ನು . . . ಕೊಂದರು" (ಮತ್ತಾಯ 27:15-26; ಅಪೊಸ್ತಲರ ಕೃತ್ಯಗಳು 2:22-24). ಅಲ್ಲದೆ ಅವರು ಹಳೆಯ ಒಡಂಬಡಿಕೆಯ "ಪ್ರವಾದಿಗಳನ್ನೂ ಕೊಂದರು" ಎಂಬ ದಾಖಲೆ ಹೊಂದಿದ್ದರು (ನೋಡಿರಿ ಮತ್ತಾಯ 23:29-32; ಲೂಕ 11:47-51; ಅಪೊಸ್ತಲರ ಕೃತ್ಯಗಳು 7:51, 52). ಪೌಲನು ಮುಂಚೆ ಥೆಸಲೋನಿಕದ ಸಭೆಯನ್ನು ಸ್ಥಾಪಿಸುವದಕ್ಕಾಗಿ ಬಂದಿದ್ದ ವೇಳೆಯಲ್ಲಿ "ಅವರು [ಆತನನ್ನು] ಅಟ್ಟಿಬಿಟ್ಟರು" ಎಂದು ಆತನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 17:1-9). "ಅನ್ಯಜನರಿಗೆ ರಕ್ಷಣೆಯಾಗುವಂತೆ ಸುವಾರ್ತೆಯನ್ನು ಹೇಳುವ" ಬೇರೆಯವರನ್ನು ಅಡ್ಡಿಮಾಡುವ ಮೂಲಕ ಅವರು "ಎಲ್ಲಾ ಮನುಷ್ಯರಿಗೂ ವಿರೋಧಿಗಳಾಗಿದ್ದಾರೆ" (ನೋಡಿರಿ ಅಪೊಸ್ತಲರ ಕೃತ್ಯಗಳು 13:42-45; 22:21, 22).

ಅವರ ನಡವಳಿಕೆಯ ಕಾರಣದಿಂದ, ಅವರು "ತಮ್ಮ ಪಾಪಕೃತ್ಯಗಳನ್ನು ಪರಿಪೂರ್ಣಮಾಡುತ್ತಾರೆ," ಅಥವಾ NIVಯು ಹೇಳುವ ಹಾಗೆ, "ಮಿತಿಮೀರುವಷ್ಟರ ಮಟ್ಟಿಗೆ ತಮ್ಮ ಪಾಪಗಳನ್ನು ಕೂಡಿಸಿಟ್ಟುಕೊಳ್ಳುತ್ತಾರೆ." ಅವರು ದೇವರಿಗೆ "ಮೆಚ್ಚಿಕೆಯಾದವರಾಗಿರಲಿಲ್ಲ," ಮತ್ತು "ಕೋಪವು ಅವರ ಮೇಲೆ ಸಂಪೂರ್ಣವಾಗುತ್ತಾ ಬಂತು" (ವ. 16). ದೇವರು ಅವರ ಬಂಡಾಯದ ವಿರುದ್ಧವಾಗಿ ಬಲವಾದ ಭಾವಗಳನ್ನು ಹೊಂದಿದ್ದನು, ಆದರೆ 16ನೇ ವಚನದಲ್ಲಿನ "ಕೋಪವು" ಆ ಭಾವನೆಗಳ ನಿಮಿತ್ತವಾಗಿ ಬರುವ ದಂಡನೆಯನ್ನು ಸೂಚಿಸುತ್ತದೆ (ನೋಡಿರಿ ಪ್ರಕಟನೆ 20:10). ದೇವರ ನ್ಯಾಯತೀರ್ಪು ಈಗಾಗಲೇ ಜರುಗಿಸಲ್ಪಟ್ಟಿರುತ್ತದೋ ಎಂಬಷ್ಟು ಖಚಿತವಾಗಿತ್ತಾದ್ದರಿಂದ ಪೌಲನು ಇಲ್ಲಿ "ಬಂತು" ಎಂಬದಾಗಿ ವರ್ತಮಾನಕಾಳ ರೂಪವನ್ನು ಬಳಸುತ್ತಾನೆ. ಅನಂತರದಲ್ಲಿ

ಇತಿಹಾಸವು ಪ್ರಕಟಗೊಳಿಸಿದ್ದೇನೆಂದರೆ ಕ್ರಿ.ಶ. 70ರಲ್ಲಿ, ಯೆರೂಸಲೇಮ್ ಪಟ್ಟಣವು ನಾಶಗೊಳ್ಳುವದಾಗಿತ್ತು ಎಂಬದೆ. ಈ ಕಾಲದಲ್ಲಿ ದೇವರ ನ್ಯಾಯತೀರ್ಪು ಅವರ ಮೇಲೆ ಭಾಗಶಃ ಬಂದಿತ್ತು. ಬಂಡಾಯಗಾರರಿಗೆ ಇನ್ನಷ್ಟು ದೊಡ್ಡದಾದ ದಂಡನೆಯು ಅಂತಿಮ ನ್ಯಾಯತೀರ್ಪಿನ ಕಾಲದಲ್ಲಿ ಕಾದಿರುತ್ತದೆ!

ಇಂದು ನಾವು ಕ್ರಿಸ್ತನ ನಿಮಿತ್ತವಾಗಿ ಬಾಧೆಗಳನ್ನು ಅನುಭವಿಸುತ್ತೇವೋ? ಕೆಲವು ದೇಶಗಳಲ್ಲಿ ಕ್ರೈಸ್ತರು ಅವರ ಕ್ರಿಸ್ತ ನಂಬಿಕೆಯ ಕಾರಣದಿಂದಾಗಿ ಶಾರೀರಿಕ ಬಾಧೆಯನ್ನು ಅನುಭವಿಸುತ್ತಾರೆ. ಅಮೆರಿಕದಲ್ಲಿ, ನಮಗೆ ಶಾರೀರಿಕವಾಗಿ ಹಿಂಸಾಚಾರಗಳನು ಸಂಭವಿಸದಿರಬಹುದು, ಆದರೆ ಬೇರೆ ರೀತಿಯ ಶೋಷಣೆಗಳು ಸಂಭವಿಸಬಹುದು. ಒಳ್ಳೇ ಹೃದಯದ ಜನರು, ಕ್ರಿಸ್ತನ ನಿಮಿತ್ತವಾಗಿ ಬಾಧೆಗಳನ್ನು ಅನುಭವಿಸುತ್ತಿರುವ ವೇಳೆಯಲ್ಲಿ, ದೃಢವಾಗಿ ನಿಲ್ಲತಕ್ಕದ್ದು.  EE

## ಹಿಂಸೆಯ ಕುರಿತಾದ ಸತ್ಯ (2:14-16)

ಪೌಲನು ಥೆಸಲೋನಿಕದವರನ್ನು ತೊರೆದು ಹೋದ ಬಳಿಕ ಅವರಿ ಜೀವಿತವು ಸದ್ದುಗದ್ದಲಗಳಿಂದ ತುಂಬಿದ್ದಾಯಿತು. ಅವರು ಕ್ರೈಸ್ತ ಜೀವಿತವನ್ನು ಜೀವಿಸುವದಕ್ಕೆ ಒಗ್ಗಿಕೊಳ್ಳುತ್ತಿರುವ ವೇಳೆ, ಅವರು ತಮ್ಮ ನೆಲೆಗಳನ್ನು ಕಳೆದುಕೊಳ್ಳುವಂತೆ ಮಾಡುವ ವಿರೋಧದ ಗಾಳಿಗಳನ್ನು ಎದುರಿಸಿದರು. ಒಂದು ತಕ್ಷಣದ ಹಿಂಸೆಯ ಬಿರುಗಾಳಿಯು ಎದ್ದಿತು. ಅವರು ಆತ್ಮೀಕ ತಾರುಣ್ಯತೆಯ ಕಾರಣದಿಂದಾಗಿ, ಅವರಿಗೆ ಪೌಲನ ರೀತಿಯಲ್ಲಿಯೇ ಹಿಂಸೆಯನ್ನು ನಿಭಾಯಿಸುವದಕ್ಕಾಗಲಿಲ್ಲ; ಆದರೆ ಅವರು ತಮ್ಮ ಬಾಧೆಗಳನ್ನು ಉತ್ತಮವಾಗಿ ನಿಭಾಯಿಸಿಕೊಂಡರು. ಪೌಲನು ಅವರ ಕುರಿತು ನೀಡಿದ ಹೇಳಿಕೆಗಳ ಮೂಲಕ, ಸಂಕಷ್ಟದ ಸಮಯವನ್ನು ನಿಭಾಯಿಸುವದರ ಕುರಿತಾದ ಒಂದು ಪ್ರಾಮುಖ್ಯವಾದ ಸತ್ಯವನ್ನು ತಿಳಿದುಕೊಳ್ಳಬಹುದಾಗಿದೆ.

*ನೀತಿಯು ಹೆಚ್ಚುಕಡಿಮೆ ಯಾವಾಗಲೂ ವಿರೋಧವನ್ನು ಎಬ್ಬಿಸುತ್ತದೆ.* ಪೌಲನ ರೀತಿಯಲ್ಲಿಯೇ, ಥೆಸಲೋನಿಕದವರು ಸಹ ಘೋರವಾದ ಮತ್ತು ಕ್ರೂರವಾದ ಹಿಂಸೆಯನ್ನು ಎದುರ್ಗೊಂಡರು. ಅವರು ಯಾರಿಗೂ ನೋವುಂಟು ಮಾಡುತ್ತಿರಲಿಲ್ಲ ಅಥವಾ ಒಂದು ದೊಂಬಿಯನ್ನೆಬ್ಬಿಸುತ್ತಿರಲಿಲ್ಲ; ದೇವರು ಜೀವಿಸಬೇಕೆಂದು ಹೇಳಿದಂತೆಯೇ ಅವರು ಜೀವಿಸುತ್ತಿದ್ದರಷ್ಟೆ. ಅವರ ಸಮರ್ಪಣೆಯಿಂದ ರೊಚ್ಚಿಗೆದ್ದವನಾಗಿ, ಸೈತಾನನು ಅವರನ್ನು ಬೆನ್ನತ್ತಿ ಬಂದನು.

*ಹಿಂಸಿಸಲ್ಪಟ್ಟವರು ಯಾವಾಗಲೂ ಒಂದು ದೊಡ್ಡ ಸಮೂಹದೊಂದಿಗೆ ನಿಲ್ಲುತ್ತಾರೆ.* ಅವರು ಆದಿ ಕ್ರೈಸ್ತರ ಸಂಗಡ, ಪ್ರವಾದಿಗಳು, ಮತ್ತು ಸ್ವತಃ ಯೇಸುವಿನೊಂದಿಗೆ ನಿಂತಿದ್ದರು. ಅವರು ಹಿಂಸೆಗೆ ನೀಡಿದ ಸ್ಪಂದನೆಯು ಯೂದಾಯದಲ್ಲಿನ, ಮತ್ತು ವಿಶೇಷವಾಗಿ, ಯೆರೂಸಲೇಮಿನಲ್ಲಿದ್ದ ಕ್ರೈಸ್ತರು ತಮಗಾದ ಹಿಂಸೆಗೆ ನೀಡಿದ ಸ್ಪಂದನೆಯಂತೆಯೇ ಇತ್ತು ಎಂದು ಪೌಲನು ಹೇಳಿದನು. ಉದಾಹರಣೆಗೆ, ಯೆರೂಸಲೇಮಿನಲ್ಲಿದ್ದ ಸಭೆಯು, ತನ್ನ ಸ್ವಂತ ದೇಶದವರ ಕೈಯಲ್ಲಿ ಬಹಳವಾದ ಹಿಂಸೆಯನ್ನು ಅನುಭವಿಸಿತು. ಯೆರೂಸಲೇಮ್ ಪಟ್ಟಣದಲ್ಲಿಯೇ ಯೇಸುವು ಶಿಲುಬೆಗೆ

ಹಾಕಲ್ಪಟ್ಟಿದ್ದನು ಮತ್ತು ಪ್ರವಾದಿಗಳು ಸಹ ಕೊಲ್ಲಲ್ಪಟ್ಟಿದ್ದರು.

*ಹಿಂಸೆಯಲ್ಲಿ ದೇವರು ನಮ್ಮನ್ನು ಪೋಷಣೆ ಮಾಡುವನು.* ಆತನು ಥೆಸಲೋನಿಕದವನ್ನು ಸುರಕ್ಷಿತವಾಗಿ ಕಾಪಾಡಿದನು, ಮತ್ತು ಆತನು ನಮ್ಮನ್ನು ಸಹ ಕಾಪಾಡುವನು. ಅವರ ನಂಬಿಗಸ್ತಿಕೆಯು ಪೌಲನಿಗೆ ಮತ್ತು ಅವರ ಸುತ್ತಲಿನ ಪ್ರಾಂತ್ಯದಲ್ಲಿರುವವರಿಗೆಲ್ಲಾ ತೋರಿ ಬಂದಿತ್ತು. *ಹಿಂಸಕನು ತಾನು ಮಾಡಿದ ಕಾರ್ಯಕ್ಕಾಗಿ ಲೆಕ್ಕವನ್ನು ಕೊಡುವನು.* ಕ್ರೈಸ್ತರನ್ನು ಹಿಂಸೆ ಮಾಡಿದ ವ್ಯಕ್ತಿಯ ಮೇಲೆ ದೇವರ ಕೋಪವು ಬೀಳುವದು. ಆತನು ಕ್ರೈಸ್ತರನ್ನು ಹಿಂಸಿಸುತ್ತಿದ್ದಾನೆಂಬ ವಾಸ್ತವಾಂಶವು ಅವನ ಪಾಪದ ಪಾತ್ರೆಯು ತುಂಬಿರುತ್ತದೆಂಬುದನ್ನು ಸೂಚಿಸುತ್ತದೆ.

ಮುಂದಿನ ಸಾರಿ ನೀವು ನಿಮ್ಮ ತಂದೆಗೆ ನಂಬಿಗಸ್ತರಾಗಿರುವದರ ಕಾರಣದಿಂದಾಗಿ ತೊಂದರೆ ಪಡಿಸಲ್ಪಟ್ಟರೆ ಅಥವಾ ಬಾಧೆಯನ್ನನುಭವಿಸುವಂತೆ ಮಾಡಲ್ಪಟ್ಟರೆ, ನಾವು ನೋಡಿರುವಂಥ ಸತ್ಯಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ನೀತಿಯು ಸೈತಾನನಿಂದ ವಿರೋಧವನ್ನು ಎಬ್ಬಿಸುವದು ಸರ್ವಸಾಧಾರಣವಾಗಿರುತ್ತದೆ. ಯೇಸು ಹೀಗೆ ಹೇಳಿದನು, "ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆ ಪಡಿಸಿದರಲ್ಲಾ" (ಮತ್ತಾಯ 5:12b). ಆದುದರಿಂದ, ನೀತಿಯು ಹೆಚ್ಚುಕಡಿಮೆ ಹಿಂಸೆಯನ್ನು ಎಬ್ಬಿಸುವದು ಖಾತ್ರಿಯಾಗಿರುತ್ತದೆ, ಆದರೆ ದೇವರು ನಮ್ಮನ್ನು ಪೋಷಿಸುವನು ಮತ್ತು ನಮ್ಮನ್ನು ಹಿಂಸಿಸಿದವರಿಗೆ ನ್ಯಾಯತೀರಿಸುವನು ಎಂಬ ಭರವಸೆಯೊಂದಿಗೆ ನಾವು ಇರಬಹುದು. EC

## ಸಾರುವವರ "ಸಂತೋಷ" (2:17-20)

ಥೆಸಲೋನಿಕದವರು ಪೌಲನಿಗೆ "ಸಂತೋಷವೂ" ಮತ್ತು "ಹೊಗಳಿಕೊಳ್ಳುವ ಜಯಮಾಲೆಯೂ (ಕಿರೀಟವೂ)" ಆಗಿದ್ದರು (ವ. 19). ಆತನು ಅವರನ್ನು "ಸಹೋದರರೇ" ಎಂದು ಕರೆದನು ಮತ್ತು ಅವರನ್ನು "ನೋಡುವದಕ್ಕೆ ಅತ್ಯಾಶೆಯಿಂದ" ಇದ್ದನು (ವ. 17). ಸಭೆಯವರ ಕಡೆಗೆ ಹೆತ್ತವರಿಗಿರುವಂಥ ಭಾವಗಳನ್ನು ಹೊಂದಿದ್ದ, ಪೌಲನು ಅವರ ಸಂಗಡ ಖುದ್ದಾಗಿ ಇರಬೇಕೆಂದು ಹಾರೈಸಿದನು (ವಚನಗಳು 7, 11, 17).

*ಅವರು ಆತನ "ಭರವಸ" ಆಗಿದ್ದರು.* ಮೂಲಭೂತ ಅರ್ಥದಲ್ಲಿ, ಕ್ರಿಸ್ತನು ಪೌಲನ ಭರವಸ (ನಿರೀಕ್ಷೆ) ಆಗಿದ್ದನು (1 ತಿಮೊಥೆ 1:1); ಆದರೆ ಒಂದು ರೀತಿಯಲ್ಲಿ, ನ್ಯಾಯತೀರ್ಪಿನ ಬೆಳಕಿನಲ್ಲಿ, "ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ", ಅವರು ಪೌಲನಿಗಾಗಿ ಒಂದು ಭರವಸವನ್ನು ಒದಗಿಸಿದ್ದರು (ವ. 19). ಅವರು (ವಿಮೋಚಿಸಲ್ಪಟ್ಟ ಜನರಾಗಿ) ಕರ್ತನ ಮುಂದೆ ಪೌಲನು ತನ್ನ ತಲಾಂತುಗಳನ್ನು ಕರ್ತನಿಗೋಸ್ಕರ ಬಳಸಿಕೊಂಡನು ಎಂಬದಕ್ಕೆ ಸಾಕ್ಷಿಯಾಗುವದು (ಮತ್ತಾಯ 25:14-30).

*ಅವರು ಆತನ "ಸಂತೋಷ" ಆಗಿದ್ದರು.* ಆತನು ಅವರನ್ನು ಕ್ರಿಸ್ತನಿಂದ ವಾಗ್ದಾನ ಮಾಡಲ್ಪಟ್ಟ ಸಮೃದ್ಧಿಯಾದ ಜೀವಿತಕ್ಕೆ ನಡಿಸುವದರಲ್ಲಿ ಒಂದು ಪಾತ್ರವನ್ನು ಹೊಂದಿದದ್ದಕ್ಕಾಗಿ ಪೌಲನು ದೊಡ್ಡ ಪ್ರತಿಫಲವನ್ನು ಕಂಡುಕೊಂಡಿದ್ದನು (ಯೋಹಾನ 10:10). ಯೋಹಾನನು ತನ್ನ ಮೂರನೆಯ ಪತ್ರಿಕೆಯಲ್ಲಿ ಹೀಗೆ ಬರೆದನು, "ನನ್ನ ಮಕ್ಕಳು

ಸತ್ಯವನ್ನನುಸರಿಸಿ ನಡೆಯುವವರಾಗಿದ್ದಾರೆಂದು ಕೇಳುವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ" (3 ಯೋಹಾನ 4).

*ಅವರು ಆತನಿಗೆ "ಹೊಗಳಿಕೊಳ್ಳುವ ಜಯಮಾಲೆ (ಕಿರೀಟ)" ಆಗಿದ್ದರು.* ಅವರು ಆತನ ಸೇವೆಗೆ "ಕಿರೀಟ" ಆಗಿದ್ದರು. ಪೌಲನು ಒಬ್ಬ ಒಲಂಪಿಕ್ ಕ್ರೀಡಾಪಟುವು ತನ್ನ ಜನರಿಗೋಸ್ಕರ ಸ್ಪರ್ಧೆ ಮಾಡುವವನಾಗಿ ಒಂದು ಕಿರೀಟವನ್ನು ಗೆದ್ದುಕೊಂಡ ಸಾದೃಶ್ಯವನ್ನು ಬಳಸಿದನು. ಈ ಕ್ರೀಡಾ ವೀರನು ಮನೆಗೆ ಹಿಂದಿರುಗಿ ತನ್ನ ಸ್ವದೇಶಕ್ಕೆ ಮಾನವನ್ನು ತರುವದಕ್ಕೋಸ್ಕರ ಆ ಕಿರೀಟವನ್ನು ಅರಸನಿಗೆ ಉಡುಗೋರೆಯಾಗಿ ನೀಡುವನು. ಅದು ಆತನ "ಹೊಗಳಿಕೊಳ್ಳುವ ಕಿರೀಟ" ಆಗಿದೆ.

ಥೆಸಲೋನಿಕದವರು ಪೌಲನಿಗೆ ಬಹಳಷ್ಟು ಸಂತೋಷವನ್ನು ತಂದಿದ್ದರು, ಮತ್ತು ನಮಗೆ ಸುವಾರ್ತೆಯನ್ನು ಹಂಚಿಕೊಂಡವರಿಗೆ ನಾವು ಸಹ ಸಂತೋಷವನ್ನುಂಟು ಮಾಡಬೇಕು. ನಾವು ಪಡೆದುಕೊಂಡ ಸಂದೇಶಕ್ಕೆ ನಂಬಿಗಸ್ತರಾಗಿ ಉಳಿಯುವ ಮೂಲಕ, ನಾವು "ಒಳ್ಳೇ ಹೃದಯದ" ಜನರಾಗಿರತಕ್ಕದ್ದು. EE

## ಕ್ರಿಸ್ತನಲ್ಲಿ ನಮ್ಮ ಸಂಬಂಧ (2:17-20)

ಪೌಲನು ಥೆಸಲೋನಿಕದಲ್ಲಿನ ತನ್ನ ಸಹೋದರರರನ್ನು ಪ್ರೀತಿಸಿದನು. ಕೆಲವು ತಿಂಗಳುಗಳ ಹಿಂದೆ ಈ ಸಭೆಯನ್ನು ಸ್ಥಾಪಿಸಿದ ಬಳಿಕ, ಪ್ರತಿಯೊಬ್ಬ ವ್ಯಕ್ತಿಯು ಆತನ ಹೃದಯದಲ್ಲಿ ಉಳಿದಂಥವನಾಗಿದ್ದನು. ಆತನು ಥೆಸಲೋನಿಕಕ್ಕೆ ಬಂದು ಅವರನ್ನು ಖುದ್ದಾಗಿ ಭೇಟಿಯಾಗಬೇಕೆಂಬ ತನ್ನ ಬಯಕೆಯ ಕುರಿತು ಥೆಸಲೋನಿಕದವರಿಗೆ ಜ್ಞಾಪಕ ಪಡಿಸಿದಾಗ, ಒಬ್ಬನು ಜೊತೆಯ ಕ್ರೈಸ್ತರೊಂದಿಗೆ ಆನಂದಿಸುವ ಗಮನಾರ್ಹವಾದ ಸಂಬಂಧವನ್ನು ಆತನ ಮಾತುಗಳಲ್ಲಿ ಕಾಣುತ್ತೇವೆ.

*ಕ್ರೈಸ್ತರು ಒಟ್ಟಿಗೆ ಇರುವದಕ್ಕೆ ಹಂಬಲಿಸುತ್ತಾರೆ.* ಪೌಲನು ನಿರಂತರವಾಗಿ ತನ್ನ ಸಹೋದರರರನ್ನು ನೆನಪಿಸಿಕೊಳ್ಳುತ್ತಲೇ ಇದ್ದನು. ಆತನು ದೇಹದಿಂದ ಅವರ ಮಧ್ಯದಲ್ಲಿ ಇಲ್ಲದಿದ್ದಾಗ್ಯೂ, ಅವರು ಆತನ ಆತ್ಮದಲ್ಲಿ ಸ್ಪಷ್ಟವಾಗಿ ಹಾಜರಿದ್ದರು. ದೈಹಿಕವಾಗಿ ಒಬ್ಬರಿಂದೊಬ್ಬರು ಅಗಲಿರುವದು ಅವರಿಗೆ ವೇದನೆಯನ್ನುಂಟು ಮಾಡಿತ್ತು. ಪೌಲನು ಬಳಸಿದ, ἀπορφανίζω (*aporphanizō*) ಎಂಬ ಪದವು, "ದಿಂದ ಅಗಲು" ಅಥವಾ "ಅನಾಥನಾಗು" ಎಂದರ್ಥವನ್ನು ಕೊಡುತ್ತದೆ. ಪೌಲನು ಯಾವದೋ ಒಂದು ಕಾರಣಕ್ಕಾಗಿ ಅವರಿಂದ ಅಗಲಿಸಲ್ಪಟ್ಟಾಗ, ಆತನ ಹೃದಯವು ಅದಕ್ಕೆ ಒಬ್ಬ ತಂದೆ ಅಥವಾ ತಾಯಿಯಿಂದ ಅವರ ಮಗುವನ್ನು ತೆಗೆದುಕೊಂಡು ಬಿಟ್ಟರೆ ಹೇಗೆ ಪ್ರತಿಕ್ರಿಯಿಸುವರೋ ಆ ರೀತಿಯಲ್ಲಿಯೇ ಪ್ರತಿಕ್ರಿಯಿಸಿತ್ತು.

ಪೌಲನು ಅವರನ್ನು ನೋಡುವದಕ್ಕೆ ಹೆಚ್ಚು ಸಾರಿ ಬಂದು ಹೋಗಿರುತ್ತಿದ್ದನು, ಆದರೆ ಸೈತಾನನು ಅಭ್ಯಂತರವನ್ನುಂಟು ಮಾಡಿದ್ದನು. ಇಲ್ಲಿ, ಪೌಲನು ಬರದಂತೆ ತನಗೆ ಅಭ್ಯಂತರವಾಗಿದ್ದ ಯೆಹೂದ್ಯರ ವಿರೋಧವನ್ನು ಸೂಚಿಸಿ ಹೇಳುತ್ತಿರಬಹುದು, ಅಥವಾ ಬೇರೆ ಇನ್ನಾವದೋ ಅಡೆತಡೆಯ ಕುರಿತು ಮಾತಾಡುತ್ತಿರಬಹುದಾಗಿದೆ. ಒಂದಂತೂ ನಿಶ್ಚಯವಾದದ್ದು: ರಾಜ್ಯದ ಕೆಲಸವನ್ನು ಮಾಡದಂತೆ ದೇವರ ಸಂದೇಶಕರಿಗೆ

ಅಭ್ಯಂತರವನ್ನುಂಟು ಮಾಡುವ ಯಾವದೇ ಆಗಲಿ ಅದನ್ನು ಸೈತಾನನ ಕೆಲಸವೆಂದು ಪರಿಗಣಿಸತಕ್ಕದ್ದು (ಲೂಕ 22:3; ಅಪೊಸ್ತಲರ ಕೃತ್ಯಗಳು 5:3).

*ಒಬ್ಬ ಕ್ರೈಸ್ತನು ತನ್ನ ಅತ್ಯಂಥ ದೊಡ್ಡ ಸಂತೋಷವನ್ನು ಬೇರೊಬ್ಬ ಕ್ರೈಸ್ತನಲ್ಲಿರುವದಾಗಿ ಕಂಡುಕೊಳ್ಳುವನು.* ಥೆಸಲೋನಿಕದವರು ಪೌಲನ ಸಂತೋಷ, ಭರವಸ, ಮತ್ತು ಜಯಮಾಲೆ ಆಗಿದ್ದರು. ಆತನು ಅವರನ್ನು ಕ್ರಿಸ್ತನ ಬಳಿಗೆ ನಡಿಸಿದನು, ಮತ್ತು ಆತನು ಅವರನ್ನು ಕ್ರಿಸ್ತನಂಬಿಕೆಯಲ್ಲಿ ತನ್ನ ಮಕ್ಕಳೆಂದು ಕಂಡನು. ಆತನು ಅವರಿಗೋಸ್ಕರ ಬದುಕಿದನು, ಅವರಲ್ಲಿಯೇ ತನ್ನ ಅತ್ಯಂಥ ದೊಡ್ಡ ಸಂತೋಷವನ್ನು ಕಂಡುಕೊಂಡನು, ಮತ್ತು ಅವರ ನಂಬಿಗಸ್ತಿಕೆಯನ್ನು ತನ್ನ ಜೀವಿತದ ಜಯಮಾಲೆಯಾಗಿ (ಕಿರೀಟ) ಪರಿಗಣಿಸಿದನು.

ತಂದೆತಾಯಿಗಳಿಗೆ ಮಕ್ಕಳು ಹೇಗೋ ಹಾಗೆಯೇ ಥೆಸಲೋನಿಕದವರು ಬಹಳ ಮಟ್ಟಿಗೆ ಪೌಲನ ಮಕ್ಕಳಂತಿದ್ದರು. ಬೇರೆ ಯಾವದಕ್ಕಿಂತಲೂ ಅಧಿಕವಾಗಿ, ಅವರು ರಕ್ಷಿಸಲ್ಪಟ್ಟವರಾಗಿ ಮಹಿಮೆಯೊಳಗೆ ಸ್ವಾಗತಿಸಲ್ಪಡುವದನ್ನು ಕಾಣಬೇಕೆಂದು ಅಪೇಕ್ಷಿಸಿದನು. ಬೇರೆ ಯಾವದಕ್ಕಿಂತಲೂ ಅಧಿಕವಾಗಿ, ನಮ್ಮ ಮಕ್ಕಳು ಸಿದ್ಧರಾಗಿ ಯೆಸುವಿನ ಪುನರಾಗಮನಕ್ಕೋಸ್ಕರ ಎದುರು ನೋಡುವವರಾಗಿರಬೇಕೆಂಬುದನ್ನು ನಾವು ಬಯಸುತ್ತೇವೆ.

*ನಾವು ಒಬ್ಬರನ್ನೊಬ್ಬರು ಕರ್ತನ ಬರೋಣಕ್ಕೋಸ್ಕರ ಸಿದ್ಧಗೊಳಿಸುತ್ತಿದ್ದೇವೆ.* ಕರ್ತನು ಹಿಂದಿರುಗಿ ಬರುವಾಗ ಥೆಸಲೋನಿಕದವರು ಆತನ ನಂಬಿಗಸ್ತ ಜನರೆಂದು ಅಂಗೀಕರಿಸಲ್ಪಡಬೇಕೆಂಬುದು ಪೌಲನಿಗಿದ್ದ ಒಂದು ಆಳವಾದ ಹಂಬಲಿಕೆಯಾಗಿತ್ತು. ಒಬ್ಬನನ್ನು ಆತನ ಭೂಲೋಕದ ಸಂಬಂಧಗಳೊಂದಿಗಿರುವ ಬಂಧಕ್ಕಿಂತಲೂ ಪೌಲನು ಮತ್ತು ಈ ಸಹೋದರರ ನಡುವೆ ಇದ್ದ ಬಂಧವು ಹೆಚ್ಚು ಬಲವಾದ್ದು ಮತ್ತು ಹೆಚ್ಚು ವೈಯಕ್ತಿಕವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇರುವದಿಲ್ಲ. ಆತನು ಅವರೊಂದಿಗೆ ಹೊಂದಿದ್ದ ಸಂಬಂಧವನ್ನು ಕುರಿತು ಯೋಚಿಸುವಾಗ, ಯೇಸುವಿನ ಕುರಿತಾಗಿ ಮತ್ತಾಯನು ಹೇಳಿದ ಮಾತುಗಳ ಕಡೆಗೆ ನಮ್ಮ ಮನಸ್ಸುಗಳು ಸಾಗುತ್ತವೆ: “ಶಿಷ್ಯರ ಕಡೆಗೆ ಕೈ ತೋರಿಸಿ - ಇಗೋ, ನನ್ನ ತಾಯಿ, ನನ್ನ ಸಹೋದರರು” (ಮತ್ತಾಯ 12:49). ಥೆಸಲೋನಿಕದ ಸಹೋದರ ಮತ್ತು ಸಹೋದರಿಯರನ್ನು ಸಜ್ಜುಗೊಳಿಸಿ ಕರ್ತನ ಪುನರಾಗಮನಕ್ಕೋಸ್ಕರ ಅವರನ್ನು ಸಿದ್ಧಗೊಂಡವರನ್ನಾಗಿಸಲು ಸಹಾಯವನ್ನು ಒದಗಿಸುವದಕ್ಕೆ ಆತನು ಅವರಿಗಾಗಿ ಏನು ಬೇಕಾದರೂ ಮಾಡುವವನಾಗಿದ್ದನು.

ಪೌಲನು ತೋರಿಸಿದ ರೀತಿಯಲ್ಲಿಯೇ ಬೇರೆಯವರ ಬಗ್ಗೆ ಕಳಕಳಿಯನ್ನು ತೋರಿಸುವದು ಒಂದು ಅದ್ಭುತವಾದ ಕಾರ್ಯವಾಗಿರುತ್ತದೆ. ಒಬ್ಬ ಕ್ರೈಸ್ತನಾಗಿರುವದೆಂದರೆ ನೀವು ಬೇರೆ ಕ್ರೈಸ್ತರ ಬಗ್ಗೆ ಕಾಳಜಿ ಹೊಂದಿರುವಿರಿ ಮತ್ತು ಬೇರೆ ಕ್ರೈಸ್ತರು ನಿನ್ನ ಬಗ್ಗೆ ಕಾಳಜಿ ಹೊಂದಿರುವದು ಎಂದಾಗಿರುತ್ತದೆ. ನಾವು ಇಟ್ಟುಕೊಳ್ಳಬಹುದಾದ ಎಲ್ಲಾ ಸಂಬಂಧಗಳಲ್ಲಿಯೂ ಅತ್ಯಂಥ ದೊಡ್ಡದಾದ ಸಂಬಂಧವೆಂದರೆ ಸಭೆಯಲ್ಲಿನ ನಮ್ಮ ಸಹೋದರರೊಂದಿಗೆ ನಮಗಿರುವ ಸಂಬಂಧವೇ. EC

## ಅಡಿಟಿಪ್ಪಣಿಗಳು

[1]J. E. Frame, *A Critical and Exegetical Commentary on the Epistles of St. Paul to the Thessalonians*, The International Critical Commentary (New York: Charles Scribner's Sons, 1912; reprint, Edinburgh: T. & T. Clark, 1988), 92. [2]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 782. [3]David J. Williams, *1 and 2 Thessalonians*, New International Biblical Commentary: New Testament Series, vol. 12 (Peabody, Mass.: Hendrickson Publishers, 1992), 37. [4]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 16. [5]Bauer, 256. [6]Robertson, 16. [7]I. Howard Marshall, *1 and 2 Thessalonians*, New Century Bible Commentary (Grand Rapids, Mich.: Wm. B. Eerdmans Publishing Co., 1983), 67. [8]Ibid., 68–69. [9]ವಚನ 6b, "ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ," ಎಂಬುದು ಗ್ರೀಕ್ ವಾಕ್ಯಗಳಲ್ಲಿ 7aನೇ ವಚನವಾಗಿ ಇರುತ್ತದೆ. [10]C. G. Wilke and Wilibald Grimm, *A Greek-English Lexicon of the New Testament*, trans. and rev. Joseph H. Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 279.

[11]Marshall, 70–71. [12]F. F. Bruce, *1 & 2 Thessalonians*, Word Biblical Commentary, vol. 45 (Waco, Tex.: Word Books, 1982), 32. [13]Robertson, 19. [14]Marshall, 72. [15]Frame, 103. [16]Leon Morris, *The First and Second Epistles to the Thessalonians*, The New International Commentary on the New Testament (Grand Rapids, Mich.: Wm. B. Eerdmans Publishing Co., 1959), 84. [17]Williams, 51. [18]Marshall, 77. [19]Morris, 89. [20]See Henry Alford, *The Greek Testament*, rev. Everett F. Harrison (Chicago: Moody Press, 1958), 3:260–61.

[21]Robertson, 22. [22]Frame, 114–15. [23]Robertson, 23. [24]Ibid., 24. [25]Williams, 55. [26]Bruce, 57.